ಸಂಪುಟ: 05 ಸಂಚಿಕೆ: 290 ಪುಟಗಳು: 08 ಶನಿವಾರ 03 ಜನವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ನಮ್ಮ ಜೀವನವನ್ನೇ ಬದಲಾಯಿಸಬಲ್ಲ ಎಲ್ಲಾ ಸಾಧ್ಯತೆಗಳನ್ನು ಹೊಂದಿದ ಒಬ್ಬ ವ್ಯಕ್ತಿಯನ್ನು ಕಾಣಲು ದೂರ ಹೋಗಬೇಕಿಲ್ಲ. ಕನ್ನಡಿ ಮುಂದೆ ನಿಂತರೆ ಸಾಕು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕರ್ನಾಟಕ ಸರ್ಕಾರದ ಆಂತರಿಕ ಸಮೀಕ್ಷೆಯಲ್ಲಿ ಅಚ್ಚರಿಯ ಫಲಿತಾಂಶ

• ಉದಯವಾಹಿನಿ, ಬೆಂಗಳೂರು

ಭಾರತದ ಚುನಾವಣಾ ವ್ಯವಸ್ಥೆಯಲ್ಲಿ ಬಳಸಿಕೊಳ್ಳಲಾಗುವ ಇವಿಎಂ ಮೇಲಿನ ವಿಶ್ವಾಸಾರ್ಹತೆಯ ಬಗ್ಗೆ ಸಮೀಕ್ಷೆಯೊಂದು ಹೊರಬಿದ್ದಿದೆ. ಈ ಸಮೀಕ್ಷೆಯು ಕೇಂದ್ರ ಚುನಾವಣಾ ಆಯೋಗದ ಪರವಾಗಿ ಇರುವುದು ಗಮನಿಸಬೇಕಾದ ವಿಚಾರ. ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಇಂಡಿಯಾ ಮೈತ್ರಿಕೂಟ ಅದರಲ್ಲೂ ಪ್ರಮುಖವಾಗಿ, ಕಾಂಗ್ರೆಸ್ ಪಾರ್ಟಿಗೆ, ಸಮೀಕ್ಷೆಯ ಮೂಲಕ ಜನರು ಕಪಾಳಮೋಕ್ಷ ಮಾಡಿದ್ದಾರೆ ಎಂದು ಬಿಜೆಪಿ ವ್ಯಂಗ್ಯವಾಡಿದೆ. ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಜನರು, ದೇಶದ ಈಗಿನ ಚುನಾವಣಾ ಪದ್ಧತಿ ಸರಿಯಾಗಿಯೇ ಇದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ರಾಹುಲ್ ಗಾಂಧಿಯವರು ಇವಿಎಂ, ಮತಗಳ್ಳತನ ಮತ್ತು ಕೇಂದ್ರ ಚುನಾವಣಾ ಆಯೋಗದ ವಿರುದ್ಧ ದೊಡ್ಡ ಮಟ್ಟಿನ ಅಭಿಯಾನವನ್ನು ನಡೆಸಿದ್ದರು. ಕರ್ನಾಟಕದ ಮಹದೇವಪುರ ಮತ್ತು ಆಳಂದದಲ್ಲೂ ಮತಗಳ್ಳತನ ನಡೆದಿದೆ ಎಂದು ಪಿಪಿಟಿ ಪ್ರೆಸೆಂಟೇಶನ್ ಮೂಲಕ ಸುದ್ದಿಗೋಷ್ಠಿಯನ್ನು ನಡೆಸಿದ್ದರು.

## ಹೊಸ ವರ್ಷಕ್ಕೆ ಹೊಸ ಸಂಕಲ್ಪ ಮುಖ್ಯಮಂತ್ರಿ ಯಾರೆಂದು ಕೇಳಂಗಿಲ್ಲಪ್ಪ

• ಉದಯವಾಹಿನಿ, ಬೆಂಗಳೂರು

2025ರ ಡಿ.31ರ ಮಧ್ಯರಾತ್ರಿ 12 ಗಂಟೆಗೆ ಕರ್ನಾಟಕ ಕಾಂಗ್ರೆಸ್ ಕಚೇರಿಯಲ್ಲಿ ಒಂದು ರೀತಿಯ ನಿರಾಳ ಭಾವ ಮನೆ ಮಾಡಿತ್ತು. ಅಧಿಕಾರದ ಒಂದು ಸುದೀರ್ಘ ಯುದ್ಧವನ್ನು ನೋಡಿದ್ದ ಕಾಂಗ್ರೆಸ್ ಕಚೇರಿ, ಹೊಸ ವರ್ಷದಲ್ಲಿ ಕುರ್ಚಿ ಸಮರದ ಶಾಖ ಎದುರಿಸದಿರುವ ತೀರ್ಮಾನ ಮಾಡಿದೆ. ಹೊಸ ವರ್ಷಕ್ಕೆ ಕಾಲಿಡುತ್ತಿದ್ದಂತೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಡುವಿನ ಕುರ್ಚಿ ಕದನ ತಣ್ಣಗಾಗಿದ್ದು, ಇದರಿಂದ ಕರ್ನಾಟಕ ಕಾಂಗ್ರೆಸ್‌ನಲ್ಲಿ ನಿರಾಳ ಭಾವನೆ ಜೊತೆಯಲ್ಲಿ ಹೊಸ ಹುರುಪು ಕೂಡ ಕಂಡುಬಂದಿದೆ. 2026ರಲ್ಲಿ ಸುಗಮ ಆಡಳಿತದ ಭರವಸೆಯಲ್ಲಿರುವ ಕಾಂಗ್ರೆಸ್, ರಾಜ್ಯದ ಜನತೆಗೆ ಸ್ಥಿರ ಅಭಿವೃದ್ಧಿಯ ಭರವಸೆಗಳನ್ನು ನೀಡಿದೆ. ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಕರ್ನಾಟಕ ಕಾಂಗ್ರೆಸ್, 2026ರ ಹೊಸ ವರ್ಷದಲ್ಲಿ ಏಕತೆ ಮತ್ತು ಜನಸ್ನೇಹಿ ಆಡಳಿತದ ವಾಗ್ದಾನದೊಂದಿಗೆ ರಾಜ್ಯ ಸರ್ಕಾರ ಹೆಜ್ಜೆ ಹಾಕಲಿದೆ. ಕರ್ನಾಟಕ ಕಾಂಗ್ರೆಸ್ ಪ್ರಗತಿ, ನ್ಯಾಯ ಮತ್ತು ಘನತೆಗೆ ಬದ್ಧವಾಗಿದ್ದು, ಪ್ರತಿಯೊಬ್ಬ ಕನ್ನಡಿಗನಿಗೂ ಬಲವಾದ, ನ್ಯಾಯಯುತ ಭವಿಷ್ಯವನ್ನು ನಿರ್ಮಿಸುತ್ತದೆ ಎಂದು ಭರವಸೆ ನೀಡಿದೆ.

## ಫೆಬ್ರವರಿ 16 ಕ್ಕೆ ಮತ್ತೊಂದು ಸಿದ್ದರಾಮೋತ್ಸವ ಸಂಭ್ರಮ

• ಉದಯವಾಹಿನಿ, ಬೆಂಗಳೂರು

ಜನವರಿ 6 ಕ್ಕೆ ಸಿಎಂ ಸಿದ್ದರಾಮಯ್ಯ ಅವರು ರಾಜ್ಯದ ಸುದೀರ್ಘ ಅವಧಿಯ ಸಿಎಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದ್ದಾರೆ. ಜನವರಿ ತಿಂಗಳಲ್ಲಿ ನಾಯಕತ್ವ ಬದಲಾವಣೆಯ ಗೊಂದಲಕ್ಕೆ ಪೂರ್ಣವಿರಾಮ ಬೀಳಲಿದೆ ಎಂಬ ನಿರೀಕ್ಷೆ ರಾಜಕೀಯ ಪಡಸಾಲೆಯಲ್ಲಿದೆ. ಈ ನಡುವೆ ರಾಜ್ಯ ಸರ್ಕಾರಕ್ಕೆ ಸಾವಿರ ದಿನಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಫೆಬ್ರವರಿ 16 ರಂದು ಸಿದ್ದರಾಮೋತ್ಸವ ಮಾದರಿಯಲ್ಲೇ ಸರ್ಕಾರದ ಸಾವಿರ ದಿನಗಳ ಸಾಧನೆಯ ಸಂಭ್ರಮಾಚರಣೆಯನ್ನು ಹಮ್ಮಿಕೊಳ್ಳಲು ಸಿದ್ಧತೆಗಳು ನಡೆಯುತ್ತಿವೆ ಎಂಬ ಮಾಹಿತಿ ಇದೆ. ಸಿದ್ದರಾಮಯ್ಯ ಅವರಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ವಿಪಕ್ಷದ ನಾಯಕರಾಗಿದ್ದಾಗ ದಾವಣಗೆರೆಯಲ್ಲಿ ಸಿದ್ದರಾಮೋತ್ಸವ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಲಕ್ಷಾಂತರ ಜನರು ಸೇರಿದ್ದರು. ಇದನ್ನು ಅಹಿಂದ ವರ್ಗದ ಶಕ್ತಿ ಪ್ರದರ್ಶನ ಎಂದೇ ಬಿಂಬಿಸಲಾಗಿತ್ತು. ಸಿದ್ದರಾಮಯ್ಯ ಅವರು ಮುಂದಿನ ಸಿಎಂ ಆಗಲಿದ್ದಾರೆ ಎಂದು ಈ ಸಮಾವೇಶ ಸುಳಿವನ್ನು ನೀಡಿತ್ತು. ಇದೇ ಮಾದರಿಯಲ್ಲಿ ಸರ್ಕಾರದ ಸಾಧನೆಗಳನ್ನು ಜನರ ಮುಂದಿಡುವ ಹೆಸರಿನಲ್ಲಿ ಸಾವಿರ ದಿನಗಳ ಸಂಭ್ರಮವನ್ನು ಆಚರಿಸಲು ಸಿದ್ದರಾಮಯ್ಯ ಆಪ್ತರು ಮುಂದಾಗಿದ್ದಾರೆ.

## ಏಪ್ರಿಲ್ 23, 24ಕ್ಕೆ ಸಿಇಟಿ: ಜನವರಿ 17ರಿಂದಲೇ ನೋಂದಣಿ ಆರಂಭ

• ಉದಯವಾಹಿನಿ, ಬೆಂಗಳೂರು

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಏಪ್ರಿಲ್ 23 ಮತ್ತು 24ರಂದು ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) ನಡೆಸಲಿದ್ದು, ಜನವರಿ 17ರಿಂದ ಆನ್ ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಅವರು ಶುಕ್ರವಾರ, ಸಿಇಟಿ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) 2026ರಲ್ಲಿ ನಡೆಸಲಿರುವ ಎಲ್ಲಾ ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದರು. 'ಈ ಬಾರಿಯೂ ಒಟಿಪಿ ಆಧಾರಿತ ಅರ್ಜಿ ಸಲ್ಲಿಕೆ ವ್ಯವಸ್ಥೆ ಇರಲಿದೆ. ನೋಂದಣಿ ಮತ್ತು ಲಾಗಿನ್ ನಂತರ ಅಭ್ಯರ್ಥಿಗಳು ಅರ್ಜಿ ವಿವರಗಳ ಜತೆಗೆ ಒಟಿಪಿ ಸಲ್ಲಿಸುವುದು ಕಡ್ಡಾಯ. ಇಲ್ಲವೆ, ಅಭ್ಯರ್ಥಿಯೇ ನೈಜ ಸಮಯದಲ್ಲಿ ತಮ್ಮ ಚಿತ್ರವನ್ನು ಸಲ್ಲಿಸಬೇಕಾಗುತ್ತದೆ. ಪರೀಕ್ಷಾ ಅಕ್ರಮಗಳನ್ನು ತಪ್ಪಿಸಲು ಈ ವ್ಯವಸ್ಥೆಯನ್ನು ಮುಂದುವರೆಸಲಾಗುತ್ತಿದೆ' ಎಂದು ಕೆಇಎ ಮೂಲಗಳು ತಿಳಿಸಿವೆ.



# ಬಳ್ಳಾರಿ ಫೈರಿಂಗ್ ಜಮೀರ್ ವಾರ್ನಿಂಗ್

## ತನಿಖೆ ನಡೆಯುತ್ತಿದೆ, ಯಾರನ್ನೂ ಬಿಡಲ್ಲ

ಗಲಭೆಯ ಬಗ್ಗೆ ತನಿಖೆಗೆ ಸೂಚನೆ ನೀಡಿದ್ದೇನೆ

ಗುಂಡು ಹಾರಿಸಿದ್ದು ಯಾರು ಅನ್ನೋದು ತನಿಖೆಯಿಂದ ಗೊತ್ತಾಗಬೇಕು

ಕಾಂಗ್ರೆಸ್ ವಿರುದ್ಧ ಮುಗಿಬಿದ್ದ ಕಮಲ ಪಡೆ




**ಬಳ್ಳಾರಿ ಘರ್ಷಣೆ: ಗನ್ ಮ್ಯಾನ್‌ಗಳ ಬಳಿಯ ಬಂದೂಕುಗಳು ವಶಕ್ಕೆ**

• ಉದಯವಾಹಿನಿ ಬೆಂಗಳೂರು

ಬಳ್ಳಾರಿ ಗಲಭೆ ಪ್ರಕರಣವನ್ನು ತನಿಖೆ ಮಾಡುವುದಕ್ಕೆ ಹೇಳಿದ್ದೇನೆ. ಯಾರ ಗನ್ ನಿಂದ ಬುಲೆಟ್ ಬಂದಿದೆ ಅನ್ನೋದು ಗೊತ್ತಾಗಬೇಕಲ್ವಾ... ಬಿಜೆಪಿಯವರ ಗನ್‌ನಿಂದಲೋ ಅಥವಾ ಕಾಂಗ್ರೆಸ್‌ನವರ ಗನ್‌ನಿಂದ ಬಂದಿದ್ಯಾ ಎನ್ನುವುದು ಗೊತ್ತಾಗಬೇಕು. ಅದಕ್ಕೋಸ್ಕರ ತನಿಖೆ ಮಾಡಲು ಹೇಳಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಖಾಸಗಿ ಬುಲೆಟ್ ಎಂದು ಎಸ್ ಪಿ ಮಾಹಿತಿ ನೀಡಿರುವ ವಿಚಾರಕ್ಕೆ, ಅವರ ಸೆಕ್ಯುರಿಟಿಗಾಗಿ ಗನ್ ಇಟ್ಟುಕೊಂಡಿದ್ದಾರೆ. ಏರ್‌ನಲ್ಲಿ ಗನ್ ಫೈರ್ ಮಾಡಿದ್ದಾರೆ. ಫೈರ್ ಮಾಡಿರೋದು ಮನುಷ್ಯನಿಗೆ ತಗುಲಿದೆ. ರಾಜಶೇಖರ್ ಎಂಬವರು ಸತ್ತು ಹೋಗಿದ್ದಾರೆ ಎಂದು ಹೇಳಿದರು. ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿ, ಬ್ಯಾನರ್ ಕಟ್ಟುವ ವಿಚಾರಕ್ಕೆ ಗಲಾಟೆ ಆಗಿದೆ. ಫೈರಿಂಗ್ ನಲ್ಲಿ ನಮ್ಮ ಕಾರ್ಯಕರ್ತನ ಪ್ರಾಣ ಹೋಗಿದೆ. ಪೊಲೀಸರು ತನಿಖೆ ಮಾಡ್ತಿದ್ದಾರೆ. ಯಾರು ತಪ್ಪು ಮಾಡಿದ್ದಾರೋ ಅವರ ವಿರುದ್ಧ ಕ್ರಮ ಆಗುತ್ತದೆ. ರಾತ್ರಿ ಒಂದು ಗಂಟೆಗೆ ಪರಿಸ್ಥಿತಿ ತಹಬದಿಗೆ ಬಂದಿದೆ ಎಂದು ತಿಳಿಸಿದರು.

**ನನ್ನ ಮೇಲೂ ಸಿಎಂ ರೇಗಿದ್ರು:** ನಾವು ಸಿಎಂಗೆ ಘಟನೆ ಬಗ್ಗೆ ಮಾಹಿತಿ ನೀಡಿದ್ದೇನೆ. ಸಿಎಂ ಕೂಡ ಬಹಳ ಸಿಟ್ಟು ಮಾಡಿಕೊಂಡಿದ್ದಾರೆ. ಸಣ್ಣ ಘಟನೆ ದೊಡ್ಡದಾಗಿದ್ದೇಕೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನನ್ನ ಮೇಲೂ ಸಿಎಂ ರೇಗಿದ್ರು. ಇದು ಬೇಕಾಗಿರಲಿಲ್ಲ. ಆಗಿ ಹೋಗಿದೆ. ಪೊಲೀಸರು ತನಿಖೆ ಮಾಡಲಿ. ಸಂಜೆ ಕೋಗಿಲು ಪ್ರಕರಣ ಸಂಬಂಧ ಸಭೆ ಇದೆ. ಆ ಮೇಲೆ ನಾನು ಬಳ್ಳಾರಿಗೆ ಹೋಗ್ತೇನೆ. ಸಿಂಪತಿಗಾಗಿ ಬಿಜೆಪಿಯವರು ನೋಡ್ತಿದ್ದಾರೆ. ಅಮಾಯಕ ಯುವಕ ಪ್ರಾಣ ಕಳೆದುಕೊಂಡಿದ್ದಾನೆ. ಅವರ ಮನೆಯವರ ಗತಿ ಏನಾಗಬೇಕು ಎಂದು ಕೇಳಿದರು. ಘಟನೆ ಕುರಿತು ಪ್ರತಿಕ್ರಿಯಿಸಿದ್ದ ಜನಾರ್ದನ ರೆಡ್ಡಿ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಅವರ ಆಪ್ತ ಸತೀಶ್ ರೆಡ್ಡಿ ಹಾಗೂ ಭರತ್ ರೆಡ್ಡಿ ತಂದೆ ನಾರಾ ಸೂರ್ಯನಾರಾಯಣ ರೆಡ್ಡಿ ನನ್ನ ಹತ್ಯೆಗೆ ಸಂಚು ನಡೆಸಿದ್ದಾರೆ. ಬ್ಯಾನರ್ ಗಲಾಟೆ ನೆಪದಲ್ಲಿ ನಮ್ಮ ನಿವಾಸದ ಮುಂದೆ ಗನ್ ಮ್ಯಾನ್‌ಗಳಿಂದ ಗುಂಡಿನ ದಾಳಿ ನಡೆಸಿದ್ದಾರೆ. ಗಂಗಾವತಿಯಿಂದ ಕಾರಿನಲ್ಲಿ ಬಂದು ಇಳಿಯುತ್ತಿದ್ದಂತೆ ಗನ್ ಮ್ಯಾನ್‌ಗಳು ಫೈರಿಂಗ್ ಮಾಡಿದರು ಎಂದು ಹೇಳಿದ್ದರು. ಗುಂಡು ತಗುಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಮೃತಪಟ್ಟಿದ್ದಾರೆ. ಜನಾರ್ದನ ರೆಡ್ಡಿ ಅವರ ಬೆಂಬಲಿಗರ ಕಡೆಯಿಂದ ದಾಳಿ ನಡೆದಿದೆ ಎಂದು ಬಳ್ಳಾರಿಯಲ್ಲಿಂದು ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಆರೋಪಿಸಿದ್ದಾರೆ.

**ಆಗಿದ್ದೇನು :** ಅವಂಬಾವಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ಅವರ ಮನೆ ಬಳಿ ಬ್ಯಾನರ್ ಕಟ್ಟುವ ವಿಷಯಕ್ಕೆ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಮತ್ತು ಜನಾರ್ದನ ರೆಡ್ಡಿ ಬೆಂಬಲಿಗರ ನಡುವೆ ಗುರುವಾರ ರಾತ್ರಿ ಘರ್ಷಣೆ ಸಂಭವಿಸಿದೆ. ಈ ವೇಳೆ ಗುಂಡು ತಗುಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಮೃತಪಟ್ಟಿದ್ದಾರೆ. ಎರಡೂ ಗುಂಪುಗಳಿಂದ ಕಲ್ಲು ತೂರಾಟ ನಡೆದು, ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದರಿಂದ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪೊಲೀಸರೂ ಸೇರಿ ಹಲವರಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ. ಬಳ್ಳಾರಿ ವಲಯ ಐಜಿಪಿ ವರ್ತಿಕಾ ಕಟಿಯಾರ್, ಎಸ್ಪಿ ಜಾಹ್ನವಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪರಿಸ್ಥಿತಿ ಹತೋಟಿಗೆ ಬಂದಿದೆ. ಸದ್ಯ ಯಾವುದೇ ತೊಂದರೆ ಇಲ್ಲ ಎಂದು ಎಸ್ ಪಿ ಮತ್ತು ಐಜಿಪಿ ತಿಳಿಸಿದ್ದಾರೆ.



### ಡೈವರ್ಟ್ ಮಾಡಲು ಈ ಕೆಲಸ

ಅವನ (ಜನಾರ್ದನ ರೆಡ್ಡಿ) ಪ್ರಮುಖ ಮೈನಿಂಗ್ ಪ್ರಕರಣಕ್ಕೆ ಸಂಬಂಧಿಸಿ ಜನವರಿಯಲ್ಲಿ ನಮ್ಮ ಗಡಿಭಾಗ ಒತ್ತುವರಿಯಾಗಿದೆ ಎಂದು ವರದಿಗಳು ಬಂದು ಕೋರ್ಟ್‌ಗೆ ಸಲ್ಲಿಕೆಯಾಗಿದೆ. ಈಗ ಕೋರ್ಟ್ ಗಮನ ಡೈವರ್ಟ್ ಆಗಬೇಕು, ಮಾಧ್ಯಮಗಳಲ್ಲಿ ಅದು ಬರಬಾರದು ಎಂಬ ಉದ್ದೇಶ ಹಾಗೂ ಅದರೊಂದಿಗೆ ವಾಲ್ಮೀಕಿ ಅಜ್ಜನ ಕಾರ್ಯಕ್ರಮ ಆಗಬಾರದೆಂಬ ದುರುದ್ದೇಶ ಇಟ್ಟುಕೊಂಡು ಈ ಘರ್ಷಣೆ ಮಾಡಿದ್ದಾನೆ. ಅವನಿಗೆ ಶಿಕ್ಷೆ ಆಗುವುದು ನಿಜ, ವಾಲ್ಮೀಕಿ ಅಜ್ಜನ ಕಾರ್ಯಕ್ರಮ ಆಗುವುದೂ ನಿಜ ಎಂದು ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು



### ಬುಲೆಟ್ ಪತ್ತೆ

ಹಿಂದೊಮ್ಮೆ ಗಣಿ ದೂಳಿನಿಂದಲೇ ಸುದ್ದಿಯಾಗಿದ್ದ ಬಳ್ಳಾರಿ, ಸದ್ಯ ರಕ್ತ ರಾಜಕೀಯಕ್ಕೆ ಸಾಕ್ಷಿಯಾಗಿದೆ.ಬರೀ ಟ್ವೆಂಟಿ ಬೈ ಟ್ವೆಂಟಿ ಬ್ಯಾನರ್ ಸಲುವಾಗಿ ಶಾಸಕರಾದ ಜನಾರ್ದನ ರೆಡ್ಡಿ ಹಾಗೂ ಭರತ್ ರೆಡ್ಡಿ ಬೆಂಬಲಿಗರ ನಡುವೆ ಗಲಾಟೆ ನಡೆದಿದೆ. ಕಲ್ಲು ತೂರಾಟ, ಖಾರದ ಪುಡಿ ಎರೆಚಾಟ, ದೊಣ್ಣೆಯಿಂದ ಬಡಿದಾಟ ಇಷ್ಟೇ ಅಲ್ಲ, ಗಾಳಿಯಲ್ಲಿ 12ಕ್ಕೂ ಹೆಚ್ಚು ಸುತ್ತು ಫೈರಿಂಗ್ ಮಾಡಲಾಗಿದೆ. ಬಳ್ಳಾರಿಯ ಪರಿಸ್ಥಿತಿ ಅದೆಷ್ಟರ ಮಟ್ಟಿಗೆ ಉದ್ವಿಗ್ನಗೊಂಡಿತ್ತು ಅನ್ನೋದಕ್ಕೆ ಕೆಲ ದೃಶ್ಯಗಳೇ ಸಾಕ್ಷಿಯಾಗಿವೆ. ಇನ್ನು ಇದೇ ವೇಳೆ ಗಾಳಿಯಲ್ಲಿ ಗುಂಡು ಹಾರಿಸಲಾಗಿದ್ದು, ಓರ್ವ ಕಾಂಗ್ರೆಸ್ ಕಾರ್ಯಕರ್ತ ಸಾವನ್ನಪ್ಪಿದ್ದಾನೆ. ಆರಂಭದಲ್ಲಿ ಒಂದು ಬುಲೆಟ್ ಪತ್ತೆಯಾಗಿದ್ದು, ಇದೀಗ ಜನಾರ್ದನ ರೆಡ್ಡಿ ನಿವಾಸದಲ್ಲಿ ಮತ್ತೊಂದು ಬುಲೆಟ್ ಪತ್ತೆಯಾಗಿದೆ.



### ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಇದೀಗ ಅದು ವಿಕೋಪಕ್ಕೆ ಹೋಗಿದೆ. ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ಮೇಲೆ ನಡೆದ ಸರ್ಕಾರಿ ಪ್ರಾಯೋಜಿತ ದಾಳಿಯಾಗಿದೆ ಎಂದು ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣ ಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿಗೆ ಭದ್ರತೆ ನೀಡಬೇಕು. ಸರ್ಕಾರ ಘಟನೆಯ ಹೊಣೆ ಹೊರಬೇಕು ಎಂದು ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದ್ದಾರೆ.


### ದಂಗೆ ಮಾಡಲು ಹೊರಟಿದೆ!

ಬಿಜೆಪಿ ಶಾಸಕ ಸುನೀಲ್ ಕುಮಾರ್ ಪ್ರತಿಕ್ರಿಯೆ ನೀಡಿ, ಶಾಸಕರಿಗೆ ರಕ್ಷಣೆ ಇಲ್ಲದ ಪರಿಸ್ಥಿತಿ ನಿರ್ಮಾಣ ಆಗಿದೆ. ಬಳ್ಳಾರಿಯಲ್ಲಿ ರಿಪಬ್ಲಿಕ್ ಆಗಲು ಬಿಡಲ್ಲ ಎಂದು ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿದ್ದಾಗ ಪಾದಯಾತ್ರೆ ಮಾಡಿದ್ದರು. ಆದರೆ ಇದೀಗ ಗೂಂಡಾ ರಾಜ್ಯ ಮಾಡಲು ಹೊರಟಿದ್ದಾರೆ. ಸರ್ಕಾರ ಕೃಪಾ ಪೋಷಿತ ಗೂಂಡಾ ರಾಜ್ಯ ಮಾಡಲು ಹೊರಟಿದ್ದರೆ. ಕಾಂಗ್ರೆಸ್ ಶಾಸಕರ ಅಣತಿಯಂತೆ ಪೋಲೀಸರು ನಡೆದುಕೊಳ್ಳುತ್ತಿದ್ದಾರೆ. ಇದು ದಂಗೆ ಮಾಡುವ ಹುನ್ನಾರವಾಗಿದೆ. ಬಿಜೆಪಿ ಶಾಸಕ ಸಿಸಿ ಪಾಟೀಲ್ ಮಾತನಾಡಿ, ವಿರೋಧ ಪಕ್ಷದ ಶಾಸಕನ ಮೇಲೆ ಗುಂಡಿನ ದಾಳಿ ಮಾಡುವ ಪ್ರಯತ್ನ ಮೊದಲ ಬಾರಿ ನಡೆದಿದೆ. ಬಿಜೆಪಿಯನ್ನು ಬಳ್ಳಾರಿಯಲ್ಲಿ ಮುಗಿಸುತ್ತೇನೆ ಎಂದು ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಹೇಳಿದ್ದಾರೆ.ರಾಷ್ಟ್ರದಲ್ಲಿ ಕಾಂಗ್ರೆಸ್ ಮುಳುಗಿ ಹೋಗಿದೆ. ಇಂತಹ ಘಟನೆಯಿಂದ ಕರ್ನಾಟಕದಲ್ಲೂ ಕಾಂಗ್ರೆಸ್ ನೆಲೆ ಕಳೆದುಕೊಳ್ಳಲಿದೆ. ನಾವು ಜನಾರ್ದನ ರೆಡ್ಡಿ ಜೊತೆಗೆ ಇದ್ದೇವೆ ಎಂದರು.

> ಬಳ್ಳಾರಿಯಲ್ಲಿ ಜನಾರ್ದನ್ ರೆಡ್ಡಿ ಅವರ ಮನೆ ಮುಂಭಾಗ ನಡೆದ ಗಲಾಟೆಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಮಾಹಿತಿ ಇದೆ. ರಿವಾಲ್ವರ್ ನಿಂದ ಹಾರಿದ ಗುಂಡು ಆತನಿಗೆ ತಗುಲಿದೆ. ಆದರೆ, ಯಾರು ಗುಂಡು ಹಾರಿಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಬೇಕು. ವಾಲ್ಮೀಕಿ ಪುತ್ಥಳಿ ಅನಾವರಣ ಮಾಡಲೂ ಕೂಡ ಈ ರೀತಿ ಗೊಂದಲ ಮಾಡುತ್ತಾರೆಂದರೆ ಅದು ರಾಜಕೀಯ ದುರುದ್ದೇಶ. ಇದನ್ನು ನಾವು ಸಹಿಸುವುದಿಲ್ಲ. ಘಟನೆಯ ಕುರಿತಂತೆ ವರದಿ ಕೇಳಿದ್ದೇನೆ. ವರದಿ ಬಂದ ನಂತರ ಕ್ರಮ ತೆಗೆದುಕೊಳ್ಳುತ್ತೇನೆ.
>
> -ಡಾ.ಜಿ.ಪರಮೇಶ್ವರ್, ಗೃಹ ಸಚಿವ

## ರಾಹುಲ್ ಗಾಂಧಿ ವೋಟ್ ಚೋರಿ ಆರೋಪಕ್ಕೆ ಬಿಜೆಪಿ ತಿರುಗೇಟು

• ಉದಯವಾಹಿನಿ, ಬೆಂಗಳೂರು



ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ 2024ರ ಕುರಿತ ಸಮೀಕ್ಷೆಯೊಂದು ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್‌ಗಳ ಮೇಲೆ ಜನಸಾಮಾನ್ಯರ ವಿಶ್ವಾಸವನ್ನು ಬಲವಾಗಿ ತೋರಿಸಿದೆ. ಈ ಹಿನ್ನೆಲೆಯಲ್ಲಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತಾ ಮಾಡುತ್ತಿದ್ದ ಆರೋಪಗಳಿಗೆ ಬಿಜೆಪಿ ತಿರುಗೇಟು ನೀಡಿದೆ.

**ಸಮೀಕ್ಷಾ ವರದಿ:** ಈ ಸಮೀಕ್ಷೆಯು ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ವಿಭಾಗಗಳ 102 ವಿಧಾನಸಭಾ ಕ್ಷೇತ್ರಗಳಲ್ಲಿ 5,100 ಜನರನ್ನು ಒಳಗೊಂಡಿತ್ತು. ವಿಭಾಗವಾರು ಮಾಹಿತಿ ಪ್ರಕಾರ, ಕಲಬುರಗಿಯಲ್ಲಿ ಇವಿಎಂಗಳು ವಿಶ್ವಾಸಾರ್ಹವಾಗಿವೆ ಎಂದು 83.24% ಜನರು ಒಪ್ಪಿಕೊಂಡಿದ್ದು, 11.24% ಜನರು ಬಲವಾಗಿ ಒಪ್ಪಿಕೊಂಡಿದ್ದಾರೆ. ಮೈಸೂರಿನಲ್ಲಿ 70.67% ಜನರು ಒಪ್ಪಿಕೊಂಡಿದ್ದು, 17.92% ಜನರು ಬಲವಾಗಿ ಒಪ್ಪಿಕೊಂಡಿದ್ದಾರೆ. ಬೆಳಗಾವಿಯಲ್ಲಿ 63.90% ಜನರು ಒಪ್ಪಿಕೊಂಡಿದ್ದು, 21.43% ಜನರು ಬಲವಾಗಿ ಒಪ್ಪಿಕೊಂಡಿದ್ದಾರೆ. ಬೆಂಗಳೂರು ವಿಭಾಗದಲ್ಲಿ ಬಲವಾಗಿ ಒಪ್ಪಿಕೊಂಡವರ ಪ್ರಮಾಣ ಅತಿ ಕಡಿಮೆಯಾಗಿದ್ದರೂ (9.28%), 63.67% ಜನರು ಒಪ್ಪಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ತಟಸ್ಥ ಅಭಿಪ್ರಾಯಗಳು 15.67% ರಷ್ಟಿದ್ದು, ಇದು ಇತರ ವಿಭಾಗಗಳಿಗಿಂತ ಗಣನೀಯವಾಗಿ ಹೆಚ್ಚಾಗಿದೆ.

**ಸಮೀಕ್ಷೆಯಲ್ಲಿ ಇವಿಎಂಗೆ ಬಹುಮತ**

**ಬಿಜೆಪಿ ತಿರುಗೇಟು:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪದೇ ಪದೇ ಬಿಜೆಪಿ ಮತ್ತು ಭಾರತ ಚುನಾವಣಾ ಆಯೋಗದ ಮೇಲೆ ಇವಿಎಂಗಳನ್ನು ತಿರುಚಿದ ಮತ್ತು ಚುನಾವಣೆಯಲ್ಲಿ 'ಮತ ಕಳ್ಳತನ' ನಡೆದಿದೆ ಎಂದು ಆರೋಪಿಸುತ್ತಾ ಬಂದಿದ್ದಾರೆ. ಈ ಸಮೀಕ್ಷೆಯ ಫಲಿತಾಂಶಗಳಿಗೆ ಪ್ರತಿಕ್ರಿಯಿಸಿದ ಬಿಜೆಪಿ ಕರ್ನಾಟಕದ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ವರ್ಷಗಳಿಂದ, ರಾಹುಲ್ ಗಾಂಧಿ ದೇಶಾದ್ಯಂತ ಒಂದೇ ಕಥೆಯನ್ನು ಹೇಳುತ್ತಾ ಬಂದಿದ್ದಾರೆ: ಭಾರತದ ಪ್ರಜಾಪ್ರಭುತ್ವವು ಅಪಾಯದಲ್ಲಿದೆ. ಇವಿಎಂಗಳು ನಂಬಲರ್ಹವಲ್ಲ. ನಮ್ಮ ಸಂಸ್ಥೆಗಳನ್ನು ನಂಬಲಾಗುವುದಿಲ್ಲ. ಆದರೆ ಕರ್ನಾಟಕವು ಈಗ ಸಂಪೂರ್ಣ ವಿಭಿನ್ನ ಕಥೆಯನ್ನು ಹೇಳಿದೆ'' ಎಂದಿದ್ದಾರೆ.

ಬಿಜೆಪಿ ಪ್ರಕಾರ, ಈ ರಾಜ್ಯವ್ಯಾಪಿ ಸಮೀಕ್ಷೆಯು ಜನರು ಚುನಾವಣೆಗಳನ್ನು ನಂಬುತ್ತಾರೆ. ಜನರು ಇವಿಎಂಗಳನ್ನು ನಂಬುತ್ತಾರೆ ಮತ್ತು ಜನರು ಭಾರತದ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ನಂಬುತ್ತಾರೆ ಎಂದು ತೋರಿಸಿದೆ. ಈ ಫಲಿತಾಂಶಗಳನ್ನು ಕಾಂಗ್ರೆಸ್‌ಗೆ ಮುಖಕ್ಕೆ ಹೊಡೆದಂತಿದೆ ಎಂದು ಬಿಜೆಪಿ ಹೇಳಿದೆ.

ಬಿಜೆಪಿಯ ಈ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ, ಈ ಸಮೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದು ಚುನಾವಣಾ ಆಯೋಗದ ಸಮೀಕ್ಷೆಯಾಗಿದ್ದು, ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ ಅವರ ಮೂಲಕ ನಡೆಸಲಾಗಿದೆ ಮತ್ತು ಸರ್ಕಾರಿ ಏಜೆನ್ಸಿ ಕೇವಲ ಅದನ್ನು ಪ್ರಕಟಿಸಿದೆ ಎಂದು ಅವರು ತಿಳಿಸಿದ್ದಾರೆ.

## ಸರಳವಾಗಿ ನಡೆದ ಉದಯವಾಹಿನಿ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ

### ● ರಾಜ್ಯದ್ಯಂತ ಹೆಸರು ಮಾಡಿ ಪತ್ರಿಕೆಗೆ ಅಪಾರ ಅಭಿಮಾನ ವೃಂದವನ್ನು ಸಂಪಾದಿಸಿ ಶ್ರಮವಹಿಸಿದ ಪತ್ರಿಕೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ದಿನಪತ್ರಿಕೆ ಪ್ರಾರಂಭವಾಗಿ ಐದು ವರ್ಷ ಕಳೆದಿದ್ದು 6ನೇ ವರ್ಷಕ್ಕೆ ಕಾಲಿಡುತ್ತಿರುವ ಈ ವರ್ಷ ಅತ್ಯಂತ ಹೆಮ್ಮೆಯ ದಿನಗಳಾಗಿದ್ದು ಪತ್ರಿಕೆ ಪ್ರಾರಂಭವಾದ ಹಲವಾರು ದಿನಗಳಲ್ಲಿ ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಿಂದ ಹಿಡಿದು ಎಲ್ಲಾ ಜಿಲ್ಲೆಗಳು ತಾಲ್ಲೂಕುಗಳು ಗ್ರಾಮಾಂತರ ಮಟ್ಟದ ಸುದ್ದಿಗಳನ್ನು ಬಿತ್ತರಿಸುತ್ತಾ ಅತ್ಯಲ್ಪ ದಿನಗಳಲ್ಲಿ ರಾಜ್ಯದ್ಯಂತ ಹೆಸರು ಮಾಡಿ ಪತ್ರಿಕೆಗೆ ಅಪಾರ ಅಭಿಮಾನ ವೃಂದವನ್ನು ಸಂಪಾದಿಸಿ ಶ್ರಮವಹಿಸಿದ ಪತ್ರಿಕೆಯ ಪ್ರಧಾನ ಸಂಪಾದಕ ಟಿ ಹೊಂಬೇಗೌಡರ ಶ್ರಮ ನಿಜಕ್ಕೂ ಮೆಚ್ಚುವಂಥದ್ದು

ಉಪಸಂಪಾಧಕರಾದ ಲಲಿತಾ ಮೇಡಂ ರವರ ಕಚೇರಿ ನಿರ್ವಹಣೆ. ಸಹಕಾರದಲ್ಲಿ ರಾಜ್ಯದ ಹಲವಾರು ಜಿಲ್ಲೆಗಳನ್ನು ಸಂಚರಿಸಿ ಪತ್ರಿಕೆಗೆ ವರದಿಗಾರರನ್ನು ನೇಮಿಸಿ ಇವರುಗಳ ಮುಖಾಂತರ ಪ್ರಾಮಾಣಿಕ ಪತ್ರಿಕೋದ್ಯಮದ ಮುಖಾಂತರ ಸಮಾಜದಲ್ಲಿರುವ ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿದ್ದ ಸಂಘ ಸಂಸ್ಥೆಗಳ ಕಾರ್ಮಿಕರನ್ನು ಗುರುತಿಸಿ ಇವರುಗಳ ಬಗ್ಗೆ ಸದಾ ಸುದ್ದಿ ಬಿತ್ತರಿಸುತ್ತಾ ಸರ್ಕಾರಕ್ಕೆ ಬಿಸಿ ಮುಟ್ಟಿಸುವಂತಹ ಕೆಲಸ ಮಾಡಿದ್ದು ನಿಜವಾಗಿಯೂ ಸಹ ಹೆಮ್ಮೆಯ ಸಂಗತಿ ಅಸಂಘಟಿತ ಕಾರ್ಮಿಕರಾಗಿರುವ 10 ಲಕ್ಷಕ್ಕೂ ಹೆಚ್ಚು ಹೊಲಿಗೆ ವೃತ್ತಿ ದಾರರು. ಹಾಗೂ 20,000ಕ್ಕೂ ಹೆಚ್ಚು ಪಡಿತರ ವಿತರಕರು ಹೀಗೆ ಹಲವಾರು ಕಾರ್ಮಿಕರ ಬಗ್ಗೆ ಸುಧೀರ್ಘವಾಗಿ ಸುದ್ದಿ ಬಿತ್ತರಿಸುತ್ತಾ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳ ಗಮನಕ್ಕೆ ಪತ್ರಿಕೆಯ ಮುಖಾಂತರ ಕಣ್ತೆರೆಸಿದ್ದಂತು ನಿಜ!!





### ಉದಯ ಪ್ರಭ ಮತ್ತು ಉದಯವಾಯ್ಸ್ ಪತ್ರಿಕೆ ಶೀಘ್ರದಲ್ಲಿ ಪ್ರಾರಂಭ

ಉದಯವಾಹಿನಿ ಪತ್ರಿಕೆ ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ ಪ್ರಾರಂಭವಾದ ಕೆಲವೇ ದಿನಗಳಲ್ಲಿ ನಾಡಿನ ಪ್ರತಿಯೊಬ್ಬ ಕನ್ನಡಿಗರಿಗೂ ತಲುಪಿದ್ದು ಯಶಸ್ಸಿನ ಸಂಗತಿ ಇದರೊಂದಿಗೆ ಕೆಲವೇ ದಿನಗಳಲ್ಲಿ ರಾಜ್ಯಮಟ್ಟದ ಸಂಜೆಪತ್ರಿಕೆ ಉದಯ ಪ್ರಭ ಮತ್ತು ಉದಯ ವಾಯ್ಸ್ ಇಂಗ್ಲೀಷ್ ದಿನಪತ್ರಿಕೆ ಹೊರ ಬರುತ್ತಿದ್ದು ರಾಜ್ಯದ ಉದಯವಾಹಿನಿನೊಂದಿಗೆ ಟಿ ಹೊಂಬೇಗೌಡರು ಮತ್ತು ಮೇಡಂ ಲಲಿತ ಹೊಂಬೇಗೌಡರ ನೇತೃತ್ವದಲ್ಲಿ ರಾಜ್ಯದ ಇನ್ನೆರಡು ಪತ್ರಿಕೆಗಳು ಹೊರ ಬರುತ್ತಿರುವುದು ಉದಯವಾಹಿನಿ ಸಂಸ್ಥೆಯ ಹೆಮ್ಮೆಯ ಸಂಗತಿಯಾಗಿದೆ

ಇಂತಹ ನಮ್ಮ ಪತ್ರಿಕೆಯ ವಿಚಾರದಲ್ಲಿ ಬರುವ ಜನವರಿ 31ರಂದು ತುಮಕೂರು ಜಿಲ್ಲೆಯ ತಿಪಟೂರು ತಾಲೂಕು ಶ್ರೀರಂಗನಹಳ್ಳಿ ಶನೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ನಡೆಯಲಿರುವ ಅದ್ದೂರಿ ಜಾತ್ರಾ ಮಹೋತ್ಸವದಲ್ಲಿ ನಾಡಿನ ಖ್ಯಾತ ಮಠಾಧಿಪತಿಗಳು ಕರ್ನಾಟಕ ರಾಜ್ಯ ಸರ್ಕಾರದ ಸಚಿವರು ಶಾಸಕರು ಸೇರಿದಂತೆ ರಾಜಕೀಯ ಮುಖಂಡರುಗಳು ಚಲನಚಿತ್ರ ನಟರು ಹಾಗೂ ಕಿರುತೆರೆ ನಟರ ಸಮ್ಮುಖದಲ್ಲಿ ಉದಯವಾಹಿನಿ ಪತ್ರಿಕೆಯ ಕ್ಯಾಲೆಂಡರ್ ಮತ್ತು ಡೈರಿ ಉದ್ಘಾಟನಾ ಸಮಾರಂಭ ಅದ್ದೂರಿಯಾಗಿ ನಡೆಯಲಿದೆ.

**ಕಚೇರಿಯಲ್ಲಿ ನಡೆದ ಸರಳ ಸಮಾರಂಭ**

ತನ್ನ ಪತ್ರಿಕೆಯ ಯಶಸ್ವಿಗೆ ಸದಾ ಶ್ರಮಿಸುವ ನಮ್ಮ ಪತ್ರಿಕಾ ಬಳಗವೇ ಮುಖ್ಯವೆಂದು ಟಿ ಹೊಂಬೇಗೌಡರು ಹೊಸ ವರ್ಷದ ದಿನದಂದು ಮೊಟ್ಟ ಮೊದಲನೆಯದಾಗಿ ಕಚೇರಿಯಲ್ಲಿ ಲಲಿತಾಹೊಂಬೇಗೌಡ .ಮೇಡಂ ರವರೊಂದಿಗೆ ತಮ್ಮ ಕಚೇರಿ ಪತ್ರಿಕಾ ಬಳಗದೊಂದಿಗೆ ಸರಳವಾಗಿ ಡೈರಿ ಕ್ಯಾಲೆಂಡರ್ ಬಿಡುಗಡೆಯನ್ನು ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ನಡೆಸಿದ್ದು ಪತ್ರಿಕೆ ಅಭಿಮಾನಿಗಳಿಗೆ ಸಂತೋಷದ ಸಂಗತಿ



**ಶುಭ ಹಾರೈಕೆ**

ಚಿತ್ರದುರ್ಗದ ಶ್ರೀ ಶ್ರೀ ಇಮ್ಮಡಿ ಮೇದಾರ ಕೇತೇಶ್ವರ ಸ್ವಾಮೀಜಿ. ಶ್ರೀ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಹಾಗೂ ಮಂಡ್ಯ ಮಾಜಿ ಲೋಕಸಭಾ ಸದಸ್ಯರಾದ ಎಲ್ ಆರ್ ಶಿವರಾಮೇಗೌಡ ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯ ಅಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಾಧ್ಯಕ್ಷ ಕೃಷ್ಣಪ್ಪ ನೂತನವಾಗಿ ಪ್ರಾರಂಭವಾಗುತ್ತಿರುವ ಪತ್ರಿಕೆಗಳಿಗೆ ಶುಭ ಹಾರೈಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹13,620/Gram24ct ₹12,485/Gram22ct | ಬೆಳ್ಳಿ: ₹242.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಹಿಂದುಧರ್ಮದ ಜೀವನ ವಿಧಾನ.

ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಂ ಶೃಣುಯಾಮ ಶರದಃ ಶತಂ ಪ್ರಬ್ರವಾಮ ಶರದಃ ಶತಂ ಅದೀನಾಃ ಸ್ಯಾಮ ಶರದಃ ಶತಂ ಭೂಯಶ್ಚ ಶರದಃ ಶತಾತ್ ನೂರು ವರ್ಷ ನೋಡೋಣ ಬದುಕೋಣ ಕೇಳೋಣ ಮಾತಾಡೋಣ ದೈನ್ಯ - ಪರಾಧೀನವಿಲ್ಲದೇ ಸದೃಢರಾಗಿರೋಣ ನೂರರಾಚೆಯೂ ಇರೋಣ. ಶುಕ್ಲಯಜುರ್ವೇದ ಸಂಹಿತೆಯ ಮಂತ್ರ. ನಿರಾಶೆ ನಿರುತ್ಸಾಹ ಖಿನ್ನತೆ ಬಡಿದೋಡಿಸಿ ಜೀವನೋತ್ಸಾಹ ಚಿಮ್ಮಿಸುವುದು. ಕಣ್ಣು ಮುಂತಾದ ಜ್ಞಾನೇಂದ್ರಿಯ ಕೈ ಕಾಲು ಮುಂತಾದ ಕರ್ಮೇಂದ್ರಿಯ ಮನಸ್ಸು ಬುದ್ಧಿ ಮುಂತಾದ ಎಲ್ಲ ಅಂಗಾಂಗ ನೂರು ವರ್ಷ ಸದೃಢವಾಗಿರಲು ವ್ಯವಸ್ಥಿತ ಆದರ್ಶ ಜೀವನ ಬೇಕು. ಪ್ರಥಮೇ ವಯಸಿ ನಾಧೀತಂ ದ್ವಿತೀಯೇ ನಾರ್ಜಿತಂ ಧನಂ ತೃತೀಯೇ ನ ತಪಸ್ತಪ್ತಂ ಚತುರ್ಥೇ ಕಿಂ ಕರಿಷ್ಯತಿ = ಮೊದಲ ಇಪ್ಪತ್ತೈದು ವರ್ಷ ವಿದ್ಯೆ ಸಂಪಾದಿಸಬೇಕು. ಎರಡನೆಯ ಇಪ್ಪತ್ತೈದು ವರ್ಷ ಧರ್ಮದಿಂದ ದುಡಿದು ಸಂಪಾದಿಸಬೇಕು. ಮೂರನೇ ಇಪ್ಪತ್ತೈದು ವರ್ಷ ಧ್ಯಾನ ಜಪ ತಪ ಪರೋಪಕಾರ ಉತ್ತಮ ಗ್ರಂಥ ಅಧ್ಯಯನ ವೇದಾಂತಾದಿ ಶ್ರವಣ ಪ್ರವಚನ ಮಾಡಬೇಕು. ಹೀಗಿದ್ದಲ್ಲಿ ನಾಲ್ಕನೇ ಇಪ್ಪತ್ತೈದು ವರ್ಷ ಜೀವನ ಸುಖ ಸಮೃದ್ಧ ಪುಣ್ಯ ಮರಣ.

# ಹೈಕೋರ್ಟ್ ಮೆಟ್ಟಿಲೇರಿದ ಕೋಗಿಲು ಕಿತ್ತಾಟ

## ನೋಟಿಸ್ ನೀಡದೆ ಮನೆ ನೆಲಸಮಗೊಳಿಸಿದ ಸರ್ಕಾರದ ವಿರುದ್ಧ ಕೋಗಿಲು ಬಡಾವಣೆ ನಿವಾಸಿಗಳ ಹೋರಾಟ

• **ಉದಯವಾಹಿನಿ, ಬೆಂಗಳೂರು**

ಯಲಹಂಕದ ಕೋಗಿಲು ಬಡಾವಣೆಯ ವಸೀಂ ಮತ್ತು ಫಕೀರ್ ಕಾಲೋನಿಯ 300 ಮನೆಗಳ ತೆರವು ವಿವಾದ ಹೈಕೋರ್ಟ್ ಮೆಟ್ಟಿಲೇರಿದ್ದು, ಸಂತ್ರಸ್ತರು ಸೂಕ್ತ ಪರಿಹಾರ ಮತ್ತು ಪುನರ್ವಸತಿ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಬಡಾವಣೆ ನಿವಾಸಿಗಳು, ಸಂತ್ರಸ್ತರಾದ ಜೈಬಾ ತಬಸ್ಸಂ, ರೆಹಾನಾ ಮತ್ತು ಆರೀಫ್ ಬೇಗಂ ಮತ್ತಿತರರು ಮನೆ ತೆರವುಗೊಳಿಸಿದ ಕ್ರಮ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯಲ್ಲಿ ರಾಜ್ಯ ಸರಕಾರ, ಜಿಬಿಎ, ಬೆಂಗಳೂರು ನಗರ ಪೊಲೀಸ್ ಆಯುಕ್ತರು ಮತ್ತು ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಅರ್ಜಿ ಇನ್ನೂ ವಿಚಾರಣೆಗೆ ಬರಬೇಕಿದೆ.

ವಸೀಂ ಹಾಗೂ ಫಕೀರ್ ಕಾಲೋನಿಯಲ್ಲಿ ನಿರ್ಮಾಣವಾಗಿರುವ ಮನೆಗಳನ್ನು ಕೆಡುವುದಕ್ಕೂ ಮುನ್ನ ಯಾವುದೇ ನೋಟಿಸ್ ಜಾರಿ ಮಾಡಿಲ್ಲ. ನಮ್ಮ ಅಹವಾಲುಗಳನ್ನು ಆಲಿಸಿಲ್ಲ. ಬಡಾವಣೆಯಲ್ಲಿ ನೆಲೆಸಿರುವವರು ಹಲವು ಮಂದಿ ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು, ಬಹುತೇಕ ಜನರು ತಮ್ಮ ಮನೆಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹೊಂದಿದ್ದಾರೆ.



ಉದಯವಾಹಿನಿ ಚಿತ್ರ

> ಪಾಲಿಕೆ ಅಧಿಕಾರಿಗಳು ಅಕ್ರಮ ಒತ್ತುವರಿ ಆರೋಪ

ಇನ್ನೂ ಕೆಲವರು ಹೊಂದಿಲ್ಲ.

ಪಾಲಿಕೆ ಅಧಿಕಾರಿಗಳು ಅಕ್ರಮ ಒತ್ತುವರಿ ಆರೋಪದ ಮೇರೆಗೆ ಮನೆಗಳನ್ನು ತೆರವು ಮಾಡುವುದಕ್ಕೂ ಮುನ್ನ ಶೋಕಾಸ್ ನೋಟಿಸ್ ಜಾರಿ ಮಾಡಿ 15 ದಿನಗಳ ಕಾಲಾವಕಾಶ ನೀಡಬೇಕಿತ್ತು. ಆದರೆ, ನೋಟಿಸ್ ನೀಡಿಲ್ಲ. ಬುಲ್ಡೋಜರ್ ಬಳಕೆ ಮಾಡಿ ನೆಲಸಮಗೊಳಿಸಬಾರದೆಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಆ ಆದೇಶಕ್ಕೆ ವಿರುದ್ಧವಾಗಿ ನಡೆದುಕೊಂಡು ಮನೆಗಳನ್ನು ನೆಲಸಮಗೊಳಿಸಲಾಗಿದೆ,'' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

**ಸಮವಸ್ತ್ರ, ಪುಸ್ತಕ ಎಲ್ಲಾ ನಾಶ:** ಅಲ್ಲದೆ, ಈ ಘಟನೆಯಿಂದ ಬಡಾವಣೆ ಸುತ್ತಮುತ್ತಲಿನ ಸರಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ನೂರಾರು ವಿದ್ಯಾರ್ಥಿಗಳ ಸಮವಸ್ತ್ರ, ಪುಸ್ತಕಗಳು, ಹಾಲ್ ಟಿಕೆಟ್‌ಗಳು ನಾಶವಾಗಿದ್ದು, ಅವರ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯಾಗಿದೆ. ಕಾಲೋನಿಯ ಎಲ್ಲಾ ನಿರಾಶ್ರಿತರಿಗೆ ಅಲ್ಲಿಂದ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ ಪುನರ್ವಸತಿ ಅಥವಾ ಪರ್ಯಾಯ ವಸತಿ ಒದಗಿಸಬೇಕು. ಅದಕ್ಕಾಗಿ ಸಮೀಕ್ಷೆ ನಡೆಸಬೇಕು.

ಹಲವು ವರ್ಷಗಳ ಕಾಲ ಶ್ರಮಿಸಿ ನಿರ್ಮಿಸಿರುವ ಮನೆಗಳನ್ನು ಕೆಡವಿರುವುದರಿಂದ ಪರಿಹಾರ ನೀಡಬೇಕು, ಗಾಯಗೊಂಡಿರುವವರಿಗೆ ಸೂಕ್ತ ಚಿಕಿತ್ಸೆ ನೀಡಬೇಕು, ಎಂದು ಅರ್ಜಿಯಲ್ಲಿ ಕೋರಲಾಗಿದೆ. ಸುಪ್ರೀಂಕೋರ್ಟ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಮನೆಗಳನ್ನು ಕೆಡವಿರುವ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ, ಶಿಸ್ತು ಕ್ರಮ ಕೈಗೊಳ್ಳಬೇಕು. ನಷ್ಟ, ಹಾನಿಗೆ ಅಧಿಕಾರಿಗಳನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಬೇಕು. ಅಲ್ಲದೆ, ಸಂತ್ರಸ್ತರಾಗಿರುವ ಅಂಗವಿಕಲರು, ಮಹಿಳೆಯರು ಮತ್ತು ವೃದ್ಧರಿಗೆ ನಿತ್ಯ ಶುದ್ಧ ಕುಡಿಯುವ ನೀರು ಮತ್ತು ಮೂರು ಬಾರಿ ಪೌಷ್ಟಿಕ ಆಹಾರವನ್ನು ತಕ್ಷಣದಿಂದಲೇ ಒದಗಿಸಬೇಕು. ಪುರುಷರು ಮತ್ತು ಮಹಿಳೆಯರಿಗೆ ತಾತ್ಕಾಲಿಕವಾಗಿ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಬೇಕು.

### ಜ.5ರಂದು ಬಿಜೆಪಿ ಬೃಹತ್ ಪ್ರತಿಭಟನೆ

**ಕೋಗಿಲು ಬಡಾವಣೆಯಲ್ಲಿ ಅಕ್ರಮ ಮನೆ ಕಳೆದುಕೊಂಡವರ ಪರ ನಿಂತಿರುವ ರಾಜ್ಯ ಸರಕಾರ ಪರ್ಯಾಯ ವಸತಿ ಕಲ್ಪಿಸುವುದನ್ನು ವಿರೋಧಿಸಿ ಜ.5ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಬಿಜೆಪಿ ನಿರ್ಧರಿಸಿದೆ. ಈ ಪ್ರಕರಣದ ಸತ್ಯಶೋಧನೆಗೆ ರಚಿಸಲಾದ ಶಾಸಕ ಎಸ್.ಆರ್.ವಿಶ್ವನಾಥ್ ನೇತೃತ್ವದ ಸಮಿತಿ ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿತು. ಕೋಗಿಲು ಬಡಾವಣೆ ಅಕ್ರಮ ಮನೆ ತೆರವು ವಿಚಾರವಾಗಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಮಿತಿ ರಚಿಸಿದ್ದು, ನಾವೆಲ್ಲ ಸಭೆ ನಡೆಸಿದ್ದೇವೆ. ವಾರದೊಳಗೆ ವರದಿ ಕೊಡುತ್ತೇವೆ. ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿದ್ದವರಿಗೆ ತರಾತುರಿಯಲ್ಲಿ ಮನೆ ಕೊಡುವುದನ್ನು ವಿರೋಧಿಸಿ ಜ.5ರಂದು ಪ್ರತಿಭಟಿಸುವ ತೀರ್ಮಾನ ಕೈಗೊಳ್ಳಲಾಗಿದೆ, ಎಂದು ಸಭೆ ಬಳಿಕ ಎಸ್.ಆರ್.ವಿಶ್ವನಾಥ್ ತಿಳಿಸಿದರು.**

## ಪಿ.ಜಿ: ಸುರಕ್ಷತಾ ನಿಯಮ ಅನುಸರಣೆ ಕಡ್ಡಾಯ

• **ಉದಯವಾಹಿನಿ, ಬೆಂಗಳೂರು**

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ವಿಸ್ ಅಪಾರ್ಟ್‌ಮೆಂಟ್, ಹಾಸ್ಟೆಲ್ ಮತ್ತು ಪಿ.ಜಿಗಳಲ್ಲಿ ಸುರಕ್ಷತಾ ನಿಯಮಗಳನ್ನು ನಿಗದಿತ ಅವಧಿಯೊಳಗೆ ಪರಿಶೀಲಿಸಿ, ಅಗತ್ಯ ತಿದ್ದುಪಡಿ ಕೈಗೊಳ್ಳಬೇಕು ಎಂದು ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.ಸಂಸ್ಥೆಗಳ ಮಾಲೀಕರು/ ನಿರ್ವಾಹಕರು/ ವ್ಯವಸ್ಥಾಪಕರಿಗೆ ಈ ಬಗ್ಗೆ ನೋಟಿಸ್ ಜಾರಿ ಮಾಡಲಾಗಿದ್ದು, ನಗರ ಪಾಲಿಕೆಯ ವತಿಯಿಂದ ಸೂಚಿಸಲಾಗಿರುವಹಾಗೂ ಜಾರಿಯಲ್ಲಿರುವ ಎಲ್ಲ ನಿಯಮಗಳನ್ನೂ ಕಡ್ಡಾಯವಾಗಿ ಅನುಸರಣೆ ಮಾಡಬೇಕು ಎಂದು ಸೂಚಿಸಲಾಗಿದೆ ಎಂದರು.

ಇತ್ತೀಚೆಗೆ ಸಂಭವಿಸಿರುವ ಅನಿಲ ಸ್ಫೋಟ ಹಾಗೂ ಅಗ್ನಿ ಅವಘಡಗಳಂತಹ ದುರಂತಗಳು ಪುನರಾವರ್ತನೆಯಾಗದಂತೆ ತಡೆಯುವುದು ಮತ್ತು ಸಾರ್ವಜನಿಕರ ಜೀವ ಹಾಗೂ ಆಸ್ತಿ ಸುರಕ್ಷತೆಯನ್ನು ಖಚಿತಪಡಿಸುವುದು ಈ ಕ್ರಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಎಲ್.ಪಿ.ಜಿ. /ಅನಿಲ ಸಂಪರ್ಕಗಳ ಸುರಕ್ಷಿತ ಹಾಗೂ ಅಧಿಕೃತ ಬಳಕೆ, ಅಕ್ರಮ ಹಾಗೂ ಅಸುರಕ್ಷಿತ ಅನಿಲ ಸಿಲಿಂಡರ್‌ಗಳ ಸಂಪೂರ್ಣ ನಿಷೇಧ. ಸರಿಯಾದ ಗಾಳಿ ಮತ್ತು ಅಗ್ನಿ ಸುರಕ್ಷತಾ ಕ್ರಮ, ವಿದ್ಯುತ್ ಸುರಕ್ಷತೆ ಹಾಗೂ ಓವರ್ ಲೋಡ್ ತಪ್ಪಿಸುವ ಕ್ರಮ, ಮಾನ್ಯ ಹಾಗೂ ಅಸ್ತಿತ್ವದಲ್ಲಿರುವ ವ್ಯಾಪಾರ ಪರವಾನಗಿ ಮತ್ತು ಅಗತ್ಯ ನೋಂದಣಿಯನ್ನು ಹೊಂದಿರಬೇಕು. ಮುಂದಿನ ದಿನಗಳಲ್ಲಿ ನಗರ ಪಾಲಿಕೆ ವತಿಯಿಂದ ವಿಶೇಷ ತಪಾಸಣಾ ಅಭಿಯಾನ ಕೈಗೊಳ್ಳಲಾಗುವುದು. ಸುರಕ್ಷತಾ ನಿಯಮಗಳನ್ನು ಪಾಲಿಸಲು ವಿಫಲವಾದವರ ಆಸ್ತಿಗಳನ್ನು ಜಪ್ತಿ ಮಾಡಿ, ವ್ಯಾಪಾರ ಪರವಾನಗಿಯನ್ನು ರದ್ದುಪಡಿಸಲಾಗುವುದು ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

## ಬನಶಂಕರಿ ಅಮ್ಮನವರ ಬ್ರಹ್ಮರಥೋತ್ಸವ ಜ.3ರಂದು: ರಾಮಲಿಂಗಾರೆಡ್ಡಿ

• **ಉದಯವಾಹಿನಿ, ಬೆಂಗಳೂರು**

ಹಿಂದೂ ಧಾರ್ಮಿಕ ಸಂಸ್ಥೆ, ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ಜ.3ರಂದು ಮಧ್ಯಾಹ್ನ 1.10ಕ್ಕೆ ಬನಶಂಕರಿ ಅಮ್ಮನವರ ಬ್ರಹ್ಮರಥೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬನಶಂಕರಿ ಅಮ್ಮನ ಜಾತ್ರೆ ಡಿ. 28ಕ್ಕೆ ವಿಧ್ಯುಕ್ತವಾಗಿ ಆರಂಭವಾಗಿದೆ. ಜ.7ರವರೆಗೆ ಇರಲಿದ್ದು, ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು ಜ.3ರಂದು ನಡೆಯಲಿವೆ. ಅಂದು ಬೆಳಿಗ್ಗೆ 7ಕ್ಕೆ ಮೃತ್ಯುಂಜಯ ಪುರಸ್ಸರ ನವಗ್ರಹ ಶಾಂತಿ, ದೇವಿ ಮೂಲಮಂತ್ರ ಹೋಮ, ರಥಾಂಗಹೋಮ ಇರಲಿದೆ' ಎಂದು ವಿವರಿಸಿದರು. ಮಧ್ಯಾಹ್ನ 1.10ರಿಂದ ಸಂಜೆ 1.40ರವರೆಗೆ ಬನಶಂಕರಿ ಅಮ್ಮನವರ ಬ್ರಹ್ಮರಥೋತ್ಸವ ನಡೆಯಲಿದೆ. ಸಂಜೆ 4.30ಕ್ಕೆ ಶಾಕಾಂಬರೀ ದೇವಿಗೆ ಧೂಳೋತ್ಸವ, ಸಂಜೆ 6ಕ್ಕೆ ಬನಶಂಕರಿ ದೇವಿ, ಚೌಡೇಶ್ವರಿ ದೇವಿ, ಪುಟ್ಟೇನಹಳ್ಳಿ ಅಂಜನೇಯ ಸ್ವಾಮಿ, ಪಾರ್ವತಿ ಪರಮೇಶ್ವರ ದೇವರು, ಸೀತಾಲಕ್ಷ್ಮಣ ಹನುಮಂತ ಸಮೇತ ರಾಮಚಂದ್ರ ಸ್ವಾಮಿಗೆ, ಮಹಾಗಣಪತಿ, ವರಪ್ರಸಾದ್ ಆಂಜನೇಯ ಸ್ವಾಮಿ, ಸುಬ್ರಹ್ಮಣೇಶ್ವರ ಸ್ವಾಮಿಗೆ ಮುತ್ತಿನ ಪಲಕ್ಕಿ ಉತ್ಸವ ನೇರವೇರಲಿದೆ ಎಂದು ಹೇಳಿದರು. ಮುಜರಾಯಿ ಇಲಾಖೆಯ ಎಲ್ಲಾ ದೇವಸ್ಥಾನಗಳಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಲಾಗಿದೆ. ಅದರಲ್ಲಿಯೂ ಬನಶಂಕರಿ ಅಮ್ಮನವರ ದೇವಸ್ಥಾನವು ಪ್ಲಾಸ್ಟಿಕ್ ಮುಕ್ತ ಆಗುವಲ್ಲಿ ಯಶಸ್ವಿಯಾಗಿದೆ. ಬ್ರಹ್ಮರಥೋತ್ಸವ ಸಂದರ್ಭದಲ್ಲಿ ಅಹಿತಕರ ಘಟನೆ, ವಾಹನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಲಾಗುವುದು. ಪ್ರಮುಖ ರಸ್ತೆಗಳಲ್ಲಿ ದೀಪಾಲಂಕಾರ ಮಾಡಲಾಗುವುದು ಎಂದು ಮಾಹಿತಿ ನೀಡಿದರು.



> **ರಥೋತ್ಸವದಲ್ಲಿ ಕಳೆದ ವರ್ಷ 60 ಸಾವಿರ ಭಕ್ತರು ಪಾಲ್ಗೊಂಡಿದ್ದರು. ಈ ವರ್ಷ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಬಾರಿ ಬೆಳ್ಳಿ ತೇರಿನಲ್ಲಿ ರಥೋತ್ಸವ ಮಾಡಲು ತೀರ್ಮಾನಿಸಲಾಗಿದೆ ಎಂದರು. ದೇವಸ್ಥಾನದ ಸಮೀಪದಲ್ಲಿ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಜೊತೆಗೆ ಎರಡು ಮಹಡಿಯ ಹೆಚ್ಚುವರಿ ಅನ್ನದಾನ ಕೊಠಡಿ ನಿರ್ಮಿಸಲು ದಾನಿಗಳು ಮುಂದೆ ಬಂದಿದ್ದಾರೆ ಎಂದು ಹೇಳಿದರು.**

## ವಿಂಜೋ ಸಂಸ್ಥೆ ಹಣ ವಹಿವಾಟಿಗೆ ತಡೆ

• **ಉದಯವಾಹಿನಿ, ಬೆಂಗಳೂರು**

ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ವಿಂಜೋ ಆನ್‌ಲೈನ್ ಗೇಮಿಂಗ್ ಸಂಸ್ಥೆಯ ಕಚೇರಿ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿ ವಿವಿಧ ಬ್ಯಾಂಕ್‌ಗಳ ಖಾತೆಗಳಲ್ಲಿ ರೂ.192 ಕೋಟಿ ಇರುವುದನ್ನು ಪತ್ತೆ ಹಚ್ಚಿದ್ದಾರೆ. ಈ ಹಣದ ವಹಿವಾಟು ಅನ್ನು ಸ್ಥಗಿತಗೊಳಿಸಿ. ಮುಂದಿನ ತನಿಖೆ ಆರಂಭಿಸಿದ್ದಾರೆ.ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಇತ್ತೀಚೆಗೆ ದಾಳಿ ನಡೆಸಿದ್ದರು. ವಿಂಜೋ ಕಂಪನಿಗೆ ಸಂಬಂಧಿಸಿದ ಲೆಕ್ಕಪತ್ರ ವಿಭಾಗದ ಕಚೇರಿಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದರು. ಈ ವೇಳೆ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವುದು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವುದು ಪತ್ತೆಯಾಗಿತ್ತು. ಆ ವಹಿವಾಟುಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಇಡಿ. ತಿಳಿಸಿದೆ.

ನವೆಂಬರ್ 18ರಂದು ವಿಂಜೋ ಕಚೇರಿ, ನಿರ್ದೇಶಕರ ನಿವಾಸಗಳ ಮೇಲೆ ಇ.ಡಿ. ಶೋಧ ನಡೆಸಿದ ವೇಳೆ ನಿಯಮಬಾಹಿರ ಚಟುವಟಿಕೆ ಹಾಗೂ ಹಣಕಾಸಿನ ವ್ಯವಹಾರದಲ್ಲಿ ತೊಡಗಿರುವ ಬಗ್ಗೆ ಮಹತ್ವದ ದಾಖಲೆಗಳು ದೊರೆತ್ತಿದ್ದವು. ಆನ್‌ಲೈನ್ ಗೇಮ್, ವಿಂಜೋ ಆ್ಯಪ್‌ನಲ್ಲಿ ರಿಯಲ್ ಮನಿ ಗೇಮ್ಸ್ ಆಟವಾಡುತ್ತಿದ್ದ ಗ್ರಾಹಕರು, ಕಂಪನಿ ಕಡೆಯಿಂದ ವ್ಯಕ್ತಿಗಳು ಆಟವಾಡುತ್ತಿದ್ದಾರೆ ಎಂದು ಸುಳ್ಳು ಹೇಳಿತ್ತು. ವಾಸ್ತವವಾಗಿ ಎ.ಐ. ಅಲ್ಗಾರಿದಮ್, ಸಾಫ್ಟ್‌ವೇರ್‌ಗಳ ಮೂಲಕ ಆಟವಾಡಿಸಲಾಗುತ್ತಿತ್ತು ಎಂಬುದನ್ನು ಇ.ಡಿ ಅಧಿಕಾರಿಗಳು ಬಹಿರಂಗ ಪಡಿಸಿದ್ದರು. ಇದು ಅಕ್ರಮ ಎಂದು ತನಿಖಾ ಸಂಸ್ಥೆ ತಿಳಿಸಿದೆ.

## ಸಿಎಂ ಸೂಚನೆ ಕೊಟ್ಟರೆ ಕಾಲೇಜು ಹೆಣ್ಣುಮಕ್ಕಳಿಗೆ ಋತುಚಕ್ರ ರಜೆ

• **ಉದಯವಾಹಿನಿ, ಬೆಂಗಳೂರು**

ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಋತುಚಕ್ರ ರಜೆ ನೀಡಲು ಸಿಎಂ ಸೂಚನೆ ನೀಡಿದ್ರೆ, ರಜೆ ಘೋಷಣೆ ಮಾಡಲಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಸುಧಾಕರ್ ತಿಳಿಸಿದ್ದಾರೆ. ರಾಜ್ಯದಲ್ಲಿ ಕೆಲಸ ನಿರ್ವಹಿಸೋ ಹೆಣ್ಣುಮಕ್ಕಳಿಗೆ ಋತುಚಕ್ರ ರಜೆ ನೀಡುವ ವಿಚಾರಕ್ಕೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ರಜೆ ಕೊಡಬೇಕು ಅಂದರೆ ಕೊಡ್ತೀವಿ. ಸಿಎಂ ಅವರು ಈ ಬಗ್ಗೆ ಹೇಳಿದ್ರೆ ಅದೇ ಅಂತಿಮ ಎಂದರು. ಕಾಲೇಜು ವಿದ್ಯಾರ್ಥಿನಿಯಯರು, ವಿವಿ ವಿದ್ಯಾರ್ಥಿನಿಯರಿಗೆ ಋತುಚಕ್ರ ರಜೆ ಕೊಡೋ ಬಗ್ಗೆ ಸಿಎಂ ಅವರು ಸೂಚನೆ ಕೊಟ್ಟರೆ ಮಾಡ್ತೀವಿ. ಸಿಎಂ ಆದೇಶವೇ ಅಂತಿಮ ಹೇಳಿದರು.

## ಕಾಲೇಜುಗಳಲ್ಲಿ ಎಲೆಕ್ಷನ್ ನಡೆಸುವ ಉದ್ದೇಶ ಸರ್ಕಾರಕ್ಕಿದೆ: ಶರಣ ಪ್ರಕಾಶ್ ಪಾಟೀಲ್


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಕಾಲೇಜುಗಳಲ್ಲಿ ಚುನಾವಣೆ ನಡೆಸುವ ಉದ್ದೇಶ ಸರ್ಕಾರಕ್ಕಿದೆ. ಈ ಬಗ್ಗೆ ಶೀಘ್ರವೇ ನಿರ್ಧಾರ ಮಾಡುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ. ಕಾಲೇಜುಗಳಲ್ಲಿ ಎಲೆಕ್ಷನ್ ಮಾಡುವ ಸಂಬಂಧ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕಾಲೇಜುಗಳಲ್ಲಿ ಚುನಾವಣೆ ಮಾಡುವ ಸಂಬಂಧವಾಗಿ ಕೆಪಿಸಿಸಿ ಅಧ್ಯಕ್ಷರು ನನ್ನ ಮತ್ತು ಸಚಿವ ಸುಧಾಕರ್ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡಿದ್ದಾರೆ. ಈ ಬಗ್ಗೆ ನಾವು ಅಭಿಪ್ರಾಯ ಸಂಗ್ರಹ ಮಾಡುತ್ತೇವೆ. ಜನವರಿ 13ಕ್ಕೆ ಸಮಿತಿಯ ಮೊದಲ ಸಭೆ ನಡೆಸಿ ನಿರ್ಧಾರ ಮಾಡುತ್ತೇವೆ ಎಂದರು. ಕಾಲೇಜು ಹಂತದಲ್ಲಿ ನಾಯಕತ್ವ ಬೆಳೆಯಬೇಕು. ಅನೇಕರು ಕಾಲೇಜು ಹಂತದಲ್ಲಿ ನಾಯಕತ್ವದಿಂದ ಬಂದಿದ್ದಾರೆ. ಹೀಗಾಗಿ ಕಾಲೇಜು ಹಂತದಲ್ಲಿ ಚುನಾವಣೆ ಮಾಡುವ ಇಚ್ಚೆ ಇದೆ. ಸಮಿತಿ ಸಭೆ ಮಾಡಿ ಕೆಪಿಸಿಸಿ ಅಧ್ಯಕ್ಷರಿಗೆ ವರದಿ ಕೊಡುತ್ತೇವೆ 1990ರಲ್ಲಿ ವೀರೇಂದ್ರ ಪಾಟೀಲ್ ಅವರ ಅವಧಿಯಲ್ಲಿ ಬೆಂಗಳೂರಿನ ಕಾಲೇಜು ಕ್ಯಾಂಪಸ್‌ಗಳಲ್ಲಿ ಹಿಂಸಾಚಾರ ವರದಿಯಾದ ಬಳಿಕ ಕರ್ನಾಟಕದಲ್ಲಿ ಕಾಲೇಜು ಕ್ಯಾಂಪಸ್ ಚುನಾವಣೆಗಳನ್ನು ನಿಷೇಧಿಸಲಾಗಿತ್ತು.

## ಬಜೆಟ್‌ನಲ್ಲಿ ವಿಶ್ವಕರ್ಮರಿಗೆ ಆದ್ಯತೆ: ಸತೀಶ ಜಾರಕಿಹೊಳಿ ಭರವಸೆ

• **ಉದಯವಾಹಿನಿ, ಬೆಂಗಳೂರು**

ಮುಂದಿನ ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗೆ ಪೂರಕವಾಗಿ ಹೆಚ್ಚಿನ ಅನುದಾನವನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಕನ್ನಡ , ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಶೋಷಿತ ವರ್ಗಗಳಿಗೆ ದನಿ ನೀಡುವ ಕೆಲಸವನ್ನು ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಈ ವರ್ಗಗಳಿಗೆ ಹಿಂದಿನ ಬಜೆಟ್‌ಗಳಲ್ಲೂ ಹೆಚ್ಚಿನ ಅನುದಾನ ನೀಡಿದ್ದು, ಅದನ್ನು ಈ ಬಾರಿಯೂ ಮುಂದುವರಿಸಲಿದೆ ಎಂದು ಹೇಳಿದರು. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಅರೇ ಮಾದನಹಳ್ಳಿಯ ಶಿವಸುಜ್ಞಾನಮೂರ್ತಿ ಸ್ವಾಮೀಜಿ ಮಾತನಾಡಿ, ಜಕಣಾಚಾರಿ ಎನ್ನುವವರು ಕಾಲ್ಪನಿಕ ವ್ಯಕ್ತಿ. ಅವರು ಯಾವುದೇ ಶಿಲ್ಪ ಕೆತ್ತನೆ ಮಾಡಿಲ್ಲ ಎನ್ನುವ ಅಭಿಪ್ರಾಯ ಮೂಡಿಸುವ ಪ್ರಯತ್ನ ಹಿಂದೆ ಆಗಿತ್ತು. ಆದರೆ ಹಲವಾರು ಗ್ರಂಥ, ನಾಡಗೀತೆಯಲ್ಲೂ ಜಕಣಾಚಾರಿ ಅವರ ಸಾಧನೆಯ ಉಲ್ಲೇಖವಿದೆ. ಈ ಕಾರಣದಿಂದಲೇ ಜಕಣಾಚಾರಿ ಅವರ ಸ್ಮರಣೆ ಕಾರ್ಯಕ್ರಮ ರೂಪಿಸಲು ಕೋರಿದಾಗ ಕಾಂಗ್ರೆಸ್ ಸರ್ಕಾರ ಅನುಮತಿ ನೀಡಿತು. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮವನ್ನೂ ಸ್ಥಾಪಿಸಿ ಪ್ರಗತಿಗೆ ಒತ್ತು ನೀಡಿದೆ' ಎಂದು ನುಡಿದರು. 'ಕರ್ನಾಟಕದಲ್ಲಿ ಯುನೆಸ್ಕೊ ಮಾನ್ಯತೆ ಪಡೆದಂತಹ ಶಿಲ್ಪ ಕಲೆ ರೂಪಿಸಿದ್ದು ವಿಶ್ವಕರ್ಮರು, ಸರ್ವಧರ್ಮಗಳ ಶ್ರದ್ಧಾ ಕೇಂದ್ರಗಳಿಗೆ ರೂಪವನ್ನು ನೀಡಿದ್ದಾರೆ. ಜಕಣಾಚಾರಿ ಅವರ ಹೆಸರಿನಲ್ಲಿ ಸಂಸ್ಮರಣಾ ತಾಣವನ್ನು ರೂಪಿಸಿ ಅಲ್ಲಿ ಶಿಲ್ಪಕಲೆಗಳ ವಿಶಾಲ ತರಬೇತಿ, ಪ್ರದರ್ಶನ, ಮಾರಾಟ ಕೇಂದ್ರ ಸ್ಥಾಪಿಸಬೇಕು. ಸಮುದಾಯಕ್ಕೆ ಹೆಚ್ಚಿನ ಬಲ ತುಂಬಬೇಕು' ಎಂದು ತಿಳಿಸಿದರು. ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಬಿ. ಶ್ರೀಕಂಠಾಚಾರ್ ಅವರು ಉಪನ್ಯಾಸ ನೀಡಿದರು.


ಉದಯವಾಹಿನಿ ಚಿತ್ರ

> **ಕೆಲವರು ಈಗಲೂ ತಮ್ಮ ಕಸುಬಿಗೆ ಸೀಮಿತವಾಗಿದ್ದು, ಸರ್ಕಾರವೇ ಸೌಲಭ್ಯ ನೀಡಬೇಕು ಎನ್ನುವ ಮನಃಸ್ಥಿತಿ ಹೊಂದಿದ್ದಾರೆ. ಇದರಿಂದ ಎಲ್ಲಾ ಸಮುದಾಯದವರು ಹೊರ ಬರಬೇಕು. ಮಕ್ಕಳು ಉನ್ನತ ಶಿಕ್ಷಣ ಪಡೆದು ವಿವಿಧ ಹುದ್ದೆ ಪಡೆಯುವಂತೆ ಮಾಡಬೇಕು. ಉದ್ಯಮಿಗಳಾಗಿ ರೂಪುಗೊಳ್ಳಬೇಕು. ನೀವು ಬಯಸುವ ಸ್ಥಾನಕ್ಕೆ ಸುಮ್ಮನೇ ಯಾರೂ ನಿಮ್ಮನ್ನು ಕೂರಿಸುವುದಿಲ್ಲ. ಛಲದಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿನ ಉನ್ನತ ಹುದ್ದೆಗಳನ್ನು ಪಡೆಯಬೇಕು ಎಂದು ಸಲಹೆ ನೀಡಿದರು.**

## ಮೆಟ್ರೊ ಕೆಂಪು ಮಾರ್ಗ: ವರದಿ ಸಲ್ಲಿಸಿದ ಸ್ವತಂತ್ರ ಸಮಿತಿ

• **ಉದಯವಾಹಿನಿ, ಬೆಂಗಳೂರು**

ಸರ್ಜಾಪುರ ಹೆಬ್ಬಾಳವನ್ನು ಸಂಪರ್ಕಿಸುವ ನಮ್ಮ ಮೆಟ್ರೊ ಕೆಂಪು ಮಾರ್ಗದ ಬಗ್ಗೆ ಸ್ವತಂತ್ರ ಸಮಿತಿ ವರದಿ ಸಲ್ಲಿಸಿದೆ. ಈ ವರದಿಯನ್ನು ಕೇಂದ್ರ ವಸತಿ, ನಗರ ವ್ಯವಹಾರಗಳ ಸಚಿವಾಲಯ ಪರಿಶೀಲಿಸಲಿದೆ.36.59 ಕಿ.ಮೀ. ಉದ್ದದ ಕೆಂಪು ಮಾರ್ಗವು 22.14 ಕಿ.ಮೀ. ಎತ್ತರಿಸಿದ ಮಾರ್ಗ, 14.45 ಕಿ.ಮೀ. ಸುರಂಗ ಮಾರ್ಗ ಒಳಗೊಂಡಿದೆ. ಎತ್ತರಿಸಿದ ಮಾರ್ಗದಲ್ಲಿ 17 ನಿಲ್ದಾಣ, ಸುರಂಗ ಮಾರ್ಗದಲ್ಲಿ 11 ನಿಲ್ದಾಣಗಳು ಇರಲಿವೆ. 28,405 ಕೋಟಿ ಅಂದಾಜು ವೆಚ್ಚ ಅಂದರೆ ಪ್ರತಿ ಕಿಲೋ ಮೀಟರ್‌ಗೆ ರೂ.776.3ಕೋಟಿ ಎಂದು ವಿಸ್ತೃತ ಯೋಜನಾ ವರದಿಯಲ್ಲಿ ತಿಳಿಸಲಾಗಿತ್ತು. ಈ ಯೋಜನೆಗೆ ಒಂದು ವರ್ಷದ ಹಿಂದೆ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿತ್ತು. ಬಳಿಕ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಯೋಜನೆಯ ಅಂದಾಜು ವೆಚ್ಚ ಅಧಿಕವಾಗಿದೆ. ಈ ಬಗ್ಗೆ ವಿವರ ನೀಡುವಂತೆ ಆರು ತಿಂಗಳ ಹಿಂದೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿತ್ತು. ನಗರದ ಹೊರಗೆ ನಡೆಯುವ ಮೆಟ್ರೊ ಕಾಮಗಾರಿಗೆ ವೆಚ್ಚವು ಕಡಿಮೆ ಇರುತ್ತದೆ. ನಗರದ ಒಳಗೆ ಕಾಮಗಾರಿ ನಡೆಸಲು ಭಾರಿ ವೆಚ್ಚ ಮಾಡಬೇಕಾಗುತ್ತದೆ. ಕೆಂಪು ಮಾರ್ಗದಲ್ಲಿ 11 ಕಿ.ಮೀ. ಸುರಂಗ ಕೊರೆದು ಹಳಿ ನಿರ್ಮಿಸಬೇಕು. 11 ಭೂಗತ ನಿಲ್ದಾಣಗಳನ್ನು ನಿರ್ಮಿಸಬೇಕು. ಭೂಸ್ವಾಧೀನ, ಮಾರ್ಗ ರಚನೆ, ಹಳಿ ಜೋಡಣೆ, ನಿಲ್ದಾಣದ ಕಟ್ಟಡಗಳ ನಿರ್ಮಾಣ. ವಿದ್ಯುತ್ ಸರಬರಾಜು ವ್ಯವಸ್ಥೆ, ಸಿಗ್ನಲಿಂಗ್, ದೂರಸಂಪರ್ಕ, ಡಿಪೊಗಳು, ರೈಲು ಕೋಚ್ ಪೂರೈಕೆ ಹೀಗೆ ಒಟ್ಟು 13 ಅಂಶಗಳನ್ನು ಪರಿಗಣಿಸಿ ಅಂದಾಜು ವೆಚ್ಚವನ್ನು ತಯಾರಿಸಿರುವುದಾಗಿ ತಿಳಿಸಿದ್ದೇವೆ' ಎಂದು ವಿವರ ನೀಡಿದರು.



> **ನಿರ್ಮಾಣ ಹಂತದಲ್ಲಿರುವ ಕಾಳೇನ ಅಗ್ರಹಾರ ನಾಗವಾರ ನಡುವಿನ ಗುಲಾಬಿ ಮಾರ್ಗವನ್ನು ಮಾನದಂಡವಾಗಿ ಇಟ್ಟುಕೊಂಡು ಕೆಂಪು ಮಾರ್ಗಕ್ಕೆ ಅಂದಾಜು ವೆಚ್ಚ ತಯಾರಿಸಲಾಗಿತ್ತು. ಪರಿಶೀಲನೆ ನಡೆಸಿ ವರದಿ ನೀಡುವಂತೆ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಸೂಚಿಸಿದ್ದರಿಂದ ಸ್ವತಂತ್ರ ಸಮಿತಿ ನೇಮಕ ಮಾಡಲಾಗಿತ್ತು. ಅಂದಾಜು ವೆಚ್ಚದ ಬಗ್ಗೆ ಸಮರ್ಥನೆಯನ್ನು ಸ್ವತಂತ್ರ ಸಮಿತಿಯ ಮುಂದೆ ಇಟ್ಟಿದ್ದೇವೆ'**
>
> **ಬಿಎಂಆರ್‌ಸಿಎಲ್‌ನ ಹಿರಿಯ ಅಧಿಕಾರಿ**

## ಬೆಂಗಳೂರು 6 ರಸ್ತೆಗಳಲ್ಲಿ 9 ಟನ್ ತ್ಯಾಜ್ಯ

• **ಉದಯವಾಹಿನಿ, ಬೆಂಗಳೂರು**

ಹೊಸ ವರ್ಷಾಚರಣೆ ಸಂದರ್ಭದಲ್ಲಿ ನಗರದ ಪ್ರಮುಖ ಆರು ರಸ್ತೆಗಳಲ್ಲಿ ಸಂಗ್ರಹವಾಗಿದ್ದ ಒಂಬತ್ತು ಟನ್ ಕಸವನ್ನು ಐದು ಗಂಟೆಗಳಲ್ಲಿ ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದ್ದಾರೆ.ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಸೆಂಟ್‌ಮಾರ್ಕ್ಸ್ ರಸ್ತೆ, ಇಂದಿರಾನಗರ, ರೆಸಿಡೆನ್ಸಿ ರಸ್ತೆಗಳಲ್ಲಿ ಮುಂಜಾನೆ 3ರಿಂದ ಬೆಳಿಗ್ಗೆ 8 ಗಂಟೆಯವರೆಗೆ ಸ್ವಚ್ಛತಾ ಕಾರ್ಯ ನಿರ್ವಹಿಸಲಾಗಿದೆ ಎಂದು ನಗರ ಪಾಲಿಕೆಯ ಹೆಚ್ಚುವರಿ ಅಭಿವೃದ್ಧಿ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು.

ಮದ್ಯದ ಬಾಟಲ್, ಚಪ್ಪಲಿ, ಶೂ, ಬಟ್ಟೆಗಳು ಹಾಗೂಊಟ, ತಿಂಡಿ, ತಿನಿಸುಗಳ ಪ್ಲೇಟ್, ಪ್ಲಾಸ್ಟಿಕ್ ತ್ಯಾಜ್ಯ, ಸಿಗರೇಟ್ ಇನ್ನಿತರೆ ತ್ಯಾಜ್ಯ ಸೇರಿ ಸುಮಾರು ಒಂಬತ್ತು ಟನ್ ಕಸವನ್ನು ತೆರವುಗೊಳಿಸಲಾಗಿದೆ. ರಾತ್ರಿ ಸಮಯದಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸಿದ ಪೌರ ಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ, ಆಟೊ ಟಿಪ್ಪರ್ ಚಾಲಕರ ಕಾರ್ಯ ಶ್ಲಾಘನಾರ್ಹ ಎಂದರು.


ಉದಯವಾಹಿನಿ ಚಿತ್ರ

# ಬೆಂಗಳೂರಿನಿಂದ ಕನ್ಯಾಕುಮಾರಿಗೆ ಸೈಕಲ್ ಯಾತ್ರೆ: ಸುರೇಶ್‌ಕುಮಾರ್‌ಗೆ ಪ್ರಧಾನಿ ಮೋದಿ ಕರೆ, ಅಭಿನಂದನೆ

## 2025 ರಲ್ಲಿ 8 ಸಾವಿರ ಕಿ.ಮೀ. ಸೈಕಲ್ ಸವಾರಿ ಮಾಡಿರುವುದಕ್ಕೆ ಪ್ರಧಾನಿಯವರು ಆಶ್ಚರ್ಯ ವ್ಯಕ್ತಪಡಿಸಿದರು

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಿಂದ ಕನ್ಯಾಕುಮಾರಿಗೆ ಸೈಕಲ್ ಯಾತ್ರೆ ಮಾಡಿದ್ದ ಮಾಜಿ ಸಚಿವ ಎಸ್. ಸುರೇಶ್‌ಕುಮಾರ್ ಸಾಹಸಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಸಂತಸ ಹಂಚಿಕೊಂಡಿರುವ ಸುರೇಶ್‌ಕುಮಾರ್, ನರೇಂದ್ರ ಮೋದಿಯವರು ಕರೆ ಮಾಡಿ ಅಭಿನಂದನೆ ತಿಳಿಸಿರುವುದು ಸ್ಫೂರ್ತಿ ನೀಡಿದೆ, ಎಂದಿದ್ದಾರೆ. ಇತ್ತೀಚೆಗಷ್ಟೇ ತೀವ್ರ ಅನಾರೋಗ್ಯದಿಂದ ಬಳಲಿದ್ದ ಸುರೇಶ್‌ಕುಮಾರ್, ಬೆಂಗಳೂರಿನಿಂದ ಐದು ದಿನಗಳಲ್ಲಿ ಬರೋಬ್ಬರಿ 702 ಕಿ.ಮೀ. ಸೈಕಲ್ ಸವಾರಿ ಮಾಡುವ ಮೂಲಕ ಎಲ್ಲರ ಗಮನಸೆಳೆದಿದ್ದರು.

ಬೆಂಗಳೂರಿನಿಂದ ಕನ್ಯಾಕುಮಾರಿಯವರೆಗೆ ಸೈಕಲ್ ಸವಾರಿ ಕೈಗೊಂಡ ಶ್ರೀ ಎಸ್. ಸುರೇಶ್ ಕುಮಾರ್ ಅವರ ಸಾಧನೆ ಶ್ಲಾಘನೀಯ ಮತ್ತು ಸ್ಫೂರ್ತಿದಾಯಕವಾಗಿದೆ. ಆರೋಗ್ಯದ ಹಿನ್ನಡೆಗಳನ್ನು ಮೆಟ್ಟಿ ನಿಂತು ಅವರು ಈ ಸಾಧನೆ ಮಾಡಿರುವುದು ಅವರ ದೃಢ ನಿರ್ಧಾರ, ಅಚಲ ಮನೋಭಾವವನ್ನು ಎತ್ತಿ ತೋರಿಸುತ್ತದೆ. ಇದು ಫಿಟ್ನೆಸ್ ಕುರಿತು ಪ್ರಮುಖ ಸಂದೇಶವನ್ನೂ ನೀಡುತ್ತದೆ.

ಅವರೊಂದಿಗೆ ಮಾತನಾಡಿ, ಅವರ ಈ ಪ್ರಯತ್ನಕ್ಕೆ ಅಭಿನಂದನೆ ಸಲ್ಲಿಸಿದೆ ಎಂದು ಪ್ರಧಾನಿ ಮೋದಿಯವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಈ ಬಗ್ಗೆ ಪ್ರಧಾನಿ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿರುವುದು ನನ್ನ ಸುಕೃತ, ಎಂದಿರುವ ಸುರೇಶ್‌ಕುಮಾರ್, 2025 ರಲ್ಲಿ 8 ಸಾವಿರ ಕಿ.ಮೀ. ಸೈಕಲ್ ಸವಾರಿ ಮಾಡಿರುವುದಕ್ಕೆ ಪ್ರಧಾನಿಯವರು ಆಶ್ಚರ್ಯ ವ್ಯಕ್ತಪಡಿಸಿದರು, ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಸುರೇಶ್ ಕುಮಾರ್ ಅವರು 2024ರ ಆಗಸ್ಟ್‌ನಲ್ಲಿ 'ಚಿಕನ್ ಗುನ್ಯಾ ಎನ್ಸೆಫಲೋಪತಿ' ಎಂಬ ಅಪರೂಪದ ನರವೈಜ್ಞಾನಿಕ ಸಮಸ್ಯೆಗೆ ತುತ್ತಾಗಿದ್ದರು. ಈ ಕಾಯಿಲೆಯಿಂದಾಗಿ ಅವರ ಕೈ ಬೆರಳುಗಳನ್ನು ಅಲುಗಾಡಿಸಲೂ ಸಾಧ್ಯವಾಗದೆ ಸಂಪೂರ್ಣ ಹಾಸಿಗೆ ಹಿಡಿದಿದ್ದರು.

ಆದರೆ, ತಮ್ಮ ಛಲದಿಂದಾಗಿ ಎರಡು-ಮೂರು ತಿಂಗಳ ಚಿಕಿತ್ಸೆ ಮತ್ತು ವಿಶ್ರಾಂತಿಯ ನಂತರ ಅವರು ಚೇತರಿಸಿಕೊಂಡರು. 2025ರ ಮಾರ್ಚ್‌ನಲ್ಲಿ ಮತ್ತೆ ಸೈಕಲ್ ಸವಾರಿ ಆರಂಭಿಸಿದ ಅವರು, ಕಳೆದುಹೋದ ದೈಹಿಕ ಶಕ್ತಿಯನ್ನು ಮರಳಿ ಪಡೆಯಲು ಸೈಕ್ಲಿಂಗ್ ತಮಗೆ ವರದಾನವಾಯಿತು ಎಂದು ಸಂತೋಷದಿಂದ ಹೇಳಿಕೊಳ್ಳುತ್ತಾರೆ. ತಮ್ಮ ಮೊದಲ ಸೈಕಲ್ ಪ್ರಯಾಣದ ಐದು ದಶಕಗಳ ಸಂಭ್ರಮಾಚರಣೆಗಾಗಿ ಈ ಪ್ರಯಾಣವನ್ನು ಅವರು 2024ರಲ್ಲೇ ಯೋಜಿಸಿದ್ದರು. ಆದರೆ, ಅನಾರೋಗ್ಯದಿಂದಾಗಿ ಈ ಯೋಜನೆ ಮುಂದೂಡಲ್ಪಟ್ಟಿತ್ತು. ಅಂತಿಮವಾಗಿ, ಡಿಸೆಂಬರ್ 2025ರಲ್ಲಿ ಈ ಸಾಹಸಮಯ ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ರಾಜಾಜಿನಗರ ಪೆಡಲ್ ಪವರ್' ತಂಡದ ಒಟ್ಟು 12 ಸದಸ್ಯರೊಂದಿಗೆ ಡಿಸೆಂಬರ್ 23ರಂದು ಬೆಳಿಗ್ಗೆ 4 ಗಂಟೆಗೆ ಬೆಂಗಳೂರಿನಿಂದ ಹೊರಟು, ಕೇವಲ 37 ಗಂಟೆಗಳ ಸೈಕ್ಲಿಂಗ್ ಅವಧಿಯಲ್ಲಿ ಕನ್ಯಾಕುಮಾರಿ ತಲುಪಿದರು.


ಉದಯವಾಹಿನಿ ಚಿತ್ರ

### ಐದು ದಿನಗಳ ಪ್ರಯಾಣದ ವಿವರ

**ಮೊದಲ ದಿನ 157 ಕಿ.ಮೀ (8.2 ಗಂಟೆಗಳು), ಎರಡನೇ ದಿನ 159 ಕಿ.ಮೀ (8.3 ಗಂಟೆಗಳು), ಮೂರನೇ ದಿನ 155 ಕಿ.ಮೀ (8.1 ಗಂಟೆಗಳು), ನಾಲ್ಕನೇ ದಿನ 156 ಕಿ.ಮೀ (8.2 ಗಂಟೆಗಳು) ಮತ್ತು ಐದನೇ ದಿನ 73 ಕಿ.ಮೀ (4 ಗಂಟೆಗಳು) ಕ್ರಮಿಸಿದರು. ಒಟ್ಟು 702 ಕಿಲೋಮೀಟರ್ ದೂರವನ್ನು ಅವರು ಕ್ರಮಿಸಿದ್ದಾರೆ.**

### ಬೆಂಗಳೂರಿನಿಂದ ಕನ್ಯಾಕುಮಾರಿಯವರೆಗೆ ಸೈಕಲ್ ಸವಾರಿ

**ರಾಜಾಜಿನಗರ ಕ್ಷೇತ್ರದ ಶಾಸಕ ಎಸ್. ಸುರೇಶ್ ಕುಮಾರ್ ಅವರು, ಗಂಭೀರ ಆರೋಗ್ಯ ಸಮಸ್ಯೆಯಿಂದ ಚೇತರಿಸಿಕೊಂಡು, ಬೆಂಗಳೂರಿನಿಂದ ಕನ್ಯಾಕುಮಾರಿಯವರೆಗೆ ಕೇವಲ ಐದು ದಿನಗಳಲ್ಲಿ 702 ಕಿಲೋಮೀಟರ್ ಸೈಕಲ್ ತುಳಿದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಆಗಸ್ಟ್ 2024 ರಲ್ಲಿ 'ಚಿಕನ್ ಗುನ್ಯಾ ಎನ್ಸೆಫಲೋಪತಿ' ಎಂಬ ನರವೈಜ್ಞಾನಿಕ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ ಅವರು, ಎರಡು-ಮೂರು ತಿಂಗಳ ಚಿಕಿತ್ಸೆಯ ನಂತರ ಚೇತರಿಸಿಕೊಂಡು, ಮಾರ್ಚ್ 2025ರಲ್ಲಿ ಮತ್ತೆ ಸೈಕ್ಲಿಂಗ್ ಆರಂಭಿಸಿದರು. ತಮ್ಮ ಮೊದಲ ಸೈಕಲ್ ಪ್ರಯಾಣದ ಐದು ದಶಕಗಳ ನೆನಪಿಗಾಗಿ ಈ ಸಾಹ ಸಮಯ ಪಯಣವನ್ನು ಡಿಸೆಂಬರ್ 2025ರಲ್ಲಿ ಯಶಸ್ವಿಯಾಗಿ ಪೂರೈಸಿದ್ದಾರೆ.**

# ಕೊನೆಗೂ ಸಕಾಲದಲ್ಲಿ ಜಿಗಿತ ಕಂಡ ಮೈಸೂರು

## ಶೇ.96.94 ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಿ ನಾಲ್ಕನೇ ಸ್ಥಾನಕ್ಕೆ ಏರಿದೆ

• ಉದಯವಾಹಿನಿ, ಮೈಸೂರು



ಇಲಾಖೆಯ ಅಧಿಕಾರಿಗಳು ಸಿಬ್ಬಂದಿಯ ಸಭೆ

ಸಕಾಲ ಯೋಜನೆಯ ಸೇವೆಯ ರ್‍ಯಾಂಕಿಂಗ್‌ನಲ್ಲಿ ತೀವ್ರ ಕುಸಿತ ಕಂಡಿದ್ದ ಮೈಸೂರು ಜಿಲ್ಲೆ ಸುಧಾರಣೆ ಕಂಡಿದೆ. ಸಿಎಂ ತವರಲ್ಲಿ ಸಕಾಲ ಸೇವೆಗೆ ಗ್ರಹಣ ಎಂದು ಪ್ರಕಟವಾದ ಬೆನ್ನಲ್ಲೇ ಎಚ್ಚೆತ್ತುಕೊಂಡ ಜಿಲ್ಲಾಡಳಿತ ಹಾಗೂ ಸಕಾಲ ಸೇವೆ ಸುಧಾರಣೆಗೆ ಆದ್ಯತೆ ವಹಿಸಿದೆ.

ರಾಜ್ಯದಲ್ಲಿ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಅತ್ಯಂತ ಕಳಪೆ ಸಾಧನೆ ಮಾಡುವ ಮೂಲಕ ಕಳೆದ ನವೆಂಬರ್‌ನಲ್ಲಿ 28ನೇ ಸ್ಥಾನದಲ್ಲಿದ್ದ ಮೈಸೂರು ಜಿಲ್ಲೆಯು ಈಗ ನಾಲ್ಕನೇ ಸ್ಥಾನಕ್ಕೆ ಜಿಗಿದಿದೆ. ಶೇ.96.94 ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡುವ ಮೂಲಕ ಮೈಸೂರು ಸಕಾಲ ಸೇವೆಯಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿದೆ.

**ಆಡಳಿತ ಯಂತ್ರಕ್ಕೆ ಚುರುಕು:** ಕಳೆದ ಜನವರಿಯಿಂದ ನವೆಂಬರ್‌ವರೆಗೂ ಸಕಾಲ ರ್‍ಯಾಂಕಿಂಗ್ ಒಂದಂಕಿ ಸ್ಥಾನಕ್ಕೆ ಸಿಎಂ ತವರು ಜಿಲ್ಲೆ ಏರಿರಲಿಲ್ಲ. 21ನೇ ಸ್ಥಾನದಿಂದ 28 ರವರೆಗೆ ಇರುವ ಮೂಲಕ ಹಿನ್ನಡೆ ಅನುಭವಿಸಿತ್ತು. ಸಿಎಂ ತವರು ಜಿಲ್ಲೆ ಸಕಾಲದಲ್ಲಿ ಹಿನ್ನಡೆ ಅನುಭವಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಡಳಿತ, ಸಕಾಲ ಯೋಜನೆಯಡಿ ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಬೇಕೆಂಬ ಉದ್ದೇಶದಿಂದ ಆಡಳಿತ ಯಂತ್ರಕ್ಕೆ ಚುರುಕು ನೀಡಿದೆ. ನಿರಂತರವಾಗಿ ಜಿಲ್ಲಾಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಭೆ ನಡೆಸುವ ಮೂಲಕ ನಿಗದಿತ ಕಾಲಾವಧಿಯೊಳಗೆ ಅರ್ಜಿ ವಿಲೇವಾರಿ ಮಾಡಿಸಿ ಸಕಾಲ ಯೋಜನೆಯ ಜಾರಿಯಲ್ಲಿ ಸುಧಾರಣೆ ಮಾಡಿದೆ. ಸಕಾಲ ಯೋಜನೆಯ ಜಾರಿಯಲ್ಲಿ ಸುಧಾರಣೆಗೆ ಜಿಲ್ಲಾ ಸಕಾಲ ಸಮನ್ವಯ ಸಮಿತಿಯೊಂದಿಗೆ ಸಕಾಲ ವಾಟ್ಸ್ ಆ್ಯಪ್ ಗ್ರೂಪ್ ರಚನೆ ಮಾಡಲಾಗಿದೆ.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ಜಿಲ್ಲಾ ಸಕಾಲ ಸಮನ್ವಯ ಸಮಿತಿಯ ಅಧ್ಯಕ್ಷರಾಗಿದ್ದು, ಹಾಗೂ ನಿತ್ಯ ಜಿಲ್ಲೆಯ ನಾನಾ ಇಲಾಖೆಯ ವ್ಯಾಪ್ತಿಯಲ್ಲಿ ಸಕಾಲ ಯೋಜನೆಯಡಿ ಸಲ್ಲಿಕೆಯಾಗುವ ಅರ್ಜಿಗಳ ಬಗ್ಗೆ ಮಾಹಿತಿ ಪಡೆಯುವುದರೊಂದಿಗೆ ಪ್ರತಿ ದಿನ ಯೋಜನೆ ಸಂಬಂಧ ಸಭೆ ನಡೆಸುವ ಮೂಲಕ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನಿಗದಿತ ಅವಧಿಯೊಳಗೆ ಟಾರ್ಗೆಟ್ ತಲುಪುವಂತೆ ಸೂಚನೆ ನೀಡುತ್ತಿದ್ದರು.

### ಅರ್ಜಿಗಳ ಶೀಘ್ರ ವಿಲೇವಾರಿ

**ಮುಖ್ಯ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಡಿ ಪ್ರತಿ ದಿನ ಸಕಾಲ ಯೋಜನೆಯ ಯಶಸ್ವಿ ಅನುಷ್ಠಾನ ಸಂಬಂಧ ಸಭೆ ನಡೆಸಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುತ್ತಿತ್ತು, ಎನ್ನುತ್ತಾರೆ ಎಡಿಸಿ ಡಾ.ಪಿ.ಶಿವರಾಜು. ಕಳೆದ ಡಿಸೆಂಬರ್ ತಿಂಗಳಲ್ಲಿ ಸಕಾಲದಡಿ 1.52 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಪೈಕಿ ಶೇ.3.06 ಅರ್ಜಿಗಳು ಮಾತ್ರ ನಿಗದಿತ ಅವಧಿಗಿಂತ ತಡವಾಗಿ ವಿಲೇವಾರಿ ಮಾಡಲ್ಪಟ್ಟಿದ್ದವು. ವರ್ಷದ ಕೊನೆಯ ತಿಂಗಳಲ್ಲಿ ಯೋಜನೆಯಡಿ 1,52,304 ಅರ್ಜಿ ಸಲ್ಲಿಕೆಯಾಗಿದ್ದು, 9978 ಅರ್ಜಿ ತಿರಸ್ಕೃತಗೊಂಡಿದೆ. 4,169 ಅರ್ಜಿ ತಡವಾಗಿ ವಿಲೇವಾರಿಯಾಗಿದ್ದು, 1,31,961 ಅರ್ಜಿ ನಿಗದಿತ ಅವಧಿಯೊಳಗೆ ವಿಲೇವಾರಿಯಾಗಿದೆ ಎನ್ನುತ್ತಾರೆ ಅಧಿಕಾರಿಗಳು.**

# ಆಭರಣದ ಮಳಿಗೆಗಳಿಗೆ ವೃತ್ತ ನಿರೀಕ್ಷಕ ಭೇಟಿ ಭದ್ರತಾ ಕ್ರಮ ಕೈಗೊಳ್ಳುವಂತೆ ಸೂಚನೆ




• ಉದಯವಾಹಿನಿ, ಗುಂಡ್ಲುಪೇಟೆ

ಇತ್ತೀಚಿನ ದಿನಗಳಲ್ಲಿ ಅಭರಣದ ಅಂಗಡಿಗಳಲ್ಲಿ ರಾಬರಿ, ಡಕಾಯಿತ ಪ್ರಕರಣಗಳು ಹೆಚ್ಚಾದ ಹಿನ್ನೆಲೆ ಗುಂಡ್ಲುಪೇಟೆ ಪೊಲೀಸ್ ಠಾಣಾ ವೃತ್ತ ನಿರೀಕ್ಷಕ ಜಯಕುಮಾರ್ ಠಾಣಾ ವ್ಯಾಪ್ತಿಯ ಆಭರಣದ ಅಂಗಡಿಗಳಿಗೆ ಭೇಟಿ ನೀಡಿ ಭದ್ರತಾ ವ್ಯವಸ್ಥೆಯನ್ನ ಪರಿಶೀಲಿಸಿದರು. ಅಭರಣದ ಮಳಿಗೆಗಳಲ್ಲಿ ಸುರಕ್ಷಿತ ಕ್ರಮವಾಗಿ ಸುಸಜ್ಜಿತ ಸಿಸಿಟಿವಿ ಕ್ಯಾಮಾರಗಳನ್ನ ಅಳವಡಿಸುವ ಜೊತೆಗೆ ಸುಸ್ಥಿರವಾಗಿರುವ ಕುರಿತು ಪ್ರತಿನಿತ್ಯ ಪರಿಶೀಲಿಸಬೇಕು ಎಂದು ಮಾಲೀಕರಿಗೆ ಸಲಹೆ ನೀಡಿದರು.

**ಠಾಣೆಯಲ್ಲಿ ವರ್ತಕರ ಸಭೆ :** ಬಂಗಾರದ ಅಂಗಡಿಗಳ ಸುರಕ್ಷಿತ ಹಿತದೃಷ್ಟಿಯಿಂದ ಭದ್ರತಾ ಸಿಬ್ಬಂದಿಯನ್ನ ನಿಯೋಜಿಸಿ ಕಣ್ಗಾವಲು ಕ್ಯಾಮರಾ ಕಾರ್ಯನಿರ್ವಹಣೆಯಲ್ಲಿರುವಂತೆ ಎಚ್ಚರವಹಿಸಿ ಎಂದು ಸೂಚಿಸಿದರು. ಅಭರಣದ ಅಂಗಡಿಗೆ ಯಾರಾದರೂ ಅನುಮಾನಾಸ್ಪದ ವ್ಯಕ್ತಿಗಳು ಬಂದ ಕೂಡಲೇ ಠಾಣೆಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

# ಪೋಕ್ಸೊ ಪ್ರಕರಣ: ಯೂಟ್ಯೂಬರ್ ಬಂಧನ

• ಉದಯವಾಹಿನಿ, ಮಾಗಡಿ

**ಘಟನೆಗೆ ಸಂಬಂಧಿಸಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಸದ್ಯ ಯೂಟ್ಯೂಬರ್ ಒಬ್ಬನನ್ನು ಬಂಧಿಸಲಾಗಿದೆ. ಎಲ್ಲಾ ಆಯಾಮದಿಂದಲೂ ಪ್ರಕರಣದ ತನಿಖೆ ನಡೆಸಲಾಗುತ್ತಿದೆ**
**- ಆರ್. ಶ್ರೀನಿವಾಸ ಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ಹೊಸ ವರ್ಷದ ಸಂಭ್ರಮಾಚರಣೆ ಮುಗಿಸಿ ನಸುಕಿನಲ್ಲಿ ಮನೆಗೆ ಹೋಗುತ್ತಿದ್ದ 17 ವರ್ಷದ ಬಾಲಕಿಯನ್ನು ಕಾರಿನಲ್ಲಿ ಅಪಹರಿಸಿ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ, ಮಾಗಡಿ ಠಾಣೆ ಪೊಲೀಸರು ಯು ಟ್ಯೂಬ್ ನ್ಯೂಸ್ ಚಾನೆಲ್ ನಡೆಸುತ್ತಿರುವ ವ್ಯಕ್ತಿ ಸೇರಿದಂತೆ ಮೂವರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಒಬ್ಬನನ್ನು ಬಂಧಿಸಿದ್ದಾರೆ.



ತುಮಕೂರು ಜಿಲ್ಲೆಯ ಶಿರಾ ಪಟ್ಟಣದ ಆರ್‌ಜೆ ಡಿಜಿಟಲ್ ನ್ಯೂಸ್ ಯೂಟ್ಯೂಬ್ ಚಾನೆಲ್‌ನ ರವಿ ಜಮುನಾ ಬಂಧಿತ.

ಇನ್ನಿಬ್ಬರು ಆರೋಪಿಗಳಾದ ರವಿ ಸ್ನೇಹಿತ ಹಾಗೂ ಮಾಗಡಿಯ ವೆಂಕಟೇಶ್ ಕೃತ್ಯದಲ್ಲಿ ವಹಿಸಿರುವ ಪಾತ್ರದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಬಾಲಕಿ ಚಿಕ್ಕಮ್ಮನ ಮನೆಯಲ್ಲಿ ಅವರ ಕುಟುಂಬ ಹೊಸ ವರ್ಷಾಚರಣೆಗೆ ಸೇರಿತ್ತು. ಅದೇ ಗ್ರಾಮದಲ್ಲಿ ಆರೋಪಿ ವೆಂಕಟೇಶ್‌ಗೆ ಸೇರಿದ್ದ ತೋಟದ ಮನೆಯಲ್ಲಿ ರವಿ ಸೇರಿದಂತೆ ಹಲವು ಸ್ನೇಹಿತರು ಹೊಸ ವರ್ಷದ ಪಾರ್ಟಿಗೆ ಸೇರಿದ್ದರು. ಮನೆಯಲ್ಲಿ ಸಂಭ್ರಮಾಚರಣೆ ಮುಗಿದ ಬಳಿಕ ಬಾಲಕಿ, ರಾತ್ರಿ 2 ಗಂಟೆ ಸುಮಾರಿಗೆ ತನ್ನ ಮನೆಯತ್ತ ಹೋಗುತ್ತಿದ್ದಳು ಎಂದು ಬಾಲಕಿ ತಂದೆ ದೂರಿನಲ್ಲಿ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಇದೇ ವೇಳೆ ಪಾರ್ಟಿ ಮುಗಿಸಿಕೊಂಡು ರವಿ ಹಾಗೂ ಆತನ ಸ್ನೇಹಿತ ಕಾರಿನಲ್ಲಿ ಅದೇ ಮಾರ್ಗದಲ್ಲಿ ಬಂದಿದ್ದಾರೆ. ಆಗ ಎದುರಿಗೆ ಸಿಕ್ಕ ಬಾಲಕಿಯನ್ನು 'ವೆಂಕಟೇಶ್ ತೋಟಕ್ಕೆ ಹೋಗುವ ದಾರಿ ಯಾವುದು' ಎಂದು ಕೇಳಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿ ಮನೆಯತ್ತ ಹೆಜ್ಜೆ ಹಾಕಿದ ಬಾಲಕಿಯನ್ನು ಆರೋಪಿಗಳು ಹಿಂಬಾಲಿಸಿ, ಏಕಾಏಕಿ ಕಾರಿನೊಳಕ್ಕೆ ಎಳೆದುಕೊಂಡಿದ್ದಾರೆ. ಮಾರ್ಗಮಧ್ಯೆ ರವಿ ಸ್ನೇಹಿತ ಇಳಿದುಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

**ಮೈ ಮುಟ್ಟಿ, ಹಲ್ಲೆ:** ಬಾಲಕಿ ಮೈ ಮುಟ್ಟಿ ಅನುಚಿತವಾಗಿ ವರ್ತಿಸಿರುವ ರವಿ, ಪ್ರತಿರೋಧ ತೋರಿದ ಬಾಲಕಿ ಮೇಲೆ ಹಲ್ಲೆ ನಡೆಸಿ ತನ್ನೊಂದಿಗೆ ಸಹಕರಿಸುವಂತೆ ಬೆದರಿಸಿದ್ದಾನೆ. ಮಾಗಡಿಗೆ ಕಾರು ಚಲಾಯಿಸಿ ಮಾರ್ಗಮಧ್ಯೆ ನಿಲ್ಲಿಸಿ ಕೆಳಕ್ಕಿಳಿದಿದ್ದಾನೆ. ಆಗ ಕಾರಿನಲ್ಲಿದ್ದ ರವಿ ಮೊಬೈಲ್‌ನಿಂದ ಬಾಲಕಿ ತನ್ನ ಅಣ್ಣನಿಗೆ ಕರೆ ಮಾಡಿ ಘಟನೆ ಹಾಗೂ ತಾನಿರುವ ಜಾಗದ ಮಾಹಿತಿ ನೀಡಿದ್ದಾಳೆ.

ಇತ್ತ ಚಿಕ್ಕಮ್ಮನ ಮನೆಯಿಂದ ವಾಪಸ್ ಬಾರದೆ ನಾಪತ್ತೆಯಾಗಿದ್ದ ಬಾಲಕಿಯನ್ನು ಹುಡುಕಾಡಿ ಆತಂಕದಲ್ಲಿದ್ದ ಕುಟುಂಬದವರು, ಕೂಡಲೇ ಬಾಲಕಿ ಹೇಳಿದ ಜಾಗಕ್ಕೆ ಕಾರಿನಲ್ಲಿ ಹೋಗಿ ಬಾಲಕಿಯನ್ನು ರಕ್ಷಿಸಿ ರವಿಯನ್ನು ಹಿಡಿದಿದ್ದಾರೆ. ಅಲ್ಲದೆ, ಕೃತ್ಯಕ್ಕೆ ವೆಂಕಟೇಶ್ ಕುಮ್ಮಕ್ಕು ನೀಡಿದ್ದಾನೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ದೂರಿನ ಮೇರೆಗೆ ರವಿ, ಆತನ ಸ್ನೇಹಿತ ಹಾಗೂ ವೆಂಕಟೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ರವಿಯನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳ ಪಾತ್ರದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

# ಬೀದಿ ಬದಿ ವ್ಯಾಪಾರಕ್ಕೆ ವಲಯ ಸ್ಥಾಪನೆ: ಸಂಸದ ಯದುವೀರ್ ಸೂಚನೆ

• ಉದಯವಾಹಿನಿ, ಮೈಸೂರು




ನಗರದಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕೆಲವು ಪರಿಣಾಮಕಾರಿ ಕೈಗೊಳ್ಳಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಬೀದಿ ಬದಿ ವ್ಯಾಪಾರಿಗಳ ವಲಯವನ್ನು ಸ್ಥಾಪಿಸಬೇಕು' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೂಚನೆ ನೀಡಿದರು. ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಬೀದಿಬದಿನ ವ್ಯಾಪಾರಿಗಳಿಗೆ ಪೂರಕವಾಗಿ ಕೆಲವು ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕಾದ ಅಗತ್ಯವಿದೆ. ಅವರಿಂದ ಜನರಿಗೆ ಯಾವುದೇ ತೊಂದರೆ ಎದುರಾಗಬಾರದು.

ಮಾರಾಟ ವಲಯಗಳನ್ನು ಅಭಿವೃದ್ಧಿಪಡಿಸಲು ಅಧಿಕಾರಿಗಳು ಯೋಜನೆ ರೂಪಿಸಬೇಕು ಎಂದು ನಿರ್ದೇಶನ ನೀಡಿದರು. ನಗರದಲ್ಲಿ ಸುರಕ್ಷತೆ, ಭದ್ರತೆ, ಸ್ವಚ್ಛತೆ ಖಚಿತ ಪಡಿಸಬೇಕಾಗಿದೆ. ಎಲ್ಲಾ ಮಾರಾಟಗಾರರಿಗೆ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕು.

ವಲಯಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಯಾವುದೇ ವ್ಯಾಪಾರಿಗಳಿಗೆ ತೊಂದರೆ ಆಗದಂತೆಯೂ ನೋಡಿಕೊಳ್ಳಬೇಕು. ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು' ಎಂದು ತಿಳಿಸಿದರು. ಮೈಸೂರು ಸ್ವಚ್ಛ ಮತ್ತು ಪರಂಪರೆಯ ನಗರವಾಗಿದೆ. ಇದನ್ನು ಮುಂದುವರಿಸಿಕೊಂಡು ಹೋಗಲು ಕೆಲವು ಪರಿಣಾಮಕಾರಿ ಯೋಜನೆ ರೂಪಿಸಬೇಕು. ಅದನ್ನು ಕಾರ್ಯಾನುಷ್ಠಾನ ಮಾಡಬೇಕು.

ಕೆಲವು ಬೀದಿಬದಿ ವ್ಯಾಪಾರಿಗಳ ವಲಯಕ್ಕೆ ಅಧಿಕಾರಿಗಳೊಂದಿಗೆ ಭೇಟಿ ಮಾಡಿ ಪರಿಶೀಲನೆ ನಡೆಸುತ್ತೇನೆ. ಅತಿ ಶೀಘ್ರದಲ್ಲೇ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ ಎಂದರು. ದಸರಾ, ಇತರ ಜಾತ್ರೆ, ಉತ್ಸವ, ರಥೋತ್ಸವ ಸಂದರ್ಭದಲ್ಲಿ ಜನದಟ್ಟಣೆ ಹೆಚ್ಚಾದಾಗ ವಿಶೇಷ ಹಾಕಿಂಗ್ ವಲಯಗಳನ್ನು ರಚಿಸಬಹುದು. ಈ ನಿಟ್ಟಿನಲ್ಲಿಯೂ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹಾಗೂ ಉಪ ಆಯುಕ್ತ ದಾಸೇಗೌಡ ಇದ್ದರು.

# ಉಲ್ಲಾಸ್‌ಗುಲ್ಲಾ ಸಿಹಿ ಉತ್ಪನ್ನ ಬಿಡುಗಡೆ

• ಉದಯವಾಹಿನಿ, ಸಂತೇಮರಹಳ್ಳಿ




ಸಮೀಪದ ಕುದೇರು ಚಾಮುಲ್ ಸಭಾಂಗಣದಲ್ಲಿ ನೂತನವಾಗಿ 100 ಗ್ರಾಂ ಉಲ್ಲಾಸ್ ಗುಲ್ಲಾ ಪ್ಯಾಕೇಟ್ ಅನ್ನು ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ಬಿಡುಗಡೆ ಮಾಡಿದರು.ಬಳಿಕ ಮಾತನಾಡಿ, ವರ್ಷದ ಹಿಂದೆ ಚಾಮುಲ್ ವತಿಯಿಂದ ಉಲ್ಲಾಸ್‌ಗುಲ್ಲಾವನ್ನು ತಯಾರಿಸಲು ಆರಂಭಿಸಿದ್ದು, 200 ಗ್ರಾಂ ಪ್ಯಾಕೆಟ್ ಅನ್ನು ಗ್ರಾಹಕರಿಗೆ ರೂ 100ಕ್ಕೆ ನೀಡಲಾಗುತಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲೆ ವ್ಯಾಪ್ತಿಯಲ್ಲಿ 60ರಿಂದ 70 ಕೆ.ಜಿ ಮಾರಾಟವಾಗುತಿತ್ತು. ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಉಲ್ಲಾಸ್ ಗುಲ್ಲಾ ಸಿಹಿ ದೊರಕಬೇಕು ಎನ್ನುವ ಉದ್ದೇಶದಿಂದ ಚಾಮುಲ್ ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಿ ಗ್ರಾಹಕರಿಗೆ ಹೊಸ ವರ್ಷದ ಅಂಗವಾಗಿ 100 ಗ್ರಾಂ ಪ್ಯಾಕ್‌ಗೆ ರೂ. 50 ದರ ವಿಧಿಸಲಾಗಿದೆ. 200 ಗ್ರಾಂ ಪ್ಯಾಕೇಟ್‌ಗೆ ರಿಯಾಯಿತಿ ದರದಲ್ಲಿ ರೂ. 90ಕ್ಕೆ ನೀಡಲಾಗುತ್ತದೆ ಎಂದರು. ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾಲು, ಮೊಸರು ಉತ್ಪಾದಿಸುವ ನಿಟ್ಟಿನಲ್ಲಿ ಈಗಾಗಲೇ ಜಿಲ್ಲೆ ವ್ಯಾಪ್ತಿಯಲ್ಲಿ 50 ಕ್ಷೀರ ಕೇಂದ್ರಗಳನ್ನು ತೆರೆದಿದ್ದು. ಈ ಹಿನ್ನೆಲೆಯಲ್ಲಿ ದಿನಕ್ಕೆ ಹಾಲು, ಮೊಸರು ಮಾರಾಟವಾಗುತ್ತಿದೆ, ಚಾಮುಲ್ ರೈತರ ಹಿತ ಕಾಯುವ ನಿಟ್ಟಿನಲ್ಲಿ ವಾರಕೊಮ್ಮೆ ಉತ್ಪಾದಕರ ಖಾತೆಗೆ ನೇರವಾಗಿ ಆನ್ ಲೈನ್ ಮೂಲಕ ಹಣ ಜಮಾ ಮಾಡಲಾಗುತ್ತಿದೆ' ಎಂದು ತಿಳಿಸಿದರು.

# ಕೆಳಸ್ತರದ ಸಮುದಾಯಕ್ಕೆ ಶಿಕ್ಷಣವೇ ಶ್ರೀರಕ್ಷೆ: ಕೆ.ಸಿ. ಕೃಷ್ಣಶೆಟ್ಟಿ

• ಉದಯವಾಹಿನಿ, ಕಿಕ್ಕೇರಿ





ಕೆಳಸ್ತರದ ಧ್ವನಿ ಇಲ್ಲದ ಸಮುದಾಯವಾದ ನೇಕಾರರಿಗೆ ಶಿಕ್ಷಣ ರಕ್ಷಾಕವಚ ಆಗಬೇಕಿದೆ ಎಂದು ಹಾಸನ ಕುರುಹಿನಶೆಟ್ಟಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಸಿ. ಕೃಷ್ಣಶೆಟ್ಟಿ ಹೇಳಿದರು.ಪಟ್ಟಣದಲ್ಲಿ ಕುರುಹಿನಶೆಟ್ಟಿ ಸಂಘ ಬುಧವಾರ ಹಮ್ಮಿಕೊಂಡಿದ್ದ ಸಮಾಜದ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧ್ವನಿ ಇಲ್ಲದ ಸಮುದಾಯದ ಮಕ್ಕಳಿಗೆ ಶಿಕ್ಷಣ ಧ್ವನಿಯಾದರೆ ಮಾತ್ರ ಮುಖ್ಯವಾಹಿನಿಯಲ್ಲಿ ಬದುಕಬಹುದಾಗಿದೆ. ನೇಕಾರಿಕೆ ಕಸುಬು ಅಳಿವಿನಂಚಿನಲ್ಲಿದೆ. ಕಚ್ಚಾವಸ್ತು, ಕಾರ್ಮಿಕರ ಕೊರತೆ, ಬೆಲೆ ಕುಸಿತದಂತಹ ಸಮಸ್ಯೆಗಳನ್ನು ಎದುರಿಸಲಾಗದೆ ಮಗ್ಗದ ಗುಂಡಿಗಳು ಗ್ರಾಮದಲ್ಲಿ ಮುಚ್ಚುತ್ತಿವೆ. ಕಸುಬು ಹರಸಿ ಪಟ್ಟಣಗಳಿಗೆ ಗುಳೇ ಹೋಗಿದ್ದಾರೆ. ಅನ್ಯಕಸುಬು ತಿಳಿಯದಿರುವ ಸಮುದಾಯಕ್ಕೆ ಆಸರೆಯಾಗಿ ಸರ್ಕಾರ ನಿಲ್ಲಬೇಕಿದೆ ಎಂದರು. ಕೋವಿಡ್ ವೇಳೆ ಅಂಡ್ರಾಯಿಡ್ ಮೊಬೈಲ್ ಬಂತು. ಆನ್ ಲೈನ್ ಶಿಕ್ಷಣ ಮರೆತು, ಮೊಬೈಲ್ ಚಟವಾಗಿ ಭವಿಷ್ಯದ ಮಕ್ಕಳಿಗೆ ಮಾರಕವಾಗುವಂತಾಗಿದೆ. ಪೋಷಕರು ತಿಳಿ ಹೇಳಿ, ಪುಸ್ತಕ, ಪತ್ರಿಕೆ ಓದಿ ಜ್ಞಾನವೃದ್ಧಿಸಿಕೊಳ್ಳಲು ತಿಳಿ ಹೇಳುವ ಕೆಲಸ ಮಾಡಿ ಎಂದು ತಿಳಿಹೇಳಿದರು. ಶಶಿ ಸಂಜೀವಿನಿ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಎಚ್. ಸಂಜೀವಶೆಟ್ಟಿ ಮಾತನಾಡಿ, ಹಿಂದುಳಿದ ತಮ್ಮ ಸಮಾಜದಲ್ಲಿ ಸಂಘಟನೆ ಕೊರತೆ ಕಾಡುತ್ತಿದೆ. ಯುವಕರು ಸಮುದಾಯದ ಸಾಂಘಿಕ ಶಕ್ತಿಗೆ ಮುಂದಾಗಿ ಎಂದು ವಿನಂತಿಸಿದರು. ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಬಿಎ, ಬಿಇ ಮತ್ತಿತರ ಪದವಿ ಮುಗಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ವಿವಿಧ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು. ಸಮಾಜದ ಹೊಸ ವರ್ಷದ ದಿನದರ್ಶಿಕೆ, ಏಕಾದಶಿ, ದ್ವಾದಶಿ ಪೂಜೆ, ಸಿದ್ದಾರೂಢಸ್ವಾಮಿ ಅವರಿಗೆ ಪಂಚಾಮೃತ ಅಭಿಷೇಕದೊಂದಿಗೆ ವಿವಿಧ ಪೂಜೆಗಳು ನಡೆದವು. ಅನ್ನ ದಾಸೋಹ ಏರ್ಪಡಿಸಲಾಗಿತ್ತು. ಸೆಸ್ಕಾಂ ನಿವೃತ್ತ ಎಇಇ ತಿಮ್ಮಶೆಟ್ಟಿ, ಜಿಲ್ಲಾ ನೇಕಾರ ಸಮಾಜ ಒಕ್ಕೂಟದ ಅಧ್ಯಕ್ಷ ಹರಿಪ್ರಸಾದ್, ಹಾಸನ ಸಂಘದ ಅಧ್ಯಕ್ಷ ಕೆ.ಎಚ್. ನಾರಾಯಣಶೆಟ್ಟಿ, ಕಿಕ್ಕೇರಿ ಸಮಾಜದ ಅಧ್ಯಕ್ಷ ಸೂರ್ಯನಾರಾಯಣ, ಕಾರ್ಯದರ್ಶಿ ಡಿ. ಉಮೇಶ್, ಉಪಾಧ್ಯಕ್ಷೆ ಎಸ್.ಆರ್. ವಿನೋದಮ್ಮ, ಜಂಟಿ ಕಾರ್ಯದರ್ಶಿ ಸುನೀತಾ ದಯಾನಂದ್, ಮೈಸೂರು ರಾಮಮಂದಿರ ಅಧ್ಯಕ್ಷ ಕೆ.ಜೆ. ರಾಮಶೆಟ್ಟಿ, ನಿವೃತ್ತ ಪ್ರೊಫೆಸರ್ ನಾರಾಯಣಶೆಟ್ಟಿ, ನಾಗೇಶ್, ಕೆ.ಆರ್. ಪಾಂಡು, ಸಿ.ಎಸ್. ಸಾವಿತ್ರಿ, ಭಾರತಿ, ಗಿರಿಜಾ, ಲೀಲಾವತಿ, ಪಾರ್ವತಿ, ಭಾಗವಹಿಸಿದ್ದರು.

# ಜಕಣಾಚಾರಿ ಎಂದೆಂದಿಗೂ ಅಮರಶಿಲ್ಪಿ ಕನ್ನಡ, ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸತೀಶ್

• ಉದಯವಾಹಿನಿ, ರಾಮನಗರ




**ವಿಶ್ವದಲ್ಲಿಯೇ ಅತ್ಯುತ್ತಮ ವಾಸ್ತು ಶಿಲ್ಪಿ ಕಲೆಯನ್ನು ಮುಂಚೂಣಿಗೆ ತಂದಿದೇ ಅಮರ ಶಿಲ್ಪಿ ಜಕಣಾಚಾರಿಯವರು, ಅವರು ನಮ್ಮ ಸಮುದಾಯದವರಾಗಿರುವುದು ನಮಗೆ ಹೆಮ್ಮೆಯ ವಿಷಯ ಅವರು ಹಾಕಿಕೊಟ್ಟಂತಹ ದಾರಿಯಲ್ಲಿಯೇ ನಮ್ಮಗಳ ಮೂಲ ಕಸುಬನ್ನು ಇಂದಿನ ಆಧುನಿಕ ಜಗತ್ತಿಗೆ ನಾವುಗಳು ಮುಂದುವರೆಸಿಕೊಂಡು ಹೋಗುವುದು ಅವಶ್ಯಕವಾಗಿದೆ ಎಂದರು.**
**-ಸಮುದಾಯದ ಮುಖಂಡರಾದ ಶ್ರೀಧರ್ ಆಚಾರ್**

ಅಮರ ಶಿಲ್ಪಿ ಜಕಣಾಚಾರಿಯವರು ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಇತ್ಯಾದಿಗಳ ಕಡೆ ಅವರ ಶಿಲ್ಪ ಕಲೆಗಳ ಕೊಡುಗೆ ನೀಡಿದ್ದು, ಎಲ್ಲಿಯೂ ಸಹ ಅವರು ರಚಿಸಿರುವುದು ಎಂದು ಬರೆದುಕೊಂಡಿರುವುದಿಲ್ಲ. ಆ ರೀತಿಯ ನೈಜ ಕಲಾವಿದರು ಇಂದಿಗೂ ಅಜರಾಮರರಾಗಿ ಉಳಿದಿರುತ್ತಾರೆ. ಆದ್ದರಿಂದಲೆ ಜಕಣಾಚಾರಿ ಎಂದೆಂದಿಗೂ ಅಮರಶಿಲ್ಪಿ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಸತೀಶ್ ಹೇಳಿದರು.


ಅವರು ನಗರದ ಕಂದಾಯ ಭವನದ ಮೂರನೇ ಮಹಡಿಯ ಕೊಠಡಿ ಸಂಖ್ಯೆ 409ರಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆಯಲ್ಲಿ ಮಾತನಾಡಿದರು.

ವಿಶ್ವಕರ್ಮ ಅಭಿವೃದ್ಧಿಯ ಮುಖಾಂತರ ಸವಲತ್ತುಗಳನ್ನು ಬಳಸಿಕೊಂಡು ಎಲ್ಲರೂ ಸ್ವಾವಲಂಬಿಯಾಗಿ ಬದುಕಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು ಹಾಗೂ ತಮ್ಮ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಿ ತಮ್ಮ ಮೂಲ ಕಸುಬಿನ ಜೊತೆಗೆ ಅವರು ಸಮಾಜಕ್ಕೆ ಕೊಡುಗೆಯಾಗುವ ರೀತಿಯಲ್ಲಿ ಬೆಳಸಬೇಕು ಎಂದರು. ಜಿಲ್ಲಾ ಪಂಚಾಯತ್‌ನ ಸಹಾಯಕ ಕಾರ್ಯದರ್ಶಿಗಳಾದ ಶಿವಕುಮಾರ್, ಸಮುದಾಯದ ಮುಖಂಡರಾದ ರಾಜ್ಯ ಗೌರವಾಧ್ಯಕ್ಷರಾದ ಬಿ. ಉಮೇಶ್, ತಾಲ್ಲೂಕು ಅಧ್ಯಕ್ಷರಾದ ಪಿ. ಲಿಂಗಾಚಾರ್, ಕಾರ್ಯದರ್ಶಿ ಶ್ರೀನಿವಾಸ್, ಪ್ರಭು, ಜಗನ್ನಾಥ್, ಲೋಕೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಿಲ್ಲೆಯ ಬಹುತೇಕ ಕೆರೆಗಳ ಒತ್ತುವರಿ ತೆರವು: ಜಿಲ್ಲಾಧಿಕಾರಿ ಎಂ.ಆರ್.ರವಿ

## ಜಿಲ್ಲೆಯ ಎಲ್ಲಾ ಕೆರೆಗಳನ್ನು ಒತ್ತುವರಿ ಮುಕ್ತಗೊಳಿಸಿ ಆಯಾ ಇಲಾಖೆಗಳ ಸುಪರ್ದಿಗೆ ಒಪ್ಪಿಸಲು ತಹಶೀಲ್ದಾರ್‌ಗಳಿಗೆ ಸೂಚನೆ

• ಉದಯವಾಹಿನಿ, ಕೋಲಾರ




ಜಿಲ್ಲೆಯ ಎಲ್ಲಾ ಕೆರೆಗಳನ್ನು ಒತ್ತುವರಿ ಮುಕ್ತಗೊಳಿಸಿ ಆಯಾ ಇಲಾಖೆಗಳ ಸುಪರ್ದಿಗೆ ಒಪ್ಪಿಸಲು ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿದ್ದೇನೆ. ಫೆನ್ಸಿಂಗ್ ಅಥವಾ ಟ್ರೆಂಚ್ ಹಾಕಿಕೊಂಡು ಮತ್ತೆಂದೂ ಕೆರೆಗಳ ಒತ್ತುವರಿ ಆಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ತಿಳಿಸಿದರು. ಜಿಲ್ಲಾಧಿಕಾರಿಯಾಗಿ 1 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಗರದ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆರೆಗಳು ಜನರ ಜೀವನಾಡಿ. ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಬದುಕು ರೂಪಿಸಲು ಕಾರಣವಾಗಿವೆ. ಜಿಲ್ಲಾ ಪಂಚಾಯಿತಿ, ಸಣ್ಣ ನೀರಾವರಿ ಇಲಾಖೆಯ ಸುಪರ್ದಿಯಲ್ಲಿರುವುದು ಸೇರಿದಂತೆ ಜಿಲ್ಲೆಯಲ್ಲಿ 3,232 ಕೆರೆಗಳಿದ್ದು, ಕೇವಲ 300 ಕೆರೆಗಳ ಸರ್ವೆ ಬಾಕಿ ಇದೆ. 1,389 ಕೆರೆಗಳು ಒತ್ತುವರಿ ತೆರವುಗೊಳಿಸಲಾಗಿದೆ.

ಅದರಲ್ಲಿ 51 ಕೆರೆ ಒತ್ತುವರಿ ಮುಕ್ತ ಆಗಿಲ್ಲ. ಕೆಲವರು ಬೆಳೆ ಬೆಳೆದಿದ್ದರೆ, ಇನ್ನು ಕೆಲವೆಡೆ ನೀರು ನಿಂತಿದೆ. ಸದ್ಯದಲ್ಲೇ ಎಲ್ಲಾ ಕೆರೆಗಳ ಒತ್ತುವರಿ ಮುಕ್ತ ಮಾಡಲಾಗುವುದು ಎಂದರು.

**ನಗರದ ಸ್ವಚ್ಛತೆ ಕೇವಲ ನಗರಸಭೆಯ ಕೆಲಸವಲ್ಲ:** ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಮನೆಯನ್ನು ಹೇಗೆ ಶುದ್ಧವಾಗಿ ಇಟ್ಟುಕೊಳ್ಳಬೇಕೋ ಅದೇ ರೀತಿ ನಗರವನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಕಸಮುಕ್ತ ಮಾಡಲು ಕಷ್ಟ. ಆದರೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ನಗರವು ಲಿವೆಬಲ್, ಆಗಿರಬೇಕು. ಸ್ವಚ್ಛತಾ ಕಾರ್ಯಪಡೆ ರಚಿಸಿ ಕೆಲಸ ಮಾಡಲಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಮೂಲದಲ್ಲಿಯೇ ಕ್ರಮ ವಹಿಸಲಾಗುತ್ತಿದೆ ಎಂದು ವಿವರಿಸಿದರು.

ಅಮೃತ ಯೋಜನೆಯಡಿ ನಗರದ ಉದ್ಯಾನ ಹಾಗೂ ದಾನಿಗಳ ಮೂಲಕ ಸರ್ಕಲ್ ಅಭಿವೃದ್ಧಿಪಡಿಸಲಾಗುತ್ತಿದೆ. ಕೋಲಾರಮ್ಮ ದೇವಸ್ಥಾನದ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಮುಂದಿನ ಜಾಗವನ್ನು ಖರೀದಿಸಿ ದೇಗುಲಕ್ಕೆ ಕೊಡಿಸಲಾಗಿದೆ. ಭಕ್ತಾದಿಗಳಿಗೆ ಲಡ್ಡು ಕೊಡಲಾಗುತ್ತಿದ್ದು, ಅದರಿಂದ ದೇವಾಲಯಗಳಿಗೆ ಆದಾಯವೂ ಬರುತ್ತಿದೆ. ಅಂತರಗಂಗೆ ದೇಗುಲಕ್ಕೆ ಪಲ್ಲವಿ ಸರ್ಕಲ್‌ನಲ್ಲಿ ಪ್ರವೇಶದ್ವಾರ ನಿರ್ಮಿಸಲಾಗುತ್ತಿದೆ. ಬಂಗಾರು ತಿರುಪತಿಗೆ ಲಿಫ್ಟ್ ಮಾಡಿಸಲಾಗುತ್ತಿದೆ.

### ಕಂದಾಯ ದಾಖಲೆ ಡಿಜಿಟಲೀಕರಣ

**ಭೂಸುರಕ್ಷಾ ಯೋಜನೆಯಡಿ ಎಲ್ಲಾ ಕಂದಾಯ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ನಕಲಿ ದಾಖಲೆ ಸೃಷ್ಟಿ ತಿದ್ದುಪಡಿ ತಪ್ಪಿಸಲು ಕ್ರಮ ವಹಿಸಲಾಗಿದೆ. ಈಗಾಗಲೇ ಕೋಲಾರ ತಾಲ್ಲೂಕು ಮುಗಿದಿದೆ. ಮಾಲೂರು ಕೆಜಿಎಫ್ ದಾಖಲೆಯನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ದಾಖಲೆಗಳನ್ನು ಕುಳಿತಲ್ಲಿಯೇ ಆನ್‌ಲೈನ್‌ನಲ್ಲಿ ಪಡೆದುಕೊಳ್ಳಬಹುದು. ಹಾಗೆಯೇ ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಕಡತಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ.** -ಎಂ.ಆರ್.ರವಿ

ಜಿಲ್ಲೆಯ 1,392 ದೇಗುಲಗಳಲ್ಲಿ ಮುಕ್ತ ಪ್ರವೇಶ ಫಲಕ ಅಳವಡಿಸಲಾಗಿದೆ. ನರೇಗಾದಿಂದ 1ಸಾವಿರ ಶಾಲೆಗಳ ಆವರಣದಲ್ಲಿ ಧನ್ವಂತರಿ ಬನ ನಿರ್ಮಿಸಲಾಗುತ್ತಿದೆ. ಅಂಬೇಡ್ಕರ್ ಡಿಜಿಟಲ್ ಲೈಬ್ರರಿ ಸ್ಥಾಪಿಸಲಾಗುತ್ತಿದೆ ಎಂದು ಅಭಿವೃದ್ಧಿ ಕೆಲಸಗಳತ್ತ ಬೆಳಕು ಚೆಲ್ಲಿದರು.

ನಿರ್ಮಿತಿ ಕೇಂದ್ರದಿಂದ 1 ಎಕರೆ ಜಾಗದಲ್ಲಿ ಸಿಮೆಂಟ್ ಬ್ಲಾಕ್ ಮಾಡಲಾಗುತ್ತಿದೆ. ನಿರ್ಮಾಣ ಕ್ಷೇತ್ರದ ಕಾರ್ಮಿಕರಿಗೆ ಕೌಶಲ ಕಲಿಸಿಕೊಡಲು ಕೆಜಿಎಫ್‌ನಲ್ಲಿ ಐದು ಎಕರೆ ಜಾಗದಲ್ಲಿ ತರಬೇತಿ ಕೇಂದ್ರ ನಿರ್ಮಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಎಪಿಎಂಸಿ ಜಾಗ ಸಂಬಂಧ 60 ಎಕರೆ ಜಮೀನು ಇದ್ದು, ಸರ್ಕಾರಕ್ಕೆ ಪ್ರಸ್ತಾವ ಕಳಿಸಿಕೊಡಲಾಗಿದೆ. ಇನ್ನು 20 ಎಕರೆ ಜಾಗವಿದ್ದು, ಅದನ್ನು ಪಡೆಯಲು ಪ್ರಯತ್ನಿಸಲಾಗುವುದು. ಈಗಿರುವ ಎಪಿಎಂಸಿ ಜಾಗವನ್ನು ಹೂವು, ಹಣ್ಣು ಮಾರಾಟ ಕೇಂದ್ರ ಮಾಡಲಾಗುವುದು ಎಂದು ಹೇಳಿದರು ಕೋಲಾರ ನಗರದೊಳಗಿನ ರಸ್ತೆ ವಿಸ್ತರಣೆಯನ್ನು ರೂ.10 ಕೋಟಿ ವೆಚ್ಚದಲ್ಲಿ ಮಾಡಲಾಗುವುದು. ವೆಂಡಿಂಗ್ ಕಮಿಟಿ ಮಾಡಿದ್ದು, ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಗುವುದು.

ಬೀದಿ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು. ನಾಲ್ಕು ಚಕ್ರ ಹಾಗೂ ದ್ವಿ ಚಕ್ರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುವುದು.

# ಮಿನಿ ನ್ಯೂಸ್

## ಕನ್ನಡಿಗರ ಬೇಡಿಕೆ ಈಡೇರಿಕೆಗಾಗಿ ವರ್ಷಪೂರ್ತಿ ಚಳವಳಿ: ವಾಟಾಳ್




• ಉದಯವಾಹಿನಿ, ಮಂಡ್ಯ

ಸಮಗ್ರ ಕನ್ನಡಿಗರ ಬೇಡಿಕೆಗಳ ಈಡೇರಿಕೆಗಾಗಿ ಹೊಸ ವರ್ಷ ಜನವರಿ 1ರಿಂದ ವರ್ಷದಾದ್ಯಂತ 'ಕನ್ನಡ ಚಳವಳಿ ವಾಟಾಳ್ ಪಕ್ಷದ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹೇಳಿದರು. ನಗರದ ಸಂಜಯ್ ವೃತ್ತದ ಬಳಿ ಈಡುಗಾಯಿ ಒಡೆದು, ಕಡೇಪುರಿ ಹಂಚಿ ನಡೆದ ವಿನೂತನ ಚಳವಳಿಯಲ್ಲಿ ಅವರು ಮಾತನಾಡಿದರು. ಬೆಳಗಾವಿ ಉಳಿಸಬೇಕು, ಎಂಇಎಸ್ ನಿಷೇಧ ಮಾಡಬೇಕು, ಗಡಿನಾಡು ಬೆಳಗಾವಿ ಅಭಿವೃದ್ಧಿಯಾಗಬೇಕು, ಕನ್ನಡಿಗರಿಗೆ ಉದ್ಯೋಗ ಕಲ್ಪಿಸಬೇಕು, ಗ್ರೇಟರ್ ಬೆಂಗಳೂರು ಬೇಡವೇ ಬೇಡ, ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಆದ್ಯತೆ ನೀಡಬೇಕು, ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಅಭಿವೃದ್ಧಿಯಾಗಬೇಕು ಎಂದು ಒತ್ತಾಯಿಸಿದರು. ಮೆಟ್ರೊ ದರ ಇಳಿಸಬೇಕು. ಮಹದಾಯಿ ಕಳಸಾ ಬಂಡೂರಿ ಯೋಜನೆ ಅನುಷ್ಠಾನಗೊಳ್ಳಬೇಕು. ಮೇಕೆದಾಟು ಯೋಜನೆ ಕಾರ್ಯಗತಗೊಳ್ಳಬೇಕು, ಕನ್ನಡದಲ್ಲೇ ನಾಮಫಲಕ ಅಳವಡಿಸಬೇಕು, ಪುರುಷರಿಗೂ ಉಚಿತ ಬಸ್ ಪಾಸ್ ನೀಡಬೇಕು. ರಾಜ್ಯದಲ್ಲಿ ಪರಭಾಷಾ ದಬ್ಬಾಳಿಕೆ ನಿಲ್ಲಬೇಕು.

## ಮಾಸ್ಕ್ ಧರಿಸಿ ನಸುಕಿನಲ್ಲಿ ಮಾಗಡಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ!

• ಉದಯವಾಹಿನಿ, ಮಾಗಡಿ

ಪಟ್ಟಣದಲ್ಲಿರುವ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ನಸುಕಿನ 4.30ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗದೆ ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ಎಂಬುದನ್ನು ಬಾಲಕೃಷ್ಣ ಖುದ್ದು ಪರಿಶೀಲಿಸಿದರು.ಬಳಿಕ ವಾರ್ಡ್‌ಗಳಲ್ಲಿದ್ದ ರೋಗಿಗಳು ಹಾಗೂ ಆಗಷ್ಟೇ ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ಬಂದಿದ್ದ ಕೆಲ ರೋಗಿಗಳನ್ನು ಮಾತನಾಡಿಸಿದರು. ಆಸ್ಪತ್ರೆಯಲ್ಲಿ ಸರಿಯಾಗಿ ಚಿಕಿತ್ಸೆ ಮತ್ತು ಔಷಧ ಸಿಗುತ್ತಿದೆಯೇ? ಸಿಬ್ಬಂದಿ ಸೂಕ್ತವಾಗಿ ಸ್ಪಂದಿಸುತ್ತಾರೆಯೇ ಎಂಬುದರ ಮಾಹಿತಿ ಪಡೆದರು. ಆಸ್ಪತ್ರೆ ನಿರ್ವಹಣೆ ಕುರಿತು ವೈದ್ಯರಿಂದ ಮಾಹಿತಿ ಪಡೆದ ಶಾಸಕರು, ವಾರ್ಡ್‌ಗಳಲ್ಲಿ ಸ್ವಚ್ಛತೆ ಜೊತೆಗೆ ರೋಗಿಗಳಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

## ಮಾತೃಭೋಜನ ಸಮಾರಂಭ

• ಉದಯವಾಹಿನಿ, ಶಿಡ್ಲಘಟ್ಟ

ನಗರದ ಹೊರವಲಯದ ಹನುಮಂತಪುರ ಗೇಟ್ ಬಳಿಯ ಬಿಜಿಎಸ್ ವಿದ್ಯಾಸಂಸ್ಥೆಯಲ್ಲಿ ಮಾತೃಭೋಜನ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. ಚಿಕ್ಕಬಳ್ಳಾಪುರ ಶಾಖಾ ಮಠದ ಮಂಗಳಾನಂದನಾಥ ಸ್ವಾಮೀಜಿ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರಹೊಮ್ಮಲು ಶಾಲಾ ಶಿಕ್ಷಕರೊಂದಿಗೆ ಪೋಷಕರ ಸಹಕಾರವೂ ಅಗತ್ಯ ಎಂದು ಹೇಳಿದರು. ಮಕ್ಕಳಿಗೆ ಉತ್ತಮವಾದ ವಾತಾವರಣ ಕಲ್ಪಿಸದಿದ್ದರೆ, ಅವರು ಪರಿಪಕ್ವವಾಗಿ ಬೆಳೆಯಲು ಸಾಧ್ಯವಿಲ್ಲ. ಮಕ್ಕಳಿಗೆ ಆದರ್ಶಮಯವಾದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸುವ ಜವಾಬ್ದಾರಿ ತಾಯಿಯದ್ದಾಗಿರುತ್ತದೆ. ಮನೆಯೇ ಮೊದಲ ಪಾಠಶಾಲೆ ಎಂಬ ಹಿರಿಯರ ಮಾತಿನಂತೆ ಮಗುವಿನ ಶಿಕ್ಷಣ ಮನೆಯಿಂದಲೇ ಆರಂಭವಾಗುತ್ತದೆ. ಮಕ್ಕಳಿಗೆ ಮನೆಯಲ್ಲಿ ಉತ್ತಮ ವಾತಾವರಣ ನಿರ್ಮಾಣ ಮಾಡಿಕೊಡುವಲ್ಲಿ ಪೋಷಕರು ಹೆಚ್ಚಿನ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಬಿಜಿಎಸ್ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಎನ್.ಶಿವರಾಮರೆಡ್ಡಿ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಶಿಕ್ಷಕರು ಹಾಗೂ ಪೋಷಕರ ಪಾತ್ರ ಬಹಳಷ್ಟು ಮಹತ್ತರವಾದದ್ದು. ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿರುವ ಸಹಕಾರವನ್ನು ಪೋಷಕರು ಶಿಕ್ಷಕರಿಗೆ ನೀಡಬೇಕು ಎಂದರು. ವೇದಿಕೆ ಕಾರ್ಯಕ್ರಮಕ್ಕೆ ಮುನ್ನ ಪೋಷಕರು ಮಾತೃಭೋಜನ ಸಮಾರಂಭಕ್ಕಾಗಿ ತಯಾರಿಸಿ ತಂದಿದ್ದ ವಿವಿಧ ರೀತಿಯ ತಿನಿಸುಗಳನ್ನು ಮಕ್ಕಳಿಗೆ ಉಣಬಡಿಸಲಾಯಿತು. ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಗಗನಸಿಂಧು. ಎನ್.ನಾಗರಾಜ್, ಭಕ್ತರಹಳ್ಳಿ ಬೈರೇಗೌಡ, ಜಗದೀಶ್, ಜಿ.ವಿ.ವೆಂಕಟಸ್ವಾಮಿ, ಪುರುಷೋತ್ತಮ್, ಗೊರಮಡುಗು ರಾಜಣ್ಣ, ಬಿಜಿಎಸ್ ಶಾಲೆಯ ಪ್ರಾಂಶುಪಾಲ ಆರ್.ಮಹದೇವ್, ಶಿಕ್ಷಕರು ಹಾಗೂ ಸಿಬ್ಬಂದಿ ಹಾಜರಿದ್ದರು.

## ಕೆಪಿಎಸ್-ಮ್ಯಾಗ್ನೆಟ್ ಶಾಲೆ ಕಾಡದಿಬ್ಬನೂರಿನಲ್ಲಿ ಪ್ರತಿಭಟನೆ



• ಉದಯವಾಹಿನಿ, ಚಿಕ್ಕಬಳ್ಳಾಪುರ

ನಮ್ಮೂರ ಮಕ್ಕಳನ್ನು ಬೀದಿಗೆ ತಳ್ಳುವ 'ಕೆಪಿಎಸ್-ಮ್ಯಾಗ್ನೆಟ್ ಶಾಲೆ ಬೇಡ' ಎಂದು ಎಐಡಿಎಸ್‌ಒ ಹಮ್ಮಿಕೊಂಡಿರುವ ಪ್ರತಿಭಟನೆಯು ತಾಲ್ಲೂಕಿನ ಕಾಡದಿಟ್ಟೂರು ಸರ್ಕಾರಿ ಶಾಲೆ ಎದುರು ನಡೆಯಿತು. ಕಾಡದಿಬ್ಬನೂರು, ಮರಳುಕುಂಟೆ, ಕತ್ರಿಗುಪ್ಪೆ, ನೆಲ್ಲಿಮರದ ಹಳ್ಳಿಯ ಶಾಲೆಗಳನ್ನು ದಿಟ್ಟೂರು ಮ್ಯಾಗ್ನೆಟ್ ಶಾಲೆಗೆ ವಿಲೀನಗೊಳಿಸುವುದರ ವಿರುದ್ಧ ಈ ಹೋರಾಟ ಹಮ್ಮಿಕೊಳ್ಳಲಾಗಿತ್ತು. ಸಂಘಟನೆ ರಾಜ್ಯ ಉಪಾಧ್ಯಕ್ಷೆ ಅಪೂರ್ವ ಮಾತನಾಡಿ, ಊರಿನ ಜನರು ಒಗ್ಗಟ್ಟಾಗಿ ನಿಂತು ಶಾಲೆ ಉಳಿಸಬೇಕು ಎಂದರು.

'ಏನೇ ಆದರೂ ನಮ್ಮೂರಿನ ಸರ್ಕಾರಿ ಶಾಲೆಯನ್ನು ಮುಚ್ಚಲು ಬಿಡುವುದಿಲ್ಲ' ಎಂದು ಸಭೆಯಲ್ಲಿದ್ದ ಪೋಷಕರು ಹಾಗೂ ಗ್ರಾಮಸ್ಥರು ತಿಳಿಸಿದರು. 15 ಸದಸ್ಯರ ಸಾರ್ವಜನಿಕ ಶಿಕ್ಷಣ ಉಳಿಸಿ ಪೋಷಕರ ಸಮಿತಿ ರಚನೆಯಾಯಿತು. ಎಐಡಿಎಸ್‌ಒ ಜಿಲ್ಲಾ ಸಂಚಾಲಕ ಕಿರಣ್ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಅಂತರಾಳದಿಂದ.. EDITORIAL

# ಕಲುಷಿತ ನೀರಿನಲ್ಲಿ ಕಂಡ ಸ್ವಚ್ಛನಗರದ ಅಸಲಿ ಮುಖ



ಹೊಸ ವರ್ಷದ ಆಗಮನದ ಹೊತ್ತಿಗೆ ಮದ್ಯದ ಹೊಳೆ ಹರಿಯುವುದು ಸಾಮಾನ್ಯ. ಮದ್ಯ ಸೇವಿಸಿ ಸಂಭವಿಸುವ ಅವಘಡಗಳು ಮಾಧ್ಯಮಗಳಲ್ಲಿ ಪ್ರತೀ ವರ್ಷವ ಕೊನೆಯಲ್ಲಿ ಪತ್ರಿಕೆಗಳ ಮುಖ ಪುಟಗಳಲ್ಲಿ ರಾರಾಜಿಸುತ್ತಿರುತ್ತವೆ. ಆದರೆ ಈ ಬಾರಿ ಮಾಧ್ಯಮಗಳಲ್ಲಿ ಹೊಸ ವರ್ಷದ ದಿನ 'ನೀರು ಕುಡಿದು ಸತ್ತವರು' ಸುದ್ದಿಯಾದರು. ಇಂದೋರ್ ದೇಶದ ಅತ್ಯಂತ ಸ್ವಚ್ಛ ನಗರ ಎಂದು ಸತತ ಎಂಟು ವರ್ಷಗಳಿಂದ ಗುರುತಿಸಲ್ಪಡುತ್ತಿದೆ. ಆದರೆ ಈ ಸ್ವಚ್ಛನಗರದ ಅಸಲಿ ಮುಖ ಇದೀಗ ಬಹಿರಂಗವಾಗಿದೆ. ಇಂದೋರ್‌ನ ಭಗೀರಥ ಪುರ ಪ್ರದೇಶದಲ್ಲಿ ಕಲುಷಿತ ನೀರನ್ನು ಕುಡಿದು 10ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಸತ್ತವರ ಸಂಖ್ಯೆ ಹೆಚ್ಚಿದೆ, ಆದರೆ ಸರಕಾರ ಮುಚ್ಚಿಡುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ನೀರು ಕುಡಿದು ಆಸ್ಪತ್ರೆಯಲ್ಲಿ ನೂರಾರು ಜನರು ಗಂಭೀರ ಸ್ಥಿತಿಯಲ್ಲಿದ್ದಾರೆ. ಆಸ್ಪತ್ರೆಗೆ ದಾಖಲಾಗದ ಅಸ್ವಸ್ಥರ ಸಂಖ್ಯೆಯೂ ದೊಡ್ಡದಿದೆ. ಅವರ ಲೆಕ್ಕ ಅಧಿಕೃತವಾಗಿ ಇನ್ನೂ ಸರಕಾರಕ್ಕೆ ಸಿಕ್ಕಿಲ್ಲ. ಯಾವುದೇ ಕಳ್ಳಭಟ್ಟಿ ಸಾರಾಯಿ ಕುಡಿದಾಗ ಸಂಭವಿಸಬಹುದಾದ ದುರಂತ ಇಂದೋರ್‌ನಲ್ಲಿ ನೀರು ಕುಡಿದು ಸಂಭವಿಸಿದೆ. ಭಾರತದ ಅತ್ಯಂತ ಸ್ವಚ್ಛನಗರದ ಸ್ಥಿತಿಯೇ ಈ ರೀತಿಯಾದರೆ ಇನ್ನು ಉಳಿದ ನಗರಗಳ ಗತಿಯೇನು ಎಂದು ಜನರು ಕೇಳುವಂತಾಗಿದೆ. ಕಾಕತಾಳೀಯ ಎಂಬಂತೆ ದುರಂತ ಸಂಭವಿಸಿದ ಪ್ರದೇಶದ ಹೆಸರೇ ಭಗೀರಥ ಪುರ. ಅತ್ಯಂತ ಪವಿತ್ರ ನದಿಯಾದ ಗಂಗೆಯನ್ನು ಭೂಮಿಗೆ ತಂದವನೇ ಭಗೀರಥ ಮುನಿ ಎನ್ನುವ ನಂಬಿಕೆ ಭಾರತದಲ್ಲಿದೆ. ಪುರಾಣದ ಕತೆಯ ಪ್ರಕಾರ, ನೀರಿನ ಹಾಹಾಕಾರ ಎದ್ದಾಗ ಸ್ವರ್ಗದಲ್ಲಿದ್ದ ಗಂಗೆಯನ್ನು ಶತಪ್ರಯತ್ನದಿಂದ ಭೂಮಿಗೆ ತಂದವನು ಭಗೀರಥ ಮುನಿ. ಅಂತಹ ಭಗೀರಥನ ಹೆಸರನ್ನು ಹೊಂದಿದ ಪ್ರದೇಶದಲ್ಲಿ ನೀರನ್ನು ಕುಡಿದು ಸಾವಿರಾರು ಜನರು ಗಂಭೀರ ಸ್ಥಿತಿಯಲ್ಲಿದ್ದಾರೆ ಎನ್ನುವುದು ಭಾರತದ ಇಂದಿನ ಸ್ಥಿತಿಗೆ ಒಂದು ವಿಕಟ ರೂಪಕವೇ ಸರಿ. ನಿಜಕ್ಕೂ ಎಷ್ಟು ಸಾವುಗಳು ಸಂಭವಿಸಿವೆ ಎನ್ನುವುದನ್ನು ಜಿಲ್ಲಾಡಳಿತ ಬಹಿರಂಗ ಪಡಿಸುತ್ತಿಲ್ಲ. ಮುಖ್ಯಮಂತ್ರಿ ನಾಲ್ಕು ಮಂದಿ ಮೃತಪಟ್ಟಿದ್ದಾರೆ ಎನ್ನುತ್ತಿದ್ದರೆ, ಮೇಯರ್ ಏಳು ಮಂದಿ ಮೃತಪಟ್ಟಿದ್ದಾರೆ ಎನ್ನುತ್ತಿದ್ದಾರೆ. ಸ್ಥಳೀಯರು ಮಾತ್ರ 13ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಮತ್ತು ನೂರಾರು ಜನರು ಸಾವು ಬದುಕಿನ ನಡುವೆ ಒದ್ದಾಡುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

> **ಸಚಿವ ಕೈಲಾಸ್ ವಿಜಯ ವರ್ಗೀಯ ಅವರು ಈ ಸಾವಿನ ಹಿಂದಿನ ಕಾರಣಗಳನ್ನು ಚರ್ಚಿಸುವುದಕ್ಕೆ ಸಿದ್ಧರಿಲ್ಲ. ತಪ್ಪು ನಡೆದಿದೆ ಹೌದು. ಆದರೆ ಅದನ್ನೇ ಚರ್ಚಿಸುವ ಬದಲು ಮೊದಲು ರೋಗಿಗಳು ಚೇತರಿಸಿಕೊಳ್ಳುವುದರ ಕಡೆಗೆ ಗಮನ ನೀಡಬೇಕು ಎಂದು ಜಾರಿಕೊಳ್ಳುತ್ತಿದ್ದಾರೆ. ಕನಿಷ್ಠ ರೋಗಿಗಳ ಚಿಕಿತ್ಸೆಯ ಕಡೆಗಾದರೂ ಸರಕಾರ ಗಮನವನ್ನು ನೀಡಿದೆಯೇ ಎಂದರೆ ಅದೂ ಇಲ್ಲ. ನೀರು ಕುಡಿದು ಅಸ್ವಸ್ಥರಾಗಿರುವ ಹಲವರು ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಅಲ್ಲಿನ ದುಬಾರಿ ಬಿಲ್‌ನಿಂದಾಗಿ ಅವರು ತತ್ತರಿಸಿದ್ದಾರೆ. ಸರಕಾರ ಚಿಕಿತ್ಸೆಗೆ ಬೇಕಾದ ಸಹಕಾರ ನೀಡುವುದಾಗಿ ಹೇಳಿದ್ದರೂ, ವೈದ್ಯಕೀಯ ವೆಚ್ಚಗಳ ಮರುಪಾವತಿ ಇನ್ನೂ ಸಿಕ್ಕಿಲ್ಲ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ.**

ಈ ಬಗ್ಗೆ ಪತ್ರಕರ್ತರು ಪ್ರಶ್ನೆ ಕೇಳಿದಾಗ ಅದಕ್ಕೆ ಉತ್ತರಿಸಬೇಕಾಗಿದ್ದ ಸಚಿವರು, ಪತ್ರಕರ್ತರ ಮೇಲೆಯೇ ಎರಗಿ ಬಿದ್ದಿದ್ದಾರೆ. ಕೆಟ್ಟ ಪದವನ್ನು ಬಳಸಿ ಪತ್ರಕರ್ತರ ಬಾಯಿ ಮುಚ್ಚಿಸಲು ಮುಂದಾಗಿದ್ದಾರೆ. ಚಿಕಿತ್ಸೆ ನೀಡುವುದು ಮಾತ್ರವಲ್ಲ, ಜನರಿಗೆ ಪರ್ಯಾಯ ಸ್ವಚ್ಛ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಸರಕಾರ ಮಾಡಬೇಕು. ಅದರಲ್ಲೂ ಸಚಿವರು ವಿಫಲರಾಗಿದ್ದಾರೆ. ಮೃತರ ಕುಟುಂಬವನ್ನು ಭೇಟಿ ಮಾಡುವ ಹೊಣೆಗಾರಿಕೆಯಿಂದ ಸ್ಥಳೀಯ ಶಾಸಕರು ನುಣುಚಿಕೊಳ್ಳುತ್ತಿದ್ದಾರೆ. ಜನರನ್ನು ಎದುರುಗೊಳ್ಳಲು ಶಾಸಕರು, ಸಚಿವರು ಹಿಂಜರಿಯುತ್ತಿದ್ದಾರೆ.

ಸಾರ್ವಜನಿಕರು ಕೇಳುವ ಪ್ರಶ್ನೆಗಳಿಗೆ ಇವರ ಬಳಿ ಉತ್ತರವಿಲ್ಲ. ಆದುದರಿಂದ ಸಂತ್ರಸ್ತರ ಭೇಟಿಗೆ ಸಿದ್ಧರಿಲ್ಲ. ಕುಡಿಯುವ ನೀರಿನ ಸಮಸ್ಯೆಯಿಂದ ಈ ಭಾಗದಲ್ಲಿ ಹಲವರು ಈ ಹಿಂದೆ ಅಸ್ವಸ್ಥರಾದಾಗಲೆಲ್ಲ ಆ ಪ್ರಕರಣವನ್ನು ನಿರ್ಲಕ್ಷಿಸಲಾಗಿದೆ. ಅವರು ಅಸ್ವಸ್ಥರಾಗಿರುವುದು ಬೇರೆಯೇ ಕಾರಣಕ್ಕಾಗಿ ಎಂದು ಜನರನ್ನು ಬಾಯಿ ಮುಚ್ಚಿಸಲಾಗಿದೆ. ಏಕಾಏಕಿ ನೂರಾರು ಪ್ರಕರಣಗಳು ಬಹಿರಂಗವಾಗುತ್ತಿದ್ದಂತೆಯೇ ಸರಕಾರ ಎಚ್ಚೆತ್ತುಕೊಂಡಿದೆ. ಇಂದೋರ್‌ನ ದುರಂತ ಈ ದೇಶ ಭವಿಷ್ಯದಲ್ಲಿ ಎದುರಿಸಲಿರುವ ಇನ್ನೊಂದು ಆಪತ್ತನ್ನು ಮುನ್ನೆಲೆಗೆ ತಂದಿದೆ. ದೇಶದಲ್ಲೀಗ ಚರ್ಚೆಯಲ್ಲಿರುವುದು ವಾಯು ಮಾಲಿನ್ಯ. ದಿಲ್ಲಿ, ಮುಂಬೈ, ಕೋಲ್ಕತಾದಂತಹ ನಗರಗಳು ಉಸಿರಾಡುವುದಕ್ಕೆ ಒದ್ದಾಡುತ್ತಿವೆ.

ದಿಲ್ಲಿಯ ಸ್ಥಿತಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ದೇಶದ ವಾಯುಮಾಲಿನ್ಯ ಕಳಪೆಯಾಗಿರುವುದನ್ನು ಸೂಚ್ಯಂಕ ಪಾತಾಳ ತಲುಪಿರುವುದನ್ನು ಈಗಾಗಲೇ ವಿಶ್ವಸಂಸ್ಥೆ ಬಹಿರಂಗಗೊಳಿಸಿದೆ. ವಾಯುಮಾಲಿನ್ಯದಿಂದಾಗಿ ಶ್ವಾಸಕೋಶದ ಕಾಯಿಲೆಗಳು ಹೆಚ್ಚುತ್ತಿವೆ. ಅಸ್ತಮಾ ಉಲ್ಬಣಿಸುತ್ತಿದೆ. ಆದರೆ ಸರಕಾರ ಇದನ್ನು ಮುಚ್ಚಿಡುವ, ವರದಿಗಳನ್ನು ಅಲ್ಲಗಳೆಯುವ ಮೂಲಕ ತನ್ನ ಮಾನವನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ.

# ರಾಮಾಯಣ



## ವಾಲಿಯನ್ನು ವಧಿಸುತ್ತೇನೆಂದು ಶ್ರೀ ರಾಮನ ಪ್ರತಿಜ್ಞೆ

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಆ ಮಾತನ್ನು ಕೇಳಿ ಧರ್ಮಜ್ಞನಾದ ಶ್ರೀರಾಮನು ನಸುನಗುತ್ತ ಸುಗ್ರೀವನನ್ನು ಕುರಿತು ಸುಗ್ರೀವ, ಲೋಕದಲ್ಲಿ ಮಿತ್ರಕ್ಕ್ಷ್ಯಕ್ಕೆ ಉಪಕಾರವೇ ಫಲ, ಮಿತ್ರರಿಗೆ ಅಪಕಾರಮಾಡುವುದೇ ದುರ್ಗುಣ. ನಾನು ನಿನಗೆ ಮಿತ್ರನಾದ್ದರಿಂದ, ನಿನ್ನ ಸ್ತ್ರೀಯನ್ನ ಪಹರಿಸಿದ ವಾಲಿಯನ್ನು ಸಂಹರಿಸು ವುದೇ ನಿನಗೆ ಮಾಡುವ ಉವಕಾರ. ಈ ನನ್ನ ಶರಗಳನ್ನು ನೋಡು. ಇವು ಕುಮಾರಸ್ವಾಮಿಯಾದ ಷಣ್ಮುಖನಿರುವ ಶರವಣದಲ್ಲಿ ಹುಟ್ಟಿದವು.

ಸರ್ಪದಂತೆ ಅತಿಭಯಂಕರವಾಗಿವೆ. ದೇವೇಂದ್ರನ ವಜ್ರಾಯುಧದಂತೆ ಅತ್ಯಂತ ಬಲವುಳ್ಳವು. ಇಂಥ ಬಾಣಗಳಿಂದ, ದೇವೇಂದ್ರನು ವಜ್ರಾಯುಧದಿಂದ ಪರ್ವತವನ್ನು ಚೂರ್ಣಮಾಡಿದಂತೆ ನಿನಗೆ ಅಪರಾಧವನ್ನು ಮಾಡಿದ ವಾಲಿಯನ್ನು ಕೊಲ್ಲುವೆನು ಎಂದು ನುಡಿದನು. ಸುಗ್ರೀವನು ಅತ್ಯಂತಹರ್ಷಯುಕ್ತನಾಗಿ ಶ್ರೀರಾಮ ಹಾಗೂ ಲೋಕದಲ್ಲಿ ದುಃಖದಿಂದ ನೊಂದವರನ್ನು ನೀನೇ ರಕ್ಷಿಸಬೇಕು. ನೀನು ನನಗೆ ಪ್ರಾಣಮಿತ್ರನೆಂದು ನಿನ್ನೊಡನೆ ನನ್ನ ದುಃಖವನ್ನು ಹೇಳಿಕೊಳ್ಳುತ್ತಿದ್ದೇನೆ. ನೀನು ನನಗೆ ಅಗ್ನಿಸಾಕ್ಷಿಕವಾಗಿ 'ಅಂಜಬೇಡ' ಎಂದು ನಿನ್ನ ಬಲಗೈಯಿಂದ ನನ್ನ ಕೈಹಿಡಿದು ಮಿತ್ರನಾಗಿದ್ದೀಯೆ. ನಾನು ನನ್ನ ಸಾಕ್ಷಿಯಾಗಿ ನೀನು ನನ್ನ ಪರಮಾಪ್ತನೆಂದು ನನ್ನ ಅಂತರಂಗಸ್ಥಿತಿಯನ್ನು ಹೇಳುತ್ತೇನೆ. ನನ್ನ ದುಃಖವು ನನ್ನ ಮನಸ್ಸನ್ನು ದಹಿಸುತ್ತಲಿದೆ ಎಂದು ನುಡಿದು ಕಣ್ಣೀರು ತುಂಬಲು ಮಾತನಾಡುವುದಕ್ಕೆ ಶಕ್ತಿಯಿಲ್ಲದೆ ಧೈರ್ಯದಿಂದ, ನದೀಪ್ರವಾಹವನ್ನು ತಡೆಯುವ ತಡಿಯಂತೆ ಕಣ್ಣೀರ ವೇಗವನ್ನು ತಡೆದು ಬಿಸುಸುಯ್ದನು. ಅನಂತರ ಅತ್ಯಂತ ತೇಜಸ್ವಿಯಾದ ಶ್ರೀರಾಮನನ್ನು ಕುರಿತು ಹೀಗೆಂದನು: ಶ್ರೀರಾಮ ಬಲವಂತನಾದ ವಾಲಿಯು ತನ್ನ ಬಲಗರ್ವದಿಂದ ನನ್ನನ್ನು ಬೆದರಿಸಿ ಅನೇಕ ನಿಷ್ಠುರವಚನಗಳನ್ನು ನುಡಿದು ನನ್ನ ಪ್ರಾಣಕಾಂತೆಯನ್ನು ಅಪಹರಿಸಿಕೊಂಡು ನನ್ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ಹೊರಡಿಸಿರುವನು. ನನಗನುಕೂಲರಾಗಿದ್ದ ಕಪಿಗಳನ್ನು ಸೆರೆಹಾಕಿದನು. ಈಗಲೂ ನನ್ನನ್ನು ಕಂಡರೆ ಸಂಹರಿಸಬೇಕೆಂದೇ ಯತ್ನ ಮಾಡಿ ಕೊಂಡಿದ್ದಾನೆ. ನಾನು ಆತನ ಕಡೆಯವರಾದ ಬಹುಮಂದಿ ವಾನರರನ್ನು ಕೊಂದೆನು. ಆದ್ದರಿಂದ ಆತನು ಮೋಸದಿಂದ ಯಾರನ್ನಾದರೂ ಕಳುಹಿಸಿ ಕೊಲ್ಲಿಸುವನೆಂಬ ಶಂಕೆಯಿಂದ ನಿಮ್ಮನ್ನು ಕಂಡು ಸಮೀಪಕ್ಕೆ ಬರದೆ ಭೀತಿಯಿಂದಿದ್ದೆನು. ಲೋಕದಲ್ಲಿ ಭಯವು ಬಂದರೆ ಕಂಗೆಡದಿರುವವನಾರು ಹನುಮಂತನೇ ಮೊದಲಾದ ಈ ನಾಲ್ಕು ಕಪಿಗಳು ನನ್ನನ್ನು ರಕ್ಷಿಸಿಕೊಂಡಿರುವುದರಿಂದ ನಾನು ಈ ಋಷ್ಯಮೂಕಪರ್ವತದಲ್ಲಿ ಅತ್ಯಂತ ಪ್ರಯಾಸದಿಂದ ಪ್ರಾಣವಿಡಿದಿದ್ದೇನೆ. ಇವರು ಯಾವಾಗಲೂ ನನ್ನ ಸಮೀಪದಲ್ಲಿರುವರು. ಇದು ನನ್ನ ವೃತ್ತಾಂತ. ಇದನ್ನು ಸಂಕ್ಷೇಪವಾಗಿ ಹೇಳಿದೆನು. ನನ್ನ ಅಣ್ಣನಾದ ವಾಲಿಯೇ ನನಗೆ ಶತ್ರು. ಆತನು ನಾಶವಾದಂದಿಗೆ ನನ್ನ ದುಃಖವು ಶಮನವಾಗುವುದು, ನನ್ನ ದುಃಖವು, ವಾಲಿಯು ಜೀವಂತನಾಗಿರುವಷ್ಟು ಕಾಲವೂ ಹೋಗದು. ಇದನ್ನು ದುಃಖಾತಿಶಯದಿಂದ ಹೇಳುತ್ತೇನೆ. ಲೋಕದಲ್ಲಿ ದುಃಖಿಯಾದವನಿಗೂ ಸುಖಿಯಾದವನಿಗೂ ಸಖನೇ ಪ್ರಾಣರಕ್ಷಕನು ಎಂದು ಸುಗ್ರೀವನು ನುಡಿದನು.


ಮುಂದುವರಿಯುವುದು...

# ಸರ್ವಜ್ಞ ಪೀಠದಲ್ಲಿ ಶೀರೂರು ಶ್ರೀಗಳು

– ಡಾ. ಗುರುರಾಜ ಪೋಶೆಟ್ಟಿಹಳ್ಳಿ

**ಜನವರಿ 18ರಿಂದ ಉಡುಪಿಯಲ್ಲಿ ದ್ವೈವಾರ್ಷಿಕ ಪೂಜಾ ವೈಭವ**

ಪ್ರತಿ ಎರಡು ವರ್ಷಗಳಿಗೊಮ್ಮೆ ಕರಾವಳಿ ಕರ್ನಾಟಕದ ಮಹಾಸಾಂಸ್ಕೃತಿಕ ಉತ್ಸವವಾಗಿ ಕಂಗೊಳಿಸುವ ಪರ್ಯಾಯ ಮಹೋತ್ಸವ, ಕೇವಲ ಧಾರ್ಮಿಕ ಆಚರಣೆಯಲ್ಲ; ಅದು ಧರ್ಮಜಾಗೃತಿ, ಶಿಸ್ತು ಹಾಗೂ ಸೇವೆ ಮತ್ತು ತತ್ವಚಿಂತನೆಯ ಮಹಾಸಂಕಲ್ಪದ ಉಜ್ವಲ ಪ್ರತೀಕ. ಹಿಂದೂ ಧರ್ಮ ಸಂಕ್ರಮಣ ಕಾಲಘಟ್ಟದಲ್ಲಿರುವ ಈ ಸಂದರ್ಭದಲ್ಲಿ, ಪರ್ಯಾಯ ಉತ್ಸವದ ಹಿಂದಿರುವ ಆಧ್ಯಾತ್ಮಿಕ ಆಶಯ ಮತ್ತು ಸಾಂಸ್ಕೃತಿಕ ಮಹತ್ವ ಇನ್ನಷ್ಟು ಪ್ರಸ್ತುತವಾಗುತ್ತದೆ. ಮಠ?ಮಂದಿರ ಸಂಯುಕ್ತ ಪರಂಪರೆಯ ಅಪೂರ್ವ ಮಾದರಿಯಾಗಿರುವ ಉಡುಪಿ ಕೃಷ್ಣ ಮಠದಲ್ಲಿ ನಡೆಯುವ ಈ ಪರ್ಯಾಯ ವೈಭವ, ಭಾರತಕ್ಕೆ ಮಾತ್ರ ಸೀಮಿತವಲ್ಲದೆ ವಿಶ್ವಮಾನವತೆಗೆ ಸಂದೇಶ ಸಾರುವ ಮಹೋತ್ಸವವಾಗಿ ರೂಪುಗೊಳ್ಳುತ್ತಿದೆ. ಉಡುಪಿ ಮತ್ತೆ ಸಂಭ್ರಮದಲ್ಲಿ ಕಡೆಗೋಲು ಶ್ರೀ ಕೃಷ್ಣನ ಅಡುಂಬೋಲ ಉಡುಪಿ ಮತ್ತೊಮ್ಮೆ ಸಂಭ್ರಮದೊಳಗೆ ಮಿಂದೇಳುತ್ತಿದೆ. ದ್ವೈತ ಮತಸ್ಥಾಪನಾಚಾರ್ಯ ಶ್ರೀ ಮಧ್ವಮುನಿಗಳಿಂದ ಪ್ರತಿಷ್ಠಿತನಾದ ಈ ಪವಿತ್ರ ಕ್ಷೇತ್ರದಲ್ಲಿ, ಜನವರಿ 18 ರಂದು ನಡೆಯಲಿರುವ ದ್ವೈವಾರ್ಷಿಕ ಪರ್ಯಾಯ ಮಹೋತ್ಸವವು ಉಡುಪಿಯ ಧಾರ್ಮಿಕ–ಸಾಂಸ್ಕೃತಿಕ ಬದುಕಿಗೆ ಹೊಸ ಉತ್ಸಾಹವನ್ನು ತುಂಬುತ್ತಿದೆ. ಮುಂದಿನ 2 ವರ್ಷಗಳ ಕಾಲ ಶ್ರೀ ಕೃಷ್ಣನ ಪೂಜಾ ನಿರ್ವಹಣೆಯ ಹೊಣೆ ಹೊರುವ ಪರ್ಯಾಯ ಪೀಠಕ್ಕೆ, ಶೀರೂರು ಮಠದ ಶ್ರೀ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಆಚಾರ್ಯ ಮಧ್ವರ ಸಾನ್ನಿಧ್ಯವಿರುವ ಸರ್ವಜ್ಞ ಪೀಠದಲ್ಲಿ ವಿದ್ಯುಕ್ತವಾಗಿ ವಿರಾಜಮಾನಗೊಳ್ಳಲಿದ್ದಾರೆ.ಪರ್ಯಾಯ ಉತ್ಸವ ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ. ಅದು ತತ್ವ, ಶಿಸ್ತು, ಸೇವೆ, ಜವಾಬ್ದಾರಿಯ ಸಮನ್ವಯ. ಹಿಂದೂ ಧರ್ಮ ಸಂಕ್ರಮಣದ ಈ ಕಾಲಘಟ್ಟದಲ್ಲಿ, ಪರ್ಯಾಯ ಮಹೋತ್ಸವವು



ಧರ್ಮಜಾಗೃತಿಯ ಮಹಾಸಂಕಲ್ಪವಾಗಿ ಮತ್ತೆ ಪ್ರಸ್ತುತವಾಗುತ್ತಿದೆ.

**ಉಡುಪಿ ಪರ್ಯಾಯ** ಹಬ್ಬದಿಂದ ಮಹೋತ್ಸವದವರೆಗೆ ಆದಿಯಲ್ಲಿ ಉಡುಪಿಯ ಹಬ್ಬವಾಗಿದ್ದ ಪರ್ಯಾಯ, ಕ್ರಮೇಣ ತುಳುನಾಡಿನ ಹಬ್ಬವಾಯಿತು; ನಂತರ ಕನ್ನಡನಾಡಿನ ಹೆಮ್ಮೆಯಾಯಿತು; ಇಂದು ಭಾರತದಾದ್ಯಂತ ಹಾಗೂ ಜಾಗತಿಕ ಮಟ್ಟದಲ್ಲಿಯೂ ಗಮನ ಸೆಳೆಯುತ್ತಿರುವ ಮಹೋತ್ಸವವಾಗಿದೆ.

ಮಧ್ವಾಚಾರ್ಯರಿಂದ ಆರಂಭವಾದ ಅಷ್ಟಮಠ ಪರಂಪರೆಯಡಿ ಶ್ರೀ ಕೃಷ್ಣನ ಪೂಜೆಯನ್ನು ಪರ್ಯಾಯ ಕ್ರಮದಲ್ಲಿ ನಿರ್ವಹಿಸುವ ವ್ಯವಸ್ಥೆ, ಜಗತ್ತಿನಲ್ಲಿಯೇ ಅಪರೂಪ. ಪರ್ಯಾಯ ದಿನದ ಮುಂಜಾನೆ ಜೋಡುಕಟ್ಟೆಯಿಂದ ಹೊರಡುವ ಭವ್ಯ ಮೆರವಣಿಗೆ, ವಾದ್ಯಘೋಷ, ಸ್ತಬ್ಧಚಿತ್ರಗಳು, ಅಷ್ಟಮಠಾಧೀಶರ ಮೇನೆಗಳ ಸಂಚಲನ ಇವೆಲ್ಲವೂ ಉಡುಪಿಯ ಸಂಸ್ಕೃತಿಯ ಜೀವಂತ ಪ್ರದರ್ಶನ. ಸರ್ವ ದೇವರ ದರ್ಶನದ ಬಳಿಕ ಸರ್ವಜ್ಞ ಪೀಠದಲ್ಲಿ ಅಕ್ಷಯ ಪಾತ್ರೆ ಸಟ್ಟುಗ ಹಸ್ತಾಂತರ, ಬಡಮಾಳಿಗೆಯಲ್ಲಿ ಅರಳು ಗದ್ದುಗೆಯಾರೋಹಣ, ನಂತರ ರಾಜಾಂಗಣದಲ್ಲಿ ಪರ್ಯಾಯ ದರ್ಬಾರ್ ಇವೆಲ್ಲವೂ ಉಡುಪಿಯ ಪರ್ಯಾಯವನ್ನು ಕೇವಲ ಆಚರಣೆಯಲ್ಲದೆ, ಶಿಸ್ತುಬದ್ಧ ಸಂಸ್ಕೃತಿಯಾಗಿ ರೂಪಿಸುತ್ತವೆ.

**ಕೃಷ್ಣನ ಮಂದಿರ:** ಮಠವೂ ಹೌದು, ದೇವಾಲಯವೂ ಹೌದು ಉಡುಪಿ ಶ್ರೀ ಕೃಷ್ಣ ಮಠವು ಭಾರತದ ಧಾರ್ಮಿಕ ಇತಿಹಾಸದಲ್ಲಿ ಅನನ್ಯ ಸ್ಥಾನ ಹೊಂದಿದೆ. ಇಲ್ಲಿ ಕೃಷ್ಣನನ್ನು ಯತಿಗಳು ಮಾತ್ರವೇ ಪೂಜಿಸುವುದು ವಿಶೇಷ.

ಅದೇ ಸಮಯದಲ್ಲಿ ಸಾರ್ವಜನಿಕರಿಗೆ ಸಂಪೂರ್ಣವಾಗಿ ತೆರೆದಿರುವುದರಿಂದ ಇದು ಮಠವೂ ಹೌದು; ದೇವಾಲಯವೂ ಹೌದು. ಈ ವಿಶಿಷ್ಟ ಸ್ವರೂಪವನ್ನೇ ಗಮನಿಸಿ ಸರ್ವೋಚ್ಚ ನ್ಯಾಯಾಲಯವೂ ಇದನ್ನು ಅಷ್ಟಮಠಗಳ ಅಧೀನದ ಸಾರ್ವಜನಿಕ ದೇವಾಲಯವೆಂದು ಘೋಷಿಸಿದೆ. ಕನಕದಾಸರಂಥ ಮಹನೀಯರು ಈ ಕೃಷ್ಣನ ಅಚ್ಚಿನ್ನ ಭಕ್ತರಾಗಿದ್ದುದು ಉಡುಪಿ ಮಠದ ಸಮನ್ವಯ ಪರಂಪರೆಯ ಜೀವಂತ ಸಾಕ್ಷಿ. ಹದಿನಾಲ್ಕು ವಿಧದ ನಿತ್ಯಪೂಜೆಗಳು, ಮಧ್ವಸರೋವರದ ಪಾವಿತ್ರ್ಯ, ಅನ್ನಬ್ರಹ್ಮನಾಗಿ ನಿತ್ಯಾನ್ನದಾನ ಇವೆಲ್ಲವೂ ಉಡುಪಿಯ ಕೃಷ್ಣನ ಆಧ್ಯಾತ್ಮಿಕ ಮಹಿಮೆಯನ್ನು ಜಗತ್ತಿಗೆ ಸಾರುತ್ತಿವೆ.

**ಶೀರೂರು ಮಠ:** ಪರಂಪರೆಯ ಮುಂದುವರಿಕೆ ಈ ಬಾರಿ ಪರ್ಯಾಯ ಪೀಠದ ಹೊಣೆ ಶೀರೂರು ಮಠಕ್ಕೆ ಲಭಿಸಿದೆ. ಮಧ್ವಾಚಾರ್ಯರಿಂದ ಸ್ಥಾಪಿತವಾದ ಅಷ್ಟಮಠಗಳಲ್ಲಿ ಒಂದಾದ ಶೀರೂರು ಮಠದ ಪಟ್ಟದ ದೇವತೆ ಶ್ರೀದೇವಿ ಭೂದೇವಿ ಸಹಿತ ವಿಠಲ. ಶತಮಾನಗಳಿಂದ ದ್ವೈತ ತತ್ವ, ಭಕ್ತಿ, ಶಿಸ್ತಿನ ಸಂಕೇತವಾಗಿ ಈ ಮಠ ಗುರುತಿಸಿಕೊಂಡಿದೆ. ಪೂರ್ವ ಪೀಠಾಧಿಪತಿ ಶ್ರೀ ಲಕ್ಷ್ಮಿವರ ತೀರ್ಥರು ಕೃಷ್ಣದೇವರ ಅಲಂಕಾರದಲ್ಲಿ ಅಪೂರ್ವ ಸಾಧನೆ ಮಾಡಿ, 300ಕ್ಕೂ ಹೆಚ್ಚು ವಿಧದ ಅಲಂಕಾರಗಳ ಮೂಲಕ ದಾಖಲೆಯನ್ನು ನಿರ್ಮಿಸಿದ್ದರು. 2010?12ರ ತಮ್ಮ ಕೊನೆಯ ಪರ್ಯಾಯದ ಬಳಿಕ ಅವರು ಬೃಂದಾವನಸ್ಥರಾದರೂ, ಅವರ ಧಾರ್ಮಿಕ?ಸಾಂಸ್ಕೃತಿಕ ಪರಂಪರೆ ಇಂದಿಗೂ ಜೀವಂತವಾಗಿದೆ.

**ಪ್ರಥಮ ಪರ್ಯಾಯ:** ಹೊಸ ಹೊಣೆ, ಹೊಸ ಸಂಕಲ್ಪ ಶೀರೂರು ಮಠದ 30ನೇ ಪೀಠಾಧಿಪತಿಗಳಾದ ಶ್ರೀ ವೇದವರ್ಧನ ತೀರ್ಥರು 2005ರಲ್ಲಿ ಜನಿಸಿ, 2021ರಲ್ಲಿ ಸೋದೆ ಮಠದ ಶ್ರೀ ವಿಶ್ವವಲ್ಲಭ ತೀರ್ಥರಿಂದ ಸನ್ಯಾಸ ದೀಕ್ಷೆ ಪಡೆದವರು. ಪ್ರಸ್ತುತ ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರ ತೀರ್ಥರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 2026–28ರ ಅವಧಿಗೆ ತಮ್ಮ ಮೊದಲ ಪರ್ಯಾಯವನ್ನು ನಡೆಸಲಿರುವ ಅವರು, ಪರಂಪರೆಯೊಂದಿಗೆ ಸಮಕಾಲೀನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ನಿರೀಕ್ಷೆ ಮೂಡಿಸಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಗೌರವಾಧ್ಯಕ್ಷರಾಗಿರುವ ಸ್ವಾಗತ ಸಮಿತಿ, ಈ ಪ್ರಥಮ ಪರ್ಯಾಯವನ್ನು ಭವ್ಯವಾಗಿ ಸ್ವಾಗತಿಸಲು ಸಜ್ಜಾಗಿದೆ.

☛ ವಿಶ್ವಾಸ್.ಡಿ.ಗೌಡ

# ಕರುನಾಡು ಬಾ ಬೆಳಕೆ: ಮೌಲ್ಯ, ಮಾನವೀಯತೆ, ಚಿಂತನೆಯ ಬೆಳಕಿನ ದಾರಿದೀಪ



ಕನ್ನಡ ನಾಡಿನ ಬೌದ್ಧಿಕ, ಸಾಂಸ್ಕೃತಿಕ ಹಾಗೂ ಚಿಂತನಾ ವಲಯದಲ್ಲಿ ಮೌಲ್ಯಾಧಾರಿತ ಬದುಕಿನ ಕುರಿತು ನಿರಂತರವಾಗಿ ಮಾತನಾಡುತ್ತಾ, ಬರೆಯುತ್ತಾ ಸಮಾಜಕ್ಕೆ ದಾರಿದೀಪವಾಗಿರುವ ಅಪರೂಪದ ಚಿಂತಕರಲ್ಲಿ ಆಡಿ Dr Gururaj Karajagi ಅವರ ಹೆಸರು ಅಗ್ರಗಣ್ಯ. ಅವರು **ಕೇವಲ ಲೇಖಕರಲ್ಲ;** ಶಿಕ್ಷಣತಜ್ಞ, ವಾಗ್ಮಿ, ತತ್ವಚಿಂತಕ ಮತ್ತು ಮೌಲ್ಯಗಳ ಪಾಠವನ್ನು ಬದುಕಿನ ಮೂಲಕವೇ ಹೇಳುವ ಮಹನೀಯ ವ್ಯಕ್ತಿತ್ವ. ಅವರ ಚಿಂತನೆಯ ಸಾರವನ್ನು ಒಳಗೊಂಡು ಕನ್ನಡಿಗರ ಮನಸ್ಸಿಗೆ ಆಳವಾಗಿ ಸ್ಪರ್ಶಿಸಿದ ಕೃತಿಗಳಲ್ಲಿ Karunaadu Baa Belake ಒಂದು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ.

ಡಾ. ಗುರುರಾಜ್ ಕರ್ಜಗಿ ಅವರು ತಾಂತ್ರಿಕ ಶಿಕ್ಷಣದ ಹಿನ್ನೆಲೆಯಿಂದ ಬಂದರೂ, ಅವರ ದೃಷ್ಟಿಕೋನ ಕೇವಲ ವಿಜ್ಞಾನ ಅಥವಾ ತಂತ್ರಜ್ಞಾನಕ್ಕೆ ಸೀಮಿತವಾಗಿಲ್ಲ. ಮಾನವ ಬದುಕಿನ ಮೌಲ್ಯಗಳು, ಸಂಸ್ಕೃತಿ, ಶಿಕ್ಷಣದ ಅರ್ಥ ಮತ್ತು ಸಮಾಜದ ಹೊಣೆಗಾರಿಕೆಗಳು ಅವರ ಚಿಂತನೆಯ ಕೇಂದ್ರಬಿಂದು. ಅನೇಕ ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಅವರು, ಯುವಜನತೆಗೆ ಬದುಕನ್ನು ನೋಡುವ ಹೊಸ ದೃಷ್ಟಿಕೋನವನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಮಾತುಗಳಲ್ಲಿ ಮತ್ತು ಬರವಣಿಗೆಯಲ್ಲಿ ಗಂಭೀರತೆ ಇದ್ದರೂ, ಅದು ಯಾವತ್ತೂ ಸರಳ, ಹೃದಯಸ್ಪರ್ಶಿ ಹಾಗೂ ಆಲೋಚನೆಗೆ ಪ್ರೇರೇಪಿಸುವಂತಿರುತ್ತದೆ.

ಕರುನಾಡು ಬಾ ಬೆಳಕೆ ಎಂಬ ಶೀರ್ಷಿಕೆಯೇ ಒಂದು ಆಶಯಪೂರ್ಣ ಆಹ್ವಾನ. ಇಲ್ಲಿ ಕರುನಾಡು ಎಂದರೆ ಕೇವಲ ಕರ್ನಾಟಕ ಎಂಬ ಭೌಗೋಳಿಕ ಪ್ರದೇಶವಲ್ಲ; ಅದು ನಮ್ಮ ಭಾಷೆ, ಸಂಸ್ಕೃತಿ, ಪರಂಪರೆ, ಮೌಲ್ಯಗಳು ಮತ್ತು ಕನ್ನಡಿಗರ ಆತ್ಮಸ್ವರೂಪ. ಬಾ ಬೆಳಕೆ ಎಂಬ ಪದಗಳು ಅಂಧಕಾರದಿಂದ ಬೆಳಕಿನತ್ತ ಸಾಗುವ ಸಂಕೇತ. ಈ ಕೃತಿ ಸಮಾಜದ ಇಂದಿನ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎಂಬ ಪ್ರಶ್ನೆಯನ್ನು ಓದುಗರ ಮುಂದೆ ಇಡುತ್ತದೆ. ಈ ಕೃತಿಯಲ್ಲಿ ಡಾ. ಕರ್ಜಗಿ ಅವರು ಶಿಕ್ಷಣದ ನಿಜವಾದ ಅರ್ಥವನ್ನು ಬಹಳ ಸ್ಪಷ್ಟವಾಗಿ ವಿವರಿಸುತ್ತಾರೆ. ಶಿಕ್ಷಣವೆಂದರೆ ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ; ಅದು ಉತ್ತಮ ಮಾನವನನ್ನು ರೂಪಿಸುವ ಪ್ರಕ್ರಿಯೆ ಎಂಬುದನ್ನು ಅವರು ಒತ್ತಿ ಹೇಳುತ್ತಾರೆ. ಮೌಲ್ಯವಿಲ್ಲದ ಜ್ಞಾನ ಅಪಾಯಕಾರಿಯೆಂದು ಅವರು ಎಚ್ಚರಿಸುತ್ತಾರೆ. ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ತಮ್ಮ ತಮ್ಮ ಪಾತ್ರಗಳನ್ನು ಜವಾಬ್ದಾರಿಯಿಂದ ನಿರ್ವಹಿಸಿದಾಗ ಮಾತ್ರ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯವೆಂದು ಅವರು ಅಭಿಪ್ರಾಯಪಡುತ್ತಾರೆ. ಕೃತಿಯ ಮತ್ತೊಂದು ಪ್ರಮುಖ ಅಂಶವೆಂದರೆ ಕನ್ನಡ ನಾಡಿನ ಸಾಂಸ್ಕೃತಿಕ ಹಿರಿಮೆ. ಜಾಗತೀಕರಣದ ಯುಗದಲ್ಲಿ ಭಾಷೆ ಮತ್ತು ಸಂಸ್ಕೃತಿಗಳು ಮರೆತುಹೋಗುವ ಅಪಾಯ ಎದುರಿಸುತ್ತಿರುವ ಸಂದರ್ಭದಲ್ಲಿ, ಕನ್ನಡದ ಗೌರವ, ಅಸ್ತಿತ್ವ ಮತ್ತು ಸತ್ವವನ್ನು ಉಳಿಸಿಕೊಳ್ಳಬೇಕಾದ ಅಗತ್ಯವನ್ನು ಡಾ. ಕರ್ಜಗಿ ಅವರು ಮನದಟ್ಟಾಗುವಂತೆ ವಿವರಿಸುತ್ತಾರೆ. ನಮ್ಮ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಮೇಲಿನ ಪ್ರೀತಿ ಕೇವಲ ಮಾತಿನಲ್ಲಿ ಅಲ್ಲ, ಬದುಕಿನ ನಡೆನುಡಿಯಲ್ಲಿ ವ್ಯಕ್ತವಾಗಬೇಕು ಎಂಬ ಸಂದೇಶ ಈ ಕೃತಿಯಲ್ಲಿ ಸ್ಪಷ್ಟವಾಗಿ ಮೂಡಿಬರುತ್ತದೆ.

ಡಾ. ಗುರುರಾಜ್ ಕರ್ಜಗಿ ಅವರ ಬರವಣಿಗೆಯ ಶೈಲಿ ಈ ಕೃತಿಯ ವಿಶೇಷತೆ. ಅವರು ಸಣ್ಣ ಅನುಭವಗಳು, ಕಥನಗಳು ಮತ್ತು ಉದಾಹರಣೆಗಳ ಮೂಲಕ ದೊಡ್ಡ ತತ್ವಗಳನ್ನು ಸರಳವಾಗಿ ವಿವರಿಸುತ್ತಾರೆ. ಇದರಿಂದ ಓದುಗನಿಗೆ ಬರಹ ಭಾರವಾಗುವುದಿಲ್ಲ; ಬದಲಾಗಿ ತನ್ನ ಬದುಕಿನೊಂದಿಗೆ ಆ ವಿಚಾರಗಳನ್ನು ಜೋಡಿಸಿಕೊಳ್ಳುವ ಅವಕಾಶ ದೊರಕುತ್ತದೆ. ಈ ಕಾರಣದಿಂದಲೇ ಕರುನಾಡು ಬಾ ಬೆಳಕೆ ಕೃತಿ ಪಂಡಿತ ವಲಯಕ್ಕೂ, ಸಾಮಾನ್ಯ ಓದುಗರಿಗೂ ಸಮಾನವಾಗಿ ಮೆಚ್ಚುಗೆಯನ್ನುಗಳಿಸಿದೆ. ಈ ಕೃತಿಯಲ್ಲಿ ಆಶಾವಾದದ ಧ್ವನಿ ಗಟ್ಟಿಯಾಗಿ ಕೇಳಿಸುತ್ತದೆ. ಸಮಾಜದಲ್ಲಿ ಅಸಮತೆ, ಮೌಲ್ಯಪತನ ಮತ್ತು ಅಸಹಿಷ್ಣುತೆ ಹೆಚ್ಚುತ್ತಿರುವಾಗಲೂ, ಮನುಷ್ಯನಲ್ಲಿ ಇರುವ ಒಳ್ಳೆಯತನದ ಮೇಲಿನ ನಂಬಿಕೆಯನ್ನು ಡಾ. ಕರ್ಜಗಿ ಅವರು ಕಳೆದುಕೊಳ್ಳುವುದಿಲ್ಲ.

**ಪ್ರತಿಯೊಬ್ಬರಲ್ಲೂ ಒಂದು ಬೆಳಕು ಇದೆ;** ಅದನ್ನು ಜಾಗೃತಗೊಳಿಸುವುದೇ ನಿಜವಾದ ಶಿಕ್ಷಣ ಮತ್ತು ಬದುಕಿನ ಸಾಧನೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸುತ್ತಾರೆ. ಒಟ್ಟಾರೆ, ಕರುನಾಡು ಬಾ ಬೆಳಕೆ ಕೃತಿ ಕೇವಲ ಓದುವ ಪುಸ್ತಕವಲ್ಲ; ಅದು ಆತ್ಮಪರಿಶೀಲನೆಗೆ ಆಹ್ವಾನಿಸುವ ಚಿಂತನಾ ದೀಪ. ಡಾ. ಗುರುರಾಜ್ ಕರ್ಜಗಿ ಅವರ ಈ ಕೃತಿ ಓದುಗರನ್ನು ಉತ್ತಮ ಮಾನವನಾಗಲು, ಜವಾಬ್ದಾರಿಯುತ ನಾಗರಿಕನಾಗಲು ಮತ್ತು ಕನ್ನಡ ನಾಡಿನ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರೇರೇಪಿಸುತ್ತದೆ. ಕನ್ನಡ ಸಾಹಿತ್ಯ, ಚಿಂತನಾ ಲೋಕಕ್ಕೆ ಇದು ಅಮೂಲ್ಯ ಕೊಡುಗೆ ಎಂದು ನಿಸ್ಸಂದೇಹವಾಗಿ ಹೇಳಬಹುದು.



■ ಚನ್ನೇಗೌಡ ಉಜ್ಜನಿ ಚಲುವಯ್ಯ



# ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಅವಧಿಯನ್ನು 3 ವರ್ಷಗಳಿಗೆ ಘೋಷಣೆ ನೀಡಲು ಮನವಿ

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೋತ್ಸಾಹದೊಂದಿಗೆ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಸಂರಕ್ಷಣೆ, ಪ್ರಚಾರದ ಉದ್ದೇಶದಿಂದ ಹುಟ್ಟಿ, ಕನ್ನಡ ಸಾಹಿತ್ಯ ಸಮ್ಮೇಳನಗಳ ಆಯೋಜನೆ, ಪುಸ್ತಕ ಪ್ರಕಟಣೆ, ಜಿಲ್ಲಾ ಶಾಖೆಗಳ ಸ್ಥಾಪನೆಗಳೊಂದಿಗೆ ಕನ್ನಡ ಭಾಷಾ ಚಳುವಳಿಗೆ ಪ್ರಮುಖ ವೇದಿಕೆಯಾಗಿ ಬೆಳೆದು, ಕರ್ನಾಟಕದ ಏಕೀಕರಣದಲ್ಲಿಯೂ ಇಂದಿಗೂ ಮಹತ್ವದ ಪಾತ್ರ ವಹಿಸುತ್ತಾ ಬರುತ್ತಿದೆ. ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೋತ್ಸಾಹದಿಂದ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡಿತು. ಹೆಚ್.ವಿ. ನಂಜುಂಡಯ್ಯರವರು ಮೊದಲ ಅಧ್ಯಕ್ಷರಾಗಿದ್ದರು. 1938ರಲ್ಲಿ ಪರಿಷತ್ತಿಗೆ ಪ್ರತ್ಯೇಕ ಕಟ್ಟಡದ ಶಂಕುಸ್ಥಾಪನೆ, ಬಿ. ಎಂ. ಶ್ರೀಕಂಠಯ್ಯ ಅವರ ಮಾರ್ಗದರ್ಶನದಲ್ಲಿ ಸಿರಿಗನ್ನಡಂ ಗೆಲ್ಗೆ ಎಂಬ ಘೋಷಣೆಯೊಂದಿಗೆ ಪರಿಷತ್ತಿನ ಲೋಗೋ ರಚನೆ, ಅಂದಿನಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆ ಮತ್ತು ಪ್ರಚಾರ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಾಖೆಗಳನ್ನು ಸ್ಥಾಪಿಸಿ ಕನ್ನಡದ ಕೆಲಸವನ್ನು ಇಂದಿಗೂ ಮಾಡುತ್ತಲೇ ಬರುತ್ತಿದೆ. ಗಮಕ ಕಲೆಗಾಗಿ ತರಗತಿಗಳು ಮತ್ತು ಪರೀಕ್ಷೆಗಳು, ಕನ್ನಡ ನಾಡು–ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷಾ ಚಳುವಳಿಗೆ ಬೆಂಬಲ, ಕರ್ನಾಟಕ ಏಕೀಕರಣ



ಚಳವಳಿಯ ಮೂಲಕ ಕನ್ನಡ ರಾಜ್ಯ ರಚನೆಗೆ ಒತ್ತಾಯ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಈ ನಾಡಿನ ಮೂಲೆ ಮೂಲೆಗಳಲ್ಲಿ ಪಸರಿಸುವಲ್ಲಿ ಮತ್ತು ಕನ್ನಡಿಗರನ್ನು ಒಗ್ಗೂಡಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳು ಅಂದಿನಿಂದ ಇಂದಿಗೂ ಮಹತ್ವದ ಪಾತ್ರವನ್ನು ವಹಿಸುತ್ತಲೇ ಬರುತ್ತಿದ್ದಾರೆ. 2016ರಲ್ಲಿ ಕಸಾಪದ ಅಧ್ಯಕ್ಷರಾಗಿದ್ದ ಮನು ಬಳಿಗಾರ್ ರವರು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರ ಅವಧಿಯನ್ನು 3 ವರ್ಷಗಳಿಂದ 5 ವರ್ಷಕ್ಕೆ ವಿಸ್ತರಿಸಿಕೊಂಡಿದ್ದರು. ಇದರ ಪರ ಮತ್ತು ವಿರೋಧದ ಚರ್ಚೆ ಹಲವಾರು ದಿಗ್ಗಜರ ಮೂಲಕ ವಿಚಾರಗಳು ತುಂಬಾ ನಡೆಯಿತು ಆದರೂ ಇದನ್ನು ಮುಂದಿನ ಅಧ್ಯಕ್ಷರು ಹೇಗೆ ನಿಭಾಯಿಸಲಿದ್ದಾರೆ ಎಂಬ ಅಂಶವೂ ಪ್ರಮುಖವಾಗಿತ್ತು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪರ ವಿರೋಧ ಎಲ್ಲವೂ ಸಾಮಾನ್ಯವೇ.. ಯಾರೇ ಅಧ್ಯಕ್ಷರಾದರೂ, ಮೊದಲು ನಮ್ಮ ಅಕ್ಷರ ಸಂಸ್ಕೃತಿಯನ್ನು ಉಳಿಸುವ ಕೆಲಸ ಮಾಡಬೇಕು. ಇಂದಿನ ಡಿಜಿಟಲ್ ಯುಗದಲ್ಲಿ ಕನ್ನಡ ನಶಿಸುತ್ತಿದೆ. ಇದಕ್ಕೆ ಕಾರಣ ನಾವು ಕನ್ನಡದ ಬಳಕೆಯನ್ನು ಕಡಿಮೆ ಮಾಡಿರುವುದೇ ಆಗಿದೆ. ಹಾಗಾಗಿ ನಮ್ಮ ಅಕ್ಷರ ಸಂಸ್ಕೃತಿಯನ್ನು ಉಳಿಸಬೇಕಾದ ತುರ್ತು ಇದೆ. ಇನ್ನು ಎರಡನೆಯದಾಗಿ ಕನ್ನಡ ಮಾಧ್ಯಮ ಶಾಲೆಗಳನ್ನು ಖಾಸಗಿ ಶಾಲೆಗಳ ದರ್ಜೆಗೆ ಅಂದರೆ ಗುಣಮಟ್ಟಕ್ಕೆ ಏರಿಸಬೇಕು. ಮೂಲಭೂತವಾಗಿ ಇವೆರಡೂ ಕೆಲಸ ನಡೆದರೆ ಉಳಿದದ್ದೆಲ್ಲಾ ತಾನಾಗಿಯೇ ಆಗುತ್ತದೆ ಎನ್ನಬಹುದು. ಈ ನೆಲದದಲ್ಲಿ ರಾಜರ್ಷಿಗಳು, ವಿದ್ವಾಂಸರು, ಹಿರಿಯ ಸಾಹಿತಿಗಳು, ಲೇಖಕರು, ಬರಹಗಾರರು, ಹೀಗೆ ಇನ್ನೂ ಹಲವಾರು ಬುದ್ಧಿಜೀವಿಗಳು ಕನ್ನಡದ ಕೃಷಿಯಲ್ಲಿ ತೊಡಗಿದ್ದಾರೆ. ಅವರೆಲ್ಲರಿಗೂ ಆ ಅತ್ಯುನ್ನತ ಸ್ಥಾನ ಕಸಾಪ ಅಧ್ಯಕ್ಷರ ಸ್ಥಾನದಲ್ಲಿ ಕುಳಿತು ಕೊಳ್ಳಲು ಅವಕಾಶ ಗಳಿರುವುದರಿಂದ ಅಧ್ಯಕ್ಷರ ಅವಧಿಯನ್ನು ವಿಸ್ತರಣೆ ಮಾಡಿರುವುದನ್ನು ತಿದ್ದುಪಡಿಗೊಳಿಸಿ, 5 ವರ್ಷದಿಂದ ಮತ್ತೆ 3 ವರ್ಷಕ್ಕೆ ಇಳಿಸುವ ವ್ಯವಸ್ಥೆ ಈ ಕೂಡಲೇ ನಡೆಯಬೇಕಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡದ ಕಾಯಕ ಮಾಡುವ ಆಸೆ ಇರುವವರಿಗೆ ಮೂರು ವರ್ಷ ಸಾಕು, ಜೊತೆಗೆ ಈ ನೆಲದ ಹೊಸ ಪ್ರತಿಭೆಗಳಿಗೆ ಆಕಾಂಕ್ಷಿಗಳಿಗೆ ಅವಕಾಶ ಮಾಡಿಕೊಡ ಬೇಕಿರುವುದರಿಂದ ಈ ಅಧ್ಯಕ್ಷರ ಅವಧಿ 3 ವರ್ಷಕ್ಕೆ ಮಾತ್ರ ಸೀಮಿತ ಗೊಳಿಸುವುದು ಉತ್ತಮ. ಸದ್ಯದ ಸರ್ಕಾರ ಆದೇಶದಂತೆ ಆಡಳಿತಾಧಿಕಾರಿಗಳಾಗಿರುವ ಗೌರವಾನ್ವಿತ ರಾಗಿರುವ ಶ್ರೀಮತಿ ಕೆ ಎಂ ಗಾಯತ್ರಿ, ಭಾ ಆ ಸೇ ರವರಲ್ಲಿ ಈ ನೆಲದ 7 ಕೋಟಿ ಕನ್ನಡಿಗರ ಪರವಾಗಿ ಮುಂದಿನ ತಲೆಮಾರಿಗೆ ಅನುಕೂಲವಾಗಬೇಕಾದರೆ, ಈ ನೆಲದ ಕನ್ನಡದ ಚಿಗುರು ಜಗತ್ತಿನ ಉದ್ದಗಲಕ್ಕೂ ಪ್ರಸರಿಸಿ ಬಿತ್ತಿ ಬೆಳೆಸಲು ಕಸಾಪ ಅಧ್ಯಕ್ಷರ ಅವಧಿಯನ್ನು ಮೂರು ವರ್ಷಗಳ ಅವಧಿಗೆ ಮಾನ್ಯ ಮಾಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತಿದ್ದೇವೆ.


# ಸತೀಶ್ ಧವನ್ ರವರ 24ನೇ ವರ್ಷದ ಪುಣ್ಯಸ್ಮರಣೆ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ,
ವಿಮರ್ಶಕರು

ಪ್ರೊ–ಸತೀಶ್ ಧವನ್ ರವರು 1920 ಸೆಪ್ಟೆಂಬರ್ 25 ರಂದು ಶ್ರೀನಗರದಲ್ಲಿ ಜನಿಸಿದರು. ಇವರದು ವಿದ್ಯಾವಂತ ಸುಸಂಸ್ಕೃತ ಕುಟುಂಬವಾಗಿತ್ತು. ಪ್ರೊ– ಸತೀಶ್ ಧವನ್ ರವರು ಬಾಲ್ಯದಲ್ಲಿ ಅಸಾಧಾರಣ ಮೇಧಾಶಕ್ತಿ ಹೊಂದಿದ್ದರಲ್ಲದೆ ವಿನಯ, ವಿಶ್ವಾಸ,ವಿಶಾಲ ಮನೋಭಾವ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ಲಾಹೋರ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಗಣಿತ ಭೌತಶಾಸ್ತ್ರದಲ್ಲಿ ಪದವಿ ಏರೋನಾಟಿಕಲ್ ವಿಜ್ಞಾನದಲ್ಲಿ ಇಂಜಿನಿಯರಿಂಗ್ ಪದವಿಗಳಿಸಿದರಲ್ಲದೆ ಶಿಕ್ಷಣ ಮುಂದುವರಿಸಿ ಸ್ನಾತಕೋತ್ತರ ಪದವಿ ಗಳಿಸಿದರು. ಮುಂದೆ ಧವನ್ ಅವರು ಅಮೆರಿಕಕ್ಕೆ ತೆರಳಿ ಅಲ್ಲಿನ ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಶಿಕ್ಷಣ ಪಡೆದು ಡಾಕ್ಟರೇಟ್ ಪದವಿಗಳಿಸಿದರು.

ಅಮೆರಿಕದಿಂದ ಭಾರತಕ್ಕೆ ಹಿಂದಿರುಗಿದ ಮೇಲೆ ಧವನ್ ಅವರು ಬೆಂಗಳೂರಿಗೆ ಬಂದು ಅಲ್ಲಿನ ಭಾರತೀಯ ವಿಜ್ಞಾನ ಸಂಸ್ಥೆಗೆ ಸೇರಿದರು. ಅಲ್ಲಿ ವಾಯುಮಾನ ಶಾಸ್ತ್ರದ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರಾಗಿ ಬಳಿಕ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. 1962 ರಲ್ಲಿ ಸತೀಶ್ ಧವನ್ ಅವರು ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ ನೇಮಕಗೊಂಡರು. ವಿಜ್ಞಾನಿ ವಿಕ್ರಮ್ ಸಾರಾ ಬಾಯ್ ಅವರು ತೀರಿಕೊಂಡ ಮೇಲೆ 1972 ರಲ್ಲಿ ಧವನ್ ಅವರು ಬಾಹ್ಯಾಕಾಶ ಆಯೋಗ ಹಾಗೂ ಇಸ್ರೋದ ಅಧ್ಯಕ್ಷರಾಗಿ ನೇಮಕಗೊಂಡರು. ಅವರು ಭಾರತ ಸರ್ಕಾರದ ಯೋಮ ವಿಭಾಗದಲ್ಲಿ ಕಾರ್ಯದರ್ಶಿಯಾಗಿಯೂ ಅಧಿಕಾರ ನಿರ್ವಹಿಸಿದರು. ಪ್ರೊ ಸತೀಶ್ ಧವನ್ ಅವರು ಮಹಾನ್ ವಿಜ್ಞಾನಿ ಸಾರಾಭಾಯ್ ರವರು ಕಂಡ ಕನಸನ್ನು ನನಸಾಗಿಸಲು ಅವಿಶ್ರಾಂತವಾಗಿ ದುಡಿದರು ಅತ್ಯಂತ ಹಿರಿಯ ಹುದ್ದೆಯನ್ನು ಅಲಂಕರಿಸಿದ್ದರು. ಇವರಿಗೆ ಆಡಂಬರ, ಪ್ರಶಂಸೆ, ಓಲೈಕೆ ಯಾವುದೂ ಇಷ್ಟವಾಗುತ್ತಿರಲಿಲ್ಲ. ಅವರು ಶಿಸ್ತುಬದ್ಧ,ವಿನಯವಂತ, ಶ್ರದ್ಧಾವಂತ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿದ್ದರು. 1980 ಜುಲೈ 18ರಂದು ರೋಹಿಣಿ ಉಪಗ್ರಹವನ್ನು ಶ್ರೀಹರಿಕೋಟಾದಿಂದ ಯಶಸ್ವಿಯಾಗಿ ಹಾರಿಸಲಾಯಿತು.ಈ ಅದ್ಭುತ ಸಾಧನೆಯನ್ನು ದೇಶ–ವಿದೇಶಗಳ ವಿಜ್ಞಾನಿಗಳು ಹಾಗೂ ಜನತೆ ಅಪಾರವಾಗಿ ಮೆಚ್ಚುಗೆ ವ್ಯಕ್ತಪಡಿಸಿತು.



ಇದರಿಂದಾಗಿ ಉಪಗ್ರಹ ಉಡಾವಣೆಯಂತಹ ಮಹತ್ಕಾರ್ಯವನ್ನು ಸಾಧಿಸುವ ಸಾಮರ್ಥ್ಯ ಪಡೆದಿದ್ದ ಕೆಲವೇ ರಾಷ್ಟ್ರಗಳಲ್ಲಿ ಭಾರತವೂ ಸೇರಿತು. ಉಪಗ್ರಹಗಳ ಉಡಾವಣೆ ವೇಳೆಯಲ್ಲಿ ಮಾಡಬೇಕಾದ ಸಂಕೀರ್ಣ ವ್ಯವಸ್ಥೆ ,ಪರಿಶೀಲನೆ, ಅನುಸರಿಸಬೇಕಾದ ಕ್ರಮ ಬದ್ಧ ವಿಧಾನಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರು. ಬಾಹ್ಯಾಕಾಶ ಯಶಸ್ವಿ ಪ್ರಯೋಗಗಳಿಗೆ ಧವನ್ ಅವರ ಅತಿದೊಡ್ಡ ಕೊಡುಗೆಯಾಗಿದೆ. ಮುಂದೆ ಎಸ್‌ಎಲ್ವಿ 3 ಹಾಗೂ ಎಸ್ ಎಲ್ವಿ 3ಡಿ 2 ಎಂಬ ರಾಕೆಟ್‌ಗಳನ್ನು ಬಹಳ ಯಶಸ್ವಿಯಾಗಿ ಅಂತರಿಕ್ಷಕ್ಕೆ ಕಳಿಸಲಾಯಿತು. ಚಂದ್ರ ಗ್ರಹದ ಅನ್ವೇಷಣೆಗಾಗಿ ಇಸ್ರೋ ಹಮ್ಮಿಕೊಂಡಿರುವ ಕಾರ್ಯಕ್ರಮ ಹಾಗೂ ಪಿಎಸ್ ಎಲ್ವಿ ರಾಕೆಟ್ ಅನ್ನು ಬಳಸಲು ಕೈಗೊಂಡ ದೃಢನಿಲುವು ಧವನ್ ಅವರ ವೈಜ್ಞಾನಿಕ ಪ್ರತಿಭೆ, ತಂತ್ರಜ್ಞಕೌಶಲ ಹಾಗೂ ಸಮರ್ಥ ಆಡಳಿತಕ್ಕೆ ಸಾಕ್ಷಿಯಾಗಿದೆ.

1979 ಜೂನ್ ತಿಂಗಳಲ್ಲಿ ಭೂಮಿಯ ಪರಿವೀಕ್ಷಣೆಗಾಗಿ ನಿರ್ಮಿಸಿದ ಭಾಸ್ಕರ ಉಪಗ್ರಹ ಯಶಸ್ವಿಗೊಂಡಿತು. 1980ರ ಜುಲೈ 18ರಂದು ಭಾರತದ ಮೂರನೇ ಉಪಗ್ರಹ ರೋಹಿಣಿಯನ್ನು SSlV3 ರಾಕೆಟ್‌ನಿಂದ ಹಾರಿಸಿದಾಗ ಅದರ ಯಶಸ್ವಿ ಉಡಾವಣೆಗೆ ಅಂತರಾಷ್ಟ್ರೀಯ ಮಟ್ಟದ ಮನ್ನಣೆ ದೊರೆಯಿತು. ವ್ಯೋಮ ಸಂಶೋಧನೆ,

ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಗೆ ಸತೀಶ್ ಧವನ್ ಅವರ ಅಮೂಲ್ಯ ಕೊಡುಗೆಯನ್ನು ಗುರುತಿಸಿ ಅವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದವು. ದೇಶ ಹಾಗೂ ವಿದೇಶಗಳ ಪ್ರಸಿದ್ಧ ವಿಶ್ವವಿದ್ಯಾಲಯಗಳು ಧವನ್ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದರು.ಇವರು ಏರೋನಾಟಿಕಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷರಾಗಿದ್ದರು. ಮಧ್ಯಪ್ರದೇಶ ಸರ್ಕಾರ ಇಂಜಿನಿಯರಿಂಗ್ ಹಾಗೂ ತಾಂತ್ರಿಕ ವಿಜ್ಞಾನಗಳಲ್ಲಿ ನೆಹರು ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ.ಭಾರತ ಸರ್ಕಾರ ಇವರಿಗೆ ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ಪ್ರೊ–ಸತೀಶ್ ಧವನ್ ರವರು ಭಾರತದ ಪ್ರತಿಭಾವಂತ ವಿಜ್ಞಾನಿಗಳಲ್ಲಿ ಒಬ್ಬರು.ಇವರು ಪ್ರತಿಭಾವಂತ ಏರೋನಾಟಿಕಲ್ ಎಂಜಿನಿಯರ್, ಬಾಹ್ಯಾಕಾಶ ವಿಜ್ಞಾನಿ, ದೇಶಪ್ರೇಮಿ ಹಾಗೂ ದೂರದೃಷ್ಟಿ ಉಳ್ಳವರಾಗಿದ್ದರು.

ವೈಜ್ಞಾನಿಕ ಪ್ರಗತಿ, ಬಾಹ್ಯಾಕಾಶ ವಿಜ್ಞಾನ, ಸಂಶೋಧನೆ ಹಾಗೂ ದೇಶದ ಪ್ರಗತಿಗಾಗಿ ಯೋಜನೆಗಳ ನಿರ್ಮಾಣ ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರ ಸಾಧನೆ ಪರಿಶ್ರಮಗಳು ಅನನ್ಯ ವೆನಿಸಿದೆ. ಇಂತಹ ಪ್ರಸಿದ್ಧ ವಿಜ್ಞಾನಿ ಭಾರತ ಬಾಹ್ಯಾಕಾಶ ಸಂಶೋಧನೆಯ ಪ್ರಯೋಗಗಳಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿ ಹಾಗೂ ಇಡೀ ವಿಶ್ವವೇ ನಿಬ್ಬೆರಗಾಗುವಂತೆ ಮಾಡಿದ ಭಾರತೀಯ ವಿಜ್ಞಾನಿಗಳ ಸಮೂಹಕ್ಕೆ ಭೀಷ್ಮ ಪಿತಾಮಹರೆನಿಸಿದ ಪ್ರೊ ಸತೀಶ್ ಧವನ್ ಅವರು 2002 ಜನವರಿ 03ರಂದು ತನ್ನ 82ನೇ ವಯಸ್ಸಿನಲ್ಲಿ ಬಾರದ ಲೋಕಕ್ಕೆ ಹೋದರು,ಅಂದಿನಿಂದ ವಿಜ್ಞಾನ ಲೋಕ ಬಡವಾಗಿ ಇಲ್ಲಿಗೆ 24 ವರ್ಷವಾಯಿತು. ಇಂತಹ ಮಹಾನ್ ವಿಜ್ಞಾನಿಗೆ ಇಡೀ ದೇಶವಿದೇಶ ಗೌರವ ಪೂರ್ವಕ ಶ್ರದ್ಧಾಂಜಲಿ ಅರ್ಪಿಸಿತು.

ಪ್ರಸಿದ್ಧ ವಿಜ್ಞಾನಿ ಪ್ರೊ ಸತೀಶ್ ಧವನ್ ರವರನ್ನು ಭಾರತೀಯರಾದ ನಾವುಗಳು ಇಂದು ಅವರ 24 ನೇ ವರ್ಷದ ಪುಣ್ಯಸ್ಮರಣೆ ದಿನದೊಂದು ಸ್ಮರಿಸಿ, ನೆನೆಯುತ್ತಾ ಅವರ ಕೊಡುಗೆಗಳನ್ನು, ಸಾಧನೆಗಳನ್ನು ಹಾಗೂ ಆದರ್ಶಗಳನ್ನು ಬಹುತೇಕ ಎಲ್ಲಾ ಹಿರಿಯ ಹಾಗೂ ಕಿರಿಯ ವಿಜ್ಞಾನಿಗಳು ಪಾಲಿಸಿದ್ದೇ ಆದರೆ ಅದೇ ಅವರಿಗೆ ಕೊಟ್ಟ ಗೌರವ.

# ಬಜೆಟ್ ಪೂರ್ವ ಭಾವಿ ಸಭೆ; ಉದ್ಯಾನ, ಬೀದಿ ದೀಪಗಳಿಗೆ ಆದ್ಯತೆ

• ಉದಯವಾಹಿನಿ ರಬಕವಿ ಬನಹಟ್ಟಿ

ಇಲ್ಲಿಯ ನಗರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸ್ಥಳೀಯರ ಸಲಹೆ ಸೂಚನೆ, ಮಾರ್ಗದರ್ಶನ ಅಗತ್ಯವಾಗಿದೆ. ಸಾರ್ವಜನಿಕರಿಂದ ವಸೂಲಿ ಮಾಡಲಾದ ತೆರಿಗೆ ಮತ್ತು ಸರ್ಕಾರದ ಅನುದಾನಗಳನ್ನು ಪರಿಶೀಲನೆ ಮಾಡಿ ಬಜೆಟ್ ಮಂಡನೆ ಮಾಡಲಾಗುವುದು. ಮೂಲ ಸೌಕರ್ಯಗಳಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು ಎಂದು ರಬಕವಿ ಬನಹಟ್ಟಿ ನಗರಸಭೆ ಪೌರಾಯುಕ್ತ ರಮೇಶ ಜಾಧವ ತಿಳಿಸಿದರು.

ರಬಕವಿ ಬನಹಟ್ಟಿ ನಗರಸಭೆಯ ಸಭಾ ಭವನದಲ್ಲಿ ನಡೆದ ಬಜೆಟ್ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಮುಂಬರುವ ಬಜೆಟ್ ಸಂದರ್ಭದಲ್ಲಿ, ರಬಕವಿ ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಉದ್ಯಾನಗಳ ಅಭಿವೃದ್ಧಿ ಮತ್ತು ಬೀದಿ ದೀಪಗಳ ನಿರ್ವಹಣೆಗೆ ಆದ್ಯತೆ ನೀಡಲು ಗಮನ ನೀಡಲಾಗುವುದು ಎಂದು ಹೇಳಿದರು. ಸಾಮಾಜಿಕ ಕಾರ್ಯಕರ್ತ ಕಿರಣ ಆಳಗಿ ಮಾತನಾಡಿ, ರಬಕವಿ ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಮೂತ್ರಾಲಯಗಳ ಕೊರತೆ ಇದ್ದು, ಇದರಿಂದಾಗಿ ಸಾರ್ವಜನಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಸಾರ್ವಜನಿಕ ಮೂತ್ರಿಗಳನ್ನು ನಿರ್ಮಾಣ ಮಾಡಬೇಕು. ಅದೇ ರೀತಿಯಾಗಿ ಸ್ಮಶಾನಗಳ ಅಭಿವೃದ್ಧಿಗೂ ಗಮನ ನೀಡಬೇಕು. ಬೀದಿ ನಾಯಿಗಳ ನಿರ್ವಹಣೆಯ ಬಗ್ಗೆ ಗಮನ ನೀಡಬೇಕು ಎಂದು ತಿಳಿಸಿದರು. ನಗರದ ಮುಖಂಡ ಶಂಕರ ಜಾಲಿಗಿಡದ ಮಾತನಾಡಿ, ಬನಹಟ್ಟಿ ವೈಭವ ಟಾಕೀಸ್ ಮುಂಭಾಗದಲ್ಲಿ ಬಸ್


ಉದಯವಾಹಿನಿ ಚಿತ್ರ

ನಿಲ್ದಾಣವನ್ನು ನಿರ್ಮಾಣ ಮಾಡಲು ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಬೀದಿ ನಾಯಿಗಳ ನಿರ್ವಹಣೆಗೆ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ನಡೆಯಲಿದೆ. ಮುಂದಿನ ಮಾರ್ಚ್ ತಿಂಗಳಲ್ಲಿ ವೈಭವ ಚಿತ್ರ ಮಂದಿರದಿಂದ ನೂಲಿನ ಗಿರಣಿಯವರೆಗೆ ಬೀದಿ ದೀಪಗಳನ್ನು ಅಳವಡಿಸಲಾಗುವುದು ಎಂದು ಪೌರಾಯುಕ್ತ ತಿಳಿಸಿದರು. ಮತ್ತೊಬ್ಬ ಮುಖಂಡ ಅಶೋಕ ರಾವಳ ಮಾತನಾಡಿದರು. ಸಭೆಯಲ್ಲಿ ಸುನೀಲಕುಮಾರ ಬಬಲಾದಿ, ಬಾಬುರಾವ ಕಮತಗಿ, ಅಮೀರಖಾನ ಖಲೀಫಾ, ಮುಖೇಶ ಬನಹಟ್ಟಿ, ಭೀಮು ಬಾಡಗಿ, ಶೋಭಾ ಹೊಸಮನಿ, ಮಹಾವೀರ ದೈಗೊಂಡ ಮತ್ತು ಲಕ್ಷ್ಮಿ ತೊನಶ್ಯಾಳ ಇದ್ದರು.

### ದುಶ್ಚಟಗಳಿಂದ ವಿದ್ಯಾರ್ಥಿಗಳನ್ನು ದೂರವಿಡಲು ಕ್ರೀಡೆ, ಸಾಂಸ್ಕೃತಿಕ ಚುಟವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಬೇಕು

# ವಿದ್ಯಾರ್ಥಿನಿಯರಿಗೂ ಮುಟ್ಟಿನ ರಜೆಗೆ ಶಿಫಾರಸು: ಅಪರ್ಣಾ ಕೊಳ್ಳ

• ಉದಯವಾಹಿನಿ ದಾವಣಗೆರೆ

ಮಹಿಳಾ ನೌಕರರಿಗೆ ತಿಂಗಳಲ್ಲಿ ಒಂದು ದಿನ ಮುಟ್ಟಿನ ರಜೆಯ ಸೌಲಭ್ಯ ಕಲ್ಪಿಸಿದ ನೀತಿಯನ್ನು ಶಾಲಾ-ಕಾಲೇಜು ವಿದ್ಯಾರ್ಥಿನಿಯರಿಗೂ ವಿಸ್ತರಿಸುವಂತೆ ರಾಜ್ಯ ಸರ್ಕಾರಕ್ಕೆ ಶೀಘ್ರ ಶಿಫಾರಸು ಮಾಡಲಾಗುವುದು ಎಂದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯೆ ಅಪರ್ಣಾ ಎಂ.ಕೊಳ್ಳ ಭರವಸೆ ನೀಡಿದರು.

ಇಲ್ಲಿನ ಎವಿಕೆ ಕಾಲೇಜು ರಸ್ತೆಯ ಗುರುಭವನದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ ಶುಕ್ರವಾರ ಏರ್ಪಡಿಸಿದ್ದ 'ನಿಮ್ಮ ಹಕ್ಕು ನಮ್ಮ ಧ್ವನಿ' ಸಂವಾದದಲ್ಲಿ ಮುಟ್ಟಿನ ರಜೆ ವಿದ್ಯಾರ್ಥಿನಿಯರಿಗೂ ಸಿಗಬೇಕಲ್ಲವೇ' ಎಂಬ ಬಾಲಕಿಯೊಬ್ಬರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

**ಬಾಲಕ-ಬಾಲಕಿಯರು ಎಚ್ಚರಿಕೆಯಿಂದ ಇರುವ ಅಗತ್ಯವಿದೆ**

ಮುಟ್ಟಿನ ರಜೆಯ ಸೌಲಭ್ಯ ಕೇಳಿದ್ದು ಸ್ವಾಗತಾರ್ಹ. ಉತ್ತಮ ವಿಚಾರವನ್ನು ಬಾಲಕಿ ಮುಂದಿಟ್ಟಿದ್ದಾಳೆ. ಇದು ಸರ್ಕಾರದ ಹಂತದಲ್ಲಿ ತೀರ್ಮಾನ ಆಗಬೇಕಿದೆ. ಈ ಕುರಿತು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ರಾಜ್ಯ ಸರ್ಕಾರಕ್ಕೆ ಕೂಡಲೇ ಶಿಫಾರಸು ಮಾಡಲಿದೆ' ಎಂದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ ಹೆಚ್ಚಾಗಿರುವುದನ್ನು ಅಂಕಿ-ಅಂಶಗಳು ಖಚಿತಪಡಿಸಿವೆ. ಫೆಬ್ರುವರಿ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಬಾಲ್ಯವಿವಾಹಗಳು ಹೆಚ್ಚಾಗಿ ನಡೆಯುವ ಸಾಧ್ಯತೆ ಇದೆ. ಈ ಬಗ್ಗೆ ಇನ್ನಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ. ಇಂತಹ ವಿಚಾರಗಳು ಗಮನಕ್ಕೆ ಬಂದ ಕೂಡಲೇ ಮಕ್ಕಳ ಸಹಾಯವಾಣಿಗೆ ದೂರು ನೀಡಿ ಎಂದು ಸಲಹೆ ನೀಡಿದರು.

ಪ್ರೀತಿ, ಪ್ರೇಮದ ನೆಪದಲ್ಲಿ ಲೈಂಗಿಕ ದೌರ್ಜನ್ಯ ಹೆಚ್ಚಾಗಿದೆ. ಪೋಕ್ಸೊ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಪ್ರೀತಿ-ಪ್ರೇಮಕ್ಕೆ ಸಂಬಂಧಿಸಿದವು ಹೆಚ್ಚಾಗಿವೆ. ಈ ಬಗ್ಗೆ ಬಾಲಕ-ಬಾಲಕಿಯರು ಎಚ್ಚರಿಕೆಯಿಂದ ಇರುವ ಅಗತ್ಯವಿದೆ ಎಂದು ಕಿವಿಮಾತು ಹೇಳಿದರು.

**ಸ್ಕ್ರೀನ್‌ಟೈಮ್ ಕಡಿಮೆಯಾಗಲಿ:** ವಿದ್ಯಾರ್ಥಿಗಳು ಟಿವಿ ಹಾಗೂ ಮೊಬೈಲ್ ಫೋನ್ ಹೆಚ್ಚು ವೀಕ್ಷಿಸುತ್ತಿದ್ದಾರೆ. ಫೋನ್ ರೇಡಿಯೇಶನ್ ಕಣ್ಣು ಮನಸ್ಸಿನ ಮೇಲೆ ಪರಿಣಾಮ ಬೀರುತ್ತಿದೆ. ಇದರಿಂದ ವಿದ್ಯಾರ್ಥಿಗಳು ಏಕಾಗ್ರತೆ ಕಳೆದುಕೊಳ್ಳುತ್ತಿದ್ದಾರೆ. ಆನ್‌ಲೈನ್ ಗೇಮ್‌ಗಳಿಗೆ ನಿರ್ಬಂಧವಿದ್ದು, ಇವುಗಳಿಂದ ದೂರ ಇರಬೇಕು. ಸ್ಕ್ರೀನ್‌ಟೈಮ್ ಕಡಿಮೆಯಾದರೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅಭಿಪ್ರಾಯಪಟ್ಟರು.


ಉದಯವಾಹಿನಿ ಚಿತ್ರ

**ತಾತ್ಕಾಲಿಕವಾಗಿ ಮುಚ್ಚಿದ 10 ಶಾಲೆ**

**ಪ್ರವೇಶಾತಿ ಪ್ರಮಾಣ ಕುಸಿದ ಪರಿಣಾಮ ಜಿಲ್ಲೆಯಲ್ಲಿ 10 ಸರ್ಕಾರಿ ಶಾಲೆಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ. ನಿರೀಕ್ಷಿತ ರೀತಿಯಲ್ಲಿ ವಿದ್ಯಾರ್ಥಿಗಳು ದಾಖಲಾದರೆ ಈ ಶಾಲೆಗಳನ್ನು ಮತ್ತೆ ತೆರೆಯಲು ಸಿದ್ಧರಿದ್ದೇವೆ. ಮುಚ್ಚಿದ್ದ ಕೆಲ ಶಾಲೆಗಳು ಮತ್ತೆ ಕಾರ್ಯನಿರ್ವಹಿಸುತ್ತಿವೆ ಎಂದು ಡಿಡಿಪಿಐ ಜಿ. ಕೊಟ್ರೇಶ್ ಹೇಳಿದರು. ಆಂಗ್ಲ ಮಾಧ್ಯಮ ಹಾಗೂ ನಗರದ ಶಾಲೆಗಳ ಮೇಲಿನ ವ್ಯಾಮೋಹದಿಂದ ಸರ್ಕಾರಿ ಶಾಲೆಗಳಿಗೆ ಈ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಿ ಶಾಲೆಗಳಲ್ಲಿಯೂ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ಪಾಲಕರು ಮನಸ್ಥಿತಿಯನ್ನು ಬದಲಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಯೊಬ್ಬರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.**

**ಹಲವು ವಿದ್ಯಾರ್ಥಿಗಳಿಗೆ ಕನ್ನಡ ಕೂಡ ಸರಿಯಾಗಿ ಬರುತ್ತಿಲ್ಲ. ಇದಕ್ಕೆ ಶಿಕ್ಷಕರನ್ನು ದೂರಿದರೆ ಪ್ರಯೋಜನವಿಲ್ಲ. ಇದರಲ್ಲಿ ವಿದ್ಯಾರ್ಥಿಗಳ ಪಾತ್ರವೂ ಇದೆ.**
**- ಉಮಾ ಪ್ರಶಾಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ಪ್ರೌಢಶಾಲೆಯ ವಿದ್ಯಾರ್ಥಿಗಳು ಕೂಡ ಮದ್ಯ ಸೇವನೆ ಮಾಡಿ ಸಿಕ್ಕಿಬಿದ್ದಿದ್ದಾರೆ. ದುಶ್ಚಟಗಳಿಂದ ವಿದ್ಯಾರ್ಥಿಗಳನ್ನು ದೂರವಿಡಲು ಕ್ರೀಡೆ, ಸಾಂಸ್ಕೃತಿಕ ಚುಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಬೇಕು. ಪಾಲಕರು, ಶಾಲಾ-ಕಾಲೇಜುಗಳು ಇತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲೆಯಲ್ಲಿ 820 ವಿದ್ಯಾರ್ಥಿಗಳು ಶಾಲೆಗಳಿಂದ ಹೊರ ಉಳಿದಿದ್ದಾರೆ. ಇದಕ್ಕೆ ಬಡತನವೂ ಕಾರಣವಿರಬಹುದು. ಆದರೆ, ವಿದ್ಯಾರ್ಥಿಗಳು ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಿಕೊಳ್ಳಬೇಕು. ಕಷ್ಟಪಟ್ಟು ಓದುವ ಬದಲು ಇಷ್ಟಪಟ್ಟು ಓದಬೇಕು. ಮನೆ-ಮನೆಗೆ ಭೇಟಿ ನೀಡುವ ಪೊಲೀಸರು ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳ ಬಗ್ಗೆಯೂ ಮಾಹಿತಿ ಕಲೆಹಾಕಲಿದ್ದಾರೆ ಎಂದು ಹೇಳಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಮಂಜುಳಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜ ನಾಯ್ಕ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಎನ್. ಕವಿತಾ, ವೈದ್ಯ ಡಾ. ಸಿದ್ದೇಶ್, ಬಿಇಒಗಳಾದ ಪುಷ್ಪಲತಾ, ವಿಶಾಲಾಕ್ಷಿ ಹಾಜರಿದ್ದರು.

# ಕರ್ತವ್ಯ ವೇಳೆಯಲ್ಲಿ ನಗದು ನೋಂದಣಿ ಕಡ್ಡಾಯ: ಲೋಕಾಯುಕ್ತ

• ಉದಯವಾಹಿನಿ ವಿಜಯಪುರ

ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯ ಅವಧಿಯಲ್ಲಿ ನಗದು ಇರಿಸಿಕೊಂಡರೆ ಕಡ್ಡಾಯವಾಗಿ ಅದನ್ನು ರಿಜಿಸ್ಟರ್‌ನಲ್ಲಿ ಬರೆಯಬೇಕು, ಈ ಪರಿಪಾಠ ಬೆಳೆಸಿಕೊಳ್ಳಬೇಕು, ಇಲ್ಲವಾದರೆ ಇದನ್ನು ಅಕ್ರಮ ನಗದು ಎಂಬಂತೆ ಪರಿಗಣಿಸಿ ಪ್ರಕರಣ ದಾಖಲಿಸಲು ಹಿಂದೇಟು ಹಾಕುವುದಿಲ್ಲ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನೇಕ ಬಾರಿ ಅನಿರೀಕ್ಷಿತ ದಾಳಿ ನಡೆಸಿದ ಸಂದರ್ಭದಲ್ಲಿ ಅದರಲ್ಲೂ ವಿಜಯಪುರ ಜಿಲ್ಲೆಯಲ್ಲಿ ಅಧಿಕಾರಿಗಳ ಕಡೆಯಿಂದ ದೊಡ್ಡ ಪ್ರಮಾಣದ ನಗದು ದೊರಕಿದೆ. ಇದನ್ನು ನಾವು ಆಸ್ಪತ್ರೆಗೆ ಕಟ್ಟಲು, ಮಕ್ಕಳ ಶಾಲಾ ಶುಲ್ಕ ಕಟ್ಟಲು ತಂದಿದ್ದೇವೆ ಎಂದು ಅಧಿಕಾರಿಗಳು ಹಾರಿಕೆ ಉತ್ತರ ನೀಡಿದ್ದಾರೆ. ಆದರೆ, ರಿಜಿಸ್ಟರ್ ಪರಿಶೀಲನೆ ನಡೆಸಿದರೆ ಅದರ ದಾಖಲೆಯೇ ಇರುವುದಿಲ್ಲ, ರಿಜಿಸ್ಟರ್‌ನಲ್ಲಿ ದಾಖಲಾಗದೇ ಹೋದರೆ ಅದು ಅಕ್ರಮ ಹಣ ಎಂದೇ ಪರಿಗಣಿಸಲಾಗುವುದು ಎಂದರು. ವಿಜಯಪುರ ಜಿಲ್ಲೆಯ ಶಿಕ್ಷಣ ಇಲಾಖೆ, ಮಹಾನಗರ ಪಾಲಿಕೆ, ಪ್ರಾದೇಶಿಕ ಸಾರಿಗೆ ಇಲಾಖೆ ಮೇಲೆ ಇತ್ತೀಚೆಗೆ ಅನಿರೀಕ್ಷಿತ ದಾಳಿ ನಡೆಸಿದ್ದು, ವಿವಿಧ ಇಲಾಖೆಗಳಲ್ಲಿ 25ಕ್ಕೂ ಹೆಚ್ಚು ನ್ಯೂನತೆ, ಲೋಪದೋಷಗಳನ್ನು ಗುರುತಿಸಲಾಗಿದೆ.



ಈ ಕುರಿತಂತೆ ಅಧಿಕಾರಿಗಳಿಗೆ ಸ್ಪಷ್ಟೀಕರಣ ಸಹ ಕೇಳಲಾಗಿದ್ದು, ಪೂರಕವಾದ ಉತ್ತರ ಬಾರದೇ ಹೋದರೆ ತನಿಖೆ ಮುಂದುವರೆಯಲಿದೆ, ಒಂದು ಹಂತಕ್ಕೆ ಮುಟ್ಟುವರೆಗೆ ನಿಲ್ಲಿಸುವುದಿಲ್ಲ ಎಂದರು.

ಕಳೆದ ಕೆಲವು ದಿನಗಳ ಹಿಂದೆ ವಿಜಯಪುರ ಮಹಾನಗರ ಪಾಲಿಕೆ ಜಲ ಶುದ್ಧೀಕರಣ ಘಟಕದಲ್ಲಿ ಮಕ್ಕಳು ಬಿದ್ದು ಅಸುನೀಗಿದ್ದರೂ ಅದಕ್ಕೆ ಸೂಕ್ತ ತಂತಿಬೇಲಿ, ಪೂರಕವಾದ ಸುರಕ್ಷಿತ ಉಪಕರಣಗಳನ್ನು ಅಳವಡಿಸುವಂತೆ ನಿರ್ದೇಶನವನ್ನು ಕಳೆದ ಬಾರಿ ನೀಡಲಾಗಿತ್ತು. ಒಂದು ಹಂತದ ಕಾಮಗಾರಿ ಪೂರ್ಣಗೊಂಡಿದೆ.

ಇನ್ನೊಂದು ಹಂತದ ಕಾಮಗಾರಿ ಪೆಂಡಿಂಗ್ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಜೀವಕ್ಕಿಂತ ಹಣ ದೊಡ್ಡದೇ ಎಂದು ಕೇಳಿರುವೆ. ಹೀಗಾಗಿ ಪೂರಕ ರೂ.1 ಕೋಟಿ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಬರೆದಿರುವುದಾಗಿ ಹೇಳಿದ್ದು, ಈ ಅನುದಾನ ಬಿಡುಗಡೆಯಾದರೆ ಒಳ್ಳೆಯದು ಎಂದರು.

# ಧರಣಿ ನಿರತರ ಬಗ್ಗೆ ಅಧಿಕಾರಿಗಳ ನಿರ್ಲಕ್ಷ್ಯ: ಆಕ್ರೋಶ

• ಉದಯವಾಹಿನಿ ಪುತ್ತೂರು

ಕಳೆದ 4 ದಿನಗಳಿಂದ ಪುತ್ತೂರು ತಾಲ್ಲೂಕು ಆಡಳಿತ ಸೌಧದ ಮುಂದೆ ವೃದ್ಧ ದಂಪತಿಗಳು ಅಹೋರಾತ್ರಿ ಧರಣಿ ನಡೆಸುತ್ತಿದ್ದು, ಕನಿಷ್ಠ ಮಾನವೀಯ ದೃಷ್ಟಿಯಿಂದ ಈ ದಂಪತಿಗಳ ಸಮಸ್ಯೆಗೆ ಪರಿಹಾರ ನೀಡುವ ಕೆಲಸ ನಡೆಯಬೇಕಾಗಿದೆ. ಮೈ ಕೊರೆಯುವ ಚಳಿಯಲ್ಲಿ ಈ ದಂಪತಿಗಳು ಧರಣಿ ನಡೆಸುತ್ತಿದ್ದರೂ ಅಧಿಕಾರಿ ವರ್ಗ ಈ ಬಗ್ಗೆ ನಿರ್ಲಕ್ಷ್ಯ ಧೋರಣೆ ವ್ಯಕ್ತ ಪಡಿಸುತ್ತಿರುವುದು ಖಂಡನೀಯ ವಿಚಾರವಾಗಿದೆ.

ಶ್ರೀಮಂತರು ಎಕರೆಗಟ್ಟಲೆ ಸ್ಥಳವನ್ನು ಒತ್ತುವರಿ ಮಾಡಿಕೊಂಡಿದ್ದರೂ ತಲೆ ಕೆಡಿಸಿಕೊಳ್ಳದ ಅಧಿಕಾರಿಗಳು ಕೇವಲ 20 ಸೆಂಟ್ಸ್ ಸ್ಥಳವನ್ನು ಒತ್ತುವರಿ ಮಾಡಿ ಮನೆ ಕಟ್ಟಿರುವುದನ್ನು ನೆಲಸಮ ಮಾಡಿದ್ದಾರೆ. ಅದನ್ನೆಲ್ಲಾ ಪಕ್ಕಕ್ಕಿಟ್ಟು ಪ್ರಸ್ತುತ ವೃದ್ಧ ದಂಪತಿಗಳ ಆರೋಗ್ಯದ ಹಿನ್ನಲೆಯಲ್ಲಿ ಈ ಸಮಸ್ಯೆಗೆ ತಕ್ಷಣ ಪರಿಹಾರ ನೀಡಬೇಕು ಎಂದು ದಲಿತ ಸೇವಾಸಮಿತಿ


ಉದಯವಾಹಿನಿ ಚಿತ್ರ

ಜಿಲ್ಲಾ ಸ್ಥಾಪಕಾಧ್ಯಕ್ಷ ಸೇಸಪ್ಪ ಬೆದ್ರಕ್ಕಾಡು ಹೇಳಿದರು. ಧರಣಿ ನಿರತ ವೃದ್ಧ ದಂಪತಿಗಳಾದ ಕೌಕ್ರಾಡಿಯ ಕಾಪಿನಬಾಗಿಲು ನಿವಾಸಿ ರಾಧಮ್ಮ ಹಾಗೂ ಮುತ್ತುಸ್ವಾಮಿ ಅವರನ್ನು ಭೇಟಿಯಾದ ಅವರು ದಕ ಜಿಲ್ಲೆಯಲ್ಲಿ ನಡೆಯುತ್ತಿರುವ ಈ ವೃದ್ಧ ದಂಪತಿಗಳ ಧರಣಿ ಅತ್ಯಂತ ನೋವು ತರುವ ವಿಚಾರವಾಗಿದೆ. ಸರ್ಕಾರಕ್ಕೆ ಈ ದಂಪತಿಗಳಿಗೆ 20 ಸೆಂಟ್ಸ್ ಸ್ಥಳ ಕೊಡುವುದು ದೊಡ್ಡ ವಿಷಯವಲ್ಲ. ಹಾಗಿದ್ದರೂ ಯಾಕೆ ಕೊಡುತ್ತಿಲ್ಲ ಎನ್ನುವುದು ನಿಗೂಢ ಪ್ರಶ್ನೆಯಾಗಿದೆ.

# ಶಾಲೆಗಳ ಉಳಿಸಿ, ಬೆಳೆಸಿ: ರಾಧನಾಯಕ್

• ಉದಯವಾಹಿನಿ ಕಾರ್ಕಳ

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಹಾಗೂ ಉಚಿತ ಶಿಕ್ಷಣದ ಮೂಲಕ ಬದುಕಿಗೆ ಬಲವಾದ ವೇದಿಕೆ ಕಲ್ಪಿಸಬೇಕು ಎಂಬ ಕನಸು ನನ್ನದಾಗಿತ್ತು ಎಂದು ತಾಲ್ಲೂಕಿನ ಎಣ್ಣೆಹೊಳೆ ರಾಧಾ ನಾಯಕ್ ಸರ್ಕಾರಿ ಪ್ರೌಢಶಾಲೆಯ ಗೌರವಾಧ್ಯಕ್ಷ ದಯಾನಾಯಕ್ ಹೇಳಿದರು.

ತಾಲ್ಲೂಕಿನ ಎಣ್ಣೆಹೊಳೆ ಅಮೃತನಗರದಲ್ಲಿರುವ ರಾಧನಾಯಕ್ ಸರ್ಕಾರಿ ಪ್ರೌಢಶಾಲೆಯ 25ನೇ ವರ್ಷದ ಬೆಳ್ಳಿ ಹಬ್ಬದ ಸಂಭ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ ಒಂದು ಕಾಲದಲ್ಲಿ ಊರಿನ ಜನರು ಹಾರೆ, ಪಿಕಾಸಿ ಹಿಡಿದು ದುಡಿಮೆ ಮಾಡಲು ಬರುತ್ತಿದ್ದರು. ಆ ಜನರ ಶ್ರಮವೇ ನನ್ನ ಬದುಕಿಗೆ ಪ್ರೇರಣೆಯಾಯಿತು. ಗ್ರಾಮೀಣ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಆಶಯ ನನ್ನಲ್ಲಿ ಸದಾ ಇತ್ತು.

ಶಿಕ್ಷಣವನ್ನು ಖಾಸಗೀಕರಣಗೊಳಿಸದೆ, ಸರ್ಕಾರಿ ಶಾಲೆಗಳ ಮೂಲಕವೇ ಸಮಾನ ಅವಕಾಶ ಕಲ್ಪಿಸಬೇಕು. ಸರ್ಕಾರವು ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದರು. ಶಾಸಕ ವಿ.ಸುನಿಲ್ ಕುಮಾರ್ ಮಾತನಾಡಿ, ಭವಿಷ್ಯವನ್ನು ರೂಪಿಸುವ ವ್ಯಕ್ತಿಯೇ ಸಮಾಜಕ್ಕೆ ಮಾದರಿ. ದಯಾನಾಯಕ್ ಅವರು ಸಾರ್ವಜನಿಕ ಅಭಿನಂದನೆಗೆ ಸಂಪೂರ್ಣ ಅರ್ಹರು.


ಉದಯವಾಹಿನಿ ಚಿತ್ರ

ಉಚಿತ ಶಿಕ್ಷಣ ನೀಡುವ ಮೂಲಕ ಅನೇಕ ಮಕ್ಕಳ ಬದುಕಿಗೆ ಬೆಳಕು ನೀಡಿದ್ದಾರೆ. ಅವರ ನಿಷ್ಠೆ, ಪ್ರಾಮಾಣಿಕತೆ ಮತ್ತು ಗಟ್ಟಿತನದ ಮೂಲಕ ದೇಶದಾದ್ಯಂತ ಪರಿಚಿತರಾಗಿದ್ದಾರೆ.

ಒಂದು ಕಾಲಘಟ್ಟದಲ್ಲಿ ಭೂಗತ ಜಗತ್ತು ದೇಶಕ್ಕೆ ದೊಡ್ಡ ಸವಾಲಾಗಿದ್ದ ಸಂದರ್ಭದಲ್ಲೂ, ಸಕಾರಾತ್ಮಕ ಸಮಾಜ ನಿರ್ಮಾಣದಲ್ಲಿ ದಯಾನಾಯಕ್ ಅವರ ಪಾತ್ರ ಮಹತ್ವದಾಗಿದೆ. ಮುಂಬೈನಲ್ಲಿ ಉದ್ಯೋಗದಲ್ಲಿದ್ದರೂ ಸ್ವಗ್ರಾಮವನ್ನು ಮರೆಯದೆ, ಶಾಲೆ ಕಟ್ಟಿಸಿ ಸರ್ಕಾರ ಮಾಡಬೇಕಾದ ಕೆಲಸವನ್ನು ತಾವೇ ಮಾಡಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ರಾಜ್ಯದಲ್ಲಿ ಹಲವೆಡೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಹಂತಕ್ಕೆ ಬಂದಿವೆ. ಆದರೆ ಇಡೀ ರಾಜ್ಯದಲ್ಲಿ ಇಂತಹ ಸುಂದರ ಹಾಗೂ ಮಾದರಿ ಸರ್ಕಾರಿ ಶಾಲೆ ಅಪರೂಪ. ಸರ್ಕಾರಿ ಶಾಲೆಗಳನ್ನು ಮಾದರಿ ಶಾಲೆಗಳಾಗಿ ರೂಪಿಸುವ ಗುರಿ ನಮ್ಮದು ಎಂದರು.

# ಸದೃಢ ಆರೋಗ್ಯಕ್ಕೆ ನಿತ್ಯ ವ್ಯಾಯಾಮ ಮಾಡಿ: ರಹೀಂಖಾನ್

• ಉದಯವಾಹಿನಿ ಬೀದರ

ಸದೃಢ ಆರೋಗ್ಯಕ್ಕೆ ಎಲ್ಲರೂ ನಿತ್ಯ ವ್ಯಾಯಾಮ ಮಾಡಬೇಕು ಎಂದು ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್ ಹೇಳಿದರು. ನಗರದ ಕೆ.ಇ.ಬಿ. ಕಚೇರಿ ಸಮೀಪ ಈಚೆಗೆ ನಡೆದ ಜಾರ್ಜ್ ಫಿಟ್ನೆಸ್ ಜಿಮ್ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ವ್ಯಾಯಾಮ ಮಾಡುವುದರಿಂದ ರಕ್ತದೊತ್ತಡ, ಮಧುಮೇಹ ಮತ್ತಿತರ ರೋಗಗಳು ದೂರವಾಗುತ್ತವೆ ಎಂದು ತಿಳಿಸಿದರು.

ಮನುಷ್ಯನಲ್ಲಿ ಸಂಪತ್ತು ಎಷ್ಟಿದ್ದರೂ ಆರೋಗ್ಯ ಇಲ್ಲದಿದ್ದರೆ ಅದು ವ್ಯರ್ಥ. ಹೀಗಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಜಿಮ್‌ಗಳಲ್ಲಿ ನಿತ್ಯ ಕನಿಷ್ಠ ತಾಸಾದರೂ ವ್ಯಾಯಾಮ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು. ಯುವ ಜನರಿಗೆ ಆರೋಗ್ಯದ ಗುಟ್ಟು ಹೇಳಿಕೊಡುತ್ತಿರುವ ವಿಕ್ಟೋರಿಯಾ ಜಾರ್ಜ್ ಅವರು 10 ವರ್ಷಗಳಿಂದ ಜಿಮ್ ನಡೆಸುತ್ತಿದ್ದಾರೆ. ಇದೀಗ ಹೈಟೆಕ್ ಜಿಮ್ ಆರಂಭಿಸಿದ್ದಾರೆ. ಯುವಜನರು ಇದರ ಲಾಭ ಪಡೆಯಬೇಕು ಎಂದು ಸಲಹೆ ಮಾಡಿದರು. ಜಾರ್ಜ್ ಅವರು ಜನರಿಗೆ ಆರೋಗ್ಯದ ಮಹತ್ವ ಮನವರಿಕೆ ಮಾಡಿಕೊಡುತ್ತಿದ್ದಾರೆ. ಫಿಟ್ನೆಸ್ ಜಿಮ್


ಉದಯವಾಹಿನಿ ಚಿತ್ರ

**ಪ್ರಸ್ತುತ ಎಲ್ಲರಿಗೂ ಒತ್ತಡ ಹೆಚ್ಚಾಗಿದೆ. ಜಿಮ್‌ಗಳಲ್ಲಿ ವ್ಯಾಯಾಮ ಮಾಡುವ ಮೂಲಕ ಅದನ್ನು ನಿವಾರಿಸಿಕೊಳ್ಳಬಹುದು**
**-ಸಾಗರ್ ಖಂಡ್ರೆ, ಸಂಸದ**

ಮೂಲಕ ಉತ್ತಮ ಆರೋಗ್ಯ ಕಾಯ್ದುಕೊಳ್ಳಲು ನೆರವಾಗುತ್ತಿದ್ದಾರೆ. ಅವರ ಜನಪರ ಕಾಳಜಿ ಶ್ಲಾಘನೀಯ ಎಂದು ಹೇಳಿದರು. ಜಾರ್ಜ್ ಫಿಟ್ನೆಸ್ ಜಿಮ್ ಮಾಲೀಕರಾದ ವಿಕ್ಟೋರಿಯಾ ಜಾರ್ಜ್ ಮಾತನಾಡಿ, ಸ್ವಸ್ಥ ಸಮಾಜ ನಿರ್ಮಾಣ ಕೊಡುಗೆ ನೀಡಲು ಜಿಮ್ ಫಿಟ್ನೆಸ್ ಸೆಂಟರ್ ಪ್ರಾರಂಭಿಸಿದ್ದೇನೆ ತಿಳಿಸಿದರು. ಜಿಮ್‌ನಲ್ಲಿ ಪ್ರತಿ ದಿನ ಯೋಗ ಮಾಡುವುದರಿಂದ ಸ್ನಾಯುಗಳು ಬಲಗೊಳ್ಳುತ್ತದೆ. ಕೊಬ್ಬು ಕರಗಿ ತೂಕ ನಿಯಂತ್ರಣದಲ್ಲಿ ಇರುತ್ತದೆ. ರಕ್ತ ಸಂಚಾರದಲ್ಲಿ ಸುಧಾರಣೆಯಾಗಿ, ಹೃದಯ ರೋಗದ ಅಪಾಯ ಕಡಿಮೆಯಾಗುತ್ತದೆ ಎಂದು ತಿಳಿಸಿದರು. ತಾಳ್ಮೆ ವೃದ್ಧಿಸುತ್ತದೆ. ದಿನವಿಡೀ ಮನಸ್ಸು ಉಲ್ಲಸಿತವಾಗಿರುತ್ತದೆ. ಆತ್ಮವಿಶ್ವಾಸ ಇಮ್ಮಡಿಗೊಳ್ಳುತ್ತದೆ. ರಾತ್ರಿ ನೆಮ್ಮದಿಯ ನಿದ್ರೆ ಬರುತ್ತದೆ. ರೋಗ ನಿರೋಧಕ ಶಕ್ತಿ ವೃದ್ಧಿಸುತ್ತದೆ ಎಂದು ಹೇಳಿದರು. ಸದ್ಯ ಶೇ 10 ರಷ್ಟು ಮಹಿಳೆಯರು ಮಾತ್ರ ಜಿಮ್ ಹಾಗೂ ಫಿಟ್ನೆಸ್ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ ಎಂದು ಫಿಟ್ನೆಸ್ ಕೋಚ್ ಅನುಶಾ ಹೇಳಿದರು. ಫಿಟ್ನೆಸ್ ಅಂದರೆ ಕೇವಲ ವಸ್ತುವಲ್ಲ. ಶಿಸ್ತು, ಸಮರ್ಪಣೆ ಮತ್ತು ಆರೋಗ್ಯಕರ ಜೀವನಶೈಲಿ ಎಂದು ಸೆಲೆಬ್ರಿಟಿ ಟ್ರೈನರ್ ರಾಖಿ ಅಭಿಪ್ರಾಯಪಟ್ಟರು. ಬೀದರ್ ಮಹಾನಗರ ಪಾಲಿಕೆಯ ಅಧ್ಯಕ್ಷ ಮುಹಮ್ಮದ್ ಗೌಸ್, ರಾಜ್ಯ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಸಂಜಯ್ ಜಾಗೀರದಾರ್ ಇದ್ದರು.

# ಬೀದಿ ನಾಯಿಗಳ ಉಪಟಳಕ್ಕೆ ಬೆಚ್ಚಿ ಬಿದ್ದ ಜನ

### ಬೆಳಗಿನಜಾವ ಮತ್ತು ಕತ್ತಲಾದರೆ ಶಾಲಾ ಮಕ್ಕಳು, ಮಹಿಳೆಯರು ಒಬ್ಬಂಟಿಯಾಗಿ ಓಡಾಡುವುದೇ ಕಷ್ಟ


ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ತಾಪುರ

ತೊಗರಿ ಕಣಜ ಎಂದೇ ಖ್ಯಾತಿ ಪಡೆದ ತಾಲ್ಲೂಕಿನಲ್ಲಿ ಬೀದಿ ನಾಯಿಗಳ ಉಪಟಳ ಹೆಚ್ಚಾಗಿದೆ. ಸಾಕು ಮತ್ತು ಬೀದಿ ನಾಯಿಗಳು ನಡೆಸಿದ ದಾಳಿಯಿಂದಾಗಿ ಜನರು ಭಯಭೀತಿಯಿಂದ ಓಡಾಡುವಂತಹ ಪರಿಸ್ಥಿತಿ ಎದುರಾಗಿದೆ.

**ಮಕ್ಕಳ ಮೇಲೆ ನಾಯಿ ದಾಳಿ**

ಕಳೆದ ಕೆಲ ದಿನಗಳ ಹಿಂದೆ ಪಟ್ಟಣದ ಯರಗಲ್ ರಸ್ತೆಯ ಪುರಸಭೆ ಘನತ್ಯಾಜ್ಯ ವಿಲೇವಾರಿ ಘಟಕದ ಹತ್ತಿರ ಮೇಯುತ್ತಿದ್ದ ಕುರಿಗಳ ಮೇಲೆ ನಾಯಿಗಳು ದಾಳಿ ಮಾಡಿದ್ದರಿಂದ 25 ಕುರಿಗಳು ಸಾವನ್ನಪ್ಪಿದ ಘಟನೆ ನಡೆದಿದ್ದು ಕುರಿಗಾಯಿಗರನ್ನು ದಿಗ್ಭ್ರಾಂತಗೊಳಿಸಿದೆ. ಪಟ್ಟಣದ ಗೊಬ್ಬೂರ್ ಗಲ್ಲಿ, ತಳಗೇರಿ, ವೆಂಕಟೇಶ್ವರ ನಗರ, ಅಂಬೇಡ್ಕರ್ ವೃತ್ತ, ಬಸ್ ನಿಲ್ದಾಣ ರಸ್ತೆ, ಲಾಡ್ಜಿಂಗ್ ಕ್ರಾಸ್, ಭುವನೇಶ್ವರಿ ವೃತ್ತ, ಜನತಾ ವೃತ್ತ, ಚಿತ್ತಾವಲಿ ವೃತ್ತ ಸೇರಿ ನಾನಾ ಕಡೆ ನಾಯಿಗಳ ಹಾವಳಿ ಹೆಚ್ಚಾಗಿದೆ. ಇಷ್ಟಾದರೂ ಇವುಗಳ ಕಡಿವಾಣಕ್ಕೆ ಪುರಸಭೆ ಕ್ರಮಕ್ಕೆ ಮುಂದಾಗದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಪ್ರಮುಖ ಕಾರಣವಾಗಿದೆ.

ಮಹಿಳೆಯರ, ಮಕ್ಕಳ, ವೃದ್ಧರ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿ ತೀವ್ರ ಗಾಯಗೊಳಿಸಿದ ಉದಾಹರಣೆಗಳು ಸಾಕಷ್ಟಿವೆ. ಎಲ್ಲೆಡೆ ನಾಯಿಗಳ ಹಿಂಡು ದಾಳಿ ನಡೆಸುತ್ತಿವೆ. ಹಲವೆಡೆ ಮಕ್ಕಳ ಮೇಲೆ

**ಬೀದಿ ನಾಯಿಗಳ ಹಾವಳಿ ತಡೆಗಟ್ಟಬೇಕೆಂದು ಪುರಸಭೆ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಪತ್ರ ಸಲ್ಲಿಸದರು ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ನಾಯಿಗಳ ಹಾವಳಿ ತಡೆಗಟ್ಟಬೇಕು. ಒಂದು ವೇಳೆ ನಾಯಿಗಳ ಹಾವಳಿ ತಡೆಗಟ್ಟದಿದ್ದರೇ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು. -ನರಹರಿ ಕುಲಕರ್ಣಿ**
**ಕರವೇ (ಪ್ರವೀಣ ಶೆಟ್ಟಿ ಬಣ) ತಾಲ್ಲೂಕು ಅಧ್ಯಕ್ಷ.**

**ಕೈ, ಕನ್ನೆಗೆ ಕಚ್ಚಿದ ನಾಯಿಗಳು**

**ಕಳೆದ ಅನೇಕ ತಿಂಗಳುಗಳಿಂದ ಬಾಲಕರ ಮೇಲೆ ನಾಯಿಗಳು ದಾಳಿ ನಡೆಸಿವೆ. ಕೈ ಕೆನ್ನೆಗೆ ಕಚ್ಚಿ ಗಾಯಗೊಳಿಸಿವೆ. ಹಣ್ಣಿನ ವ್ಯಾಪಾರಿ ಬಾಬು ಬಂಡಿ ಅವರ ಮೇಲೆ ನಾಯಿ ಮೂರಾಲ್ಕು ಬಾರಿ ಕಚ್ಚಿದೆ. ಹೀಗಾಗಿ ಎಲ್ಲೆಡೆ ಭಯದ ಆತಂಕ ಸೃಷ್ಟಿಸಿದೆ.**

ನಾಯಿ ದಾಳಿ ಮಾಡಿದ ಪ್ರಕರಣಗಳು ನಡೆದಿವೆ. ಇವುಗಳಿಗೆ ಕಡಿವಾಣ ಹಾಕದಿದ್ದರೆ ಪರಿಸ್ಥಿತಿ ಇನ್ನೂ ಬಿಗಡಾಯಿಸುವ ಆತಂಕ ಹೆಚ್ಚಾಗಿದೆ. ಕೆಲವೊಮ್ಮೆ ರಸ್ತೆ ಮಧ್ಯೆಯೇ ನಾಯಿಗಳ ಕಾಳಗದಿಂದಾಗಿ ಜನ ಬೆಚ್ಚಿಬಿದ್ದು ಜೀವ ರಕ್ಷಣೆಗೆ ಪರದಾಡಿದ ಪ್ರಸಂಗವೂ ನಡೆದಿದೆ ಎನ್ನುತ್ತಾರೆ ಸಾರ್ವಜನಿಕರು. ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಬೆಳಗಿನಜಾವ ಮತ್ತು ಕತ್ತಲಾದರೆ ಶಾಲಾ ಮಕ್ಕಳು, ಮಹಿಳೆಯರು ಒಬ್ಬಂಟಿಯಾಗಿ ಓಡಾಡುವುದೇ ಕಷ್ಟವಾಗಿದೆ. ಎಲ್ಲೆಡೆ ನಾಯಿಗಳ ಹಿಂಡು ಮಕ್ಕಳ ಮೇಲೆ ದಾಳಿ ನಡೆಸಿದ ಪ್ರಕರಣಗಳು ನಡೆದಿದ್ದು ಕಡಿವಾಣ ಹಾಕದಿದ್ದರೆ ಪರಿಸ್ಥಿತಿ ಇನ್ನೂ ಬಿಗಡಾಯಿಸುವ ಆತಂಕ ಹೆಚ್ಚಾಗಿದೆ.

**ನಾಸರ್ ಜಂಗ್, ಗೊಬ್ಬುರ್ ಗಲ್ಲಿ ಸೇರಿ ಹಲವು ಬಡಾವಣೆಗಳಲ್ಲಿ ಸಾಕು ಮತ್ತು ಬೀದಿ ನಾಯಿಗಳ ಆಟಹಾಸ ಹೆಚ್ಚಾಗಿದ್ದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಪುರಸಭೆಯವರು ತಕ್ಷಣ ನಾಯಿಗಳ ಹಾವಳಿ ತಡೆಗೆ ಮುಂದಾಗಬೇಕು. -ವಿಜಯಕುಮಾರ್**

# ಸಾವಯವ ಕೃಷಿಯಲ್ಲಿ ಯಶಸ್ಸು ಕಂಡ ರೈತ

• ಉದಯವಾಹಿನಿ ಶಿರಹಟ್ಟಿ

ಅಚ್ಚುಕಟ್ಟಾಗಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ರೇಷ್ಮೆ ಕೃಷಿಯಲ್ಲಿ ಶ್ರಮವಹಿಸಿ ದುಡಿಯುತ್ತಿರುವ ಖಾನಾಪುರ ಗ್ರಾಮದ ರೈತ ಮೈಲಾರಪ್ಪ ಕರಮುಡಿ ಹೆಚ್ಚಿನ ಲಾಭಾಂಶ ಪಡೆಯುವುದರೊಂದಿಗೆ ತಾಲ್ಲೂಕಿನ ಇತರೆ ರೈತರಿಗೆ ಮಾದರಿಯಾಗಿದ್ದಾರೆ.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾರ್ಡ್ ನಂ.1ರ ಖಾನಾಪುರದ ರೈತ ಮೈಲಾರಪ್ಪ ಕರಮುಡಿ ಮೂರು ಎಕರೆ ಜಮೀನಿನಲ್ಲಿ ರೇಷ್ಮೆ ಕೃಷಿಯೊಂದಿಗೆ ನೆಮ್ಮದಿ ಕಂಡುಕೊಂಡಿದ್ದಾರೆ. ಉಳಿದ ನಾಲ್ಕು ಎಕರೆ ಜಮೀನಿನಲ್ಲಿ ಒಣ ಬೇಸಾಯ ಮಾಡುತ್ತಿದ್ದಾರೆ. ತೋಟದಲ್ಲಿ ಕೊಳವೆಬಾವಿ ಕೊರೆಸಿ, ಹನಿ ನೀರಾವರಿ ಪದ್ಧತಿ ಅಳವಡಿಸಿದ್ದಾರೆ. ತಂದೆ ಲಿಂಗರಾಜ, ಸಹೋದರಿ ಹಾಗೂ ಕುಟುಂಬದೊಂದಿಗೆ ಕೃಷಿಯಲ್ಲಿ ಉತ್ತಮ ಇಳುವರಿ ಪಡೆಯುತ್ತಿದ್ದಾರೆ.

ರೇಷ್ಮೆ ಬೆಳೆಯನ್ನು ಮುಖ್ಯ ಬೆಳೆಯನ್ನಾಗಿಸಿಕೊಂಡ ರೈತ ಮೈಲಾರಪ್ಪ ಇಡೀ ವರ್ಷ ರೇಷ್ಮೆ ಬೆಳೆ ಬರುವ ಹಾಗೆ ಯೋಜನೆ ರೂಪಿಸಿ 3 ಎಕರೆಯಲ್ಲಿ ಪ್ರತ್ಯೇಕ ಫ್ಲಾಟ್ ಮಾಡಿಕೊಂಡಿದ್ದಾರೆ. 1.5 ಎಕರೆಗೊಂದು ಫ್ಲಾಟ್ ಮಾಡಿ ರೇಷ್ಮೆ ಸಸಿಗಳನ್ನು ನಾಟಿ ಮಾಡಿರುವುದರಿಂದ ವರ್ಷ ಪೂರ್ತಿ ತೋಟದಲ್ಲಿ ರೇಷ್ಮೆ ಗೂಡುಗಳ ಉತ್ಪಾದನೆ ಇರುತ್ತದೆ. ರೇಷ್ಮೆ ಬೆಳೆಗೆ ವರ್ಷಕ್ಕೆ ಸುಮಾರು 20 ಗಾಡಿ ಸಗಣಿ ಗೊಬ್ಬರ ಹಾಕುತ್ತಿದ್ದಾರೆ. ಸುಮಾರು 5 ವರ್ಷಗಳಿಂದ ರೇಷ್ಮೆ ಕೃಷಿ ಮಾಡಿಕೊಂಡು ಬರುತ್ತಿರುವ ಅವರು ಪ್ರತಿ ಬಾರಿ 1-2 ಕ್ವಿಂಟಲ್ ಇಳುವರಿ ಪಡೆಯುತ್ತಾರೆ. ರಾಮನಗರ ಮಾರುಕಟ್ಟೆಗೆ ಗೂಡುಗಳನ್ನು


ಉದಯವಾಹಿನಿ ಚಿತ್ರ

**ವರ್ಷಕ್ಕೆ ಲಕ್ಷಾಂತರ ಆದಾಯ**

**ಸದ್ಯ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ರೇಷ್ಮೆ ಗೂಡಿಗೆ ರೂ. 700ರಿಂದ ರೂ.800 ದರ ಇದೆ. ಒಂದು ವರ್ಷದಲ್ಲಿ 8ರಿಂದ 10 ಬೆಳೆಗಳನ್ನು ತೆಗೆಯುವ ಮೈಲಾರಪ್ಪ ವರ್ಷಕ್ಕೆ ರೂ.6 ಲಕ್ಷದಿಂದ ರೂ.7 ಲಕ್ಷ ಆದಾಯ ಗಳಿಸುತ್ತಿದ್ದಾರೆ. ಅದರಲ್ಲಿ ವರ್ಷದಲ್ಲಿ ರೂ.2 ಲಕ್ಷ ಖರ್ಚು ತೆಗೆದು ರೂ.5 ಲಕ್ಷ ಲಾಭ ಪಡೆಯುತ್ತಿದ್ದಾರೆ. ಇದರ ಜೊತೆಗೆ ತೋಟದಲ್ಲಿನ ಇತರೆ ಹಾಗೂ ಒಣ ಬೇಸಾಯದ ಜಮೀನಿನಲ್ಲಿ ಬೆಳೆಯಲಾದ ಗೋವಿನಜೋಳ, ಹೆಸರು, ಶೇಂಗಾ ಸೇರಿದಂತೆ ಇತರೆ ಬೆಳೆಗಳಿಂದಲೂ ಆದಾಯ ಪಡೆಯುತ್ತಿದ್ದಾರೆ.**

ಮಾರಾಟ ಮಾಡಿ ಉತ್ತಮ ಲಾಭ ಪಡೆಯುತ್ತಿದ್ದಾರೆ.

**ರೇಷ್ಮೆ ಹುಳುವಿನ ನಿರ್ವಹಣೆ:** ಹಿಪ್ಪುನೇರಳೆ ಬೆಳೆಗೆ ಒತ್ತು ನೀಡುತ್ತಿರುವ ಅವರು ಹೆಚ್ಚು ಹಸಿರೆಲೆ ಗೊಬ್ಬರ, ತಿಪ್ಪೇಗೊಬ್ಬರ ಬಳಸಿ ತೋಟದ ನಿರ್ವಹಣೆ ಮಾಡುತ್ತಿದ್ದಾರೆ.

## ಮಿನಿ ನ್ಯೂಸ್

### ಜನರ ಕೈಯಲ್ಲಿದೆ ಗ್ರಾಮದ ಅಭಿವೃದ್ಧಿ: ಇಒ

• ಉದಯವಾಹಿನಿ ಶಿರಸಿ

ಗ್ರಾಮದ ಅಭಿವೃದ್ಧಿಯು ಜನರ ಕೈಯಲ್ಲೇ ಇದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡರೆ ಕೂಲಿಯ ಜತೆಗೆ ಗ್ರಾಮದ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದು ತಾಲ್ಲೂಕು ಪಂಚಾಯಿತಿ ಇಒ ಚನ್ನಬಸಪ್ಪ ಹಾವಣಗಿ ಹೇಳಿದರು. ಉಂಚಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲಿ ಗ್ರಾಮದ ಸರ್ವೆ ನಂಬರ್ 49ರಲ್ಲಿ ನರೇಗಾ ಯೋಜನೆಯಡಿ ಅಂದಾಜು 73 ಲಕ್ಷ ವೆಚ್ಚದ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಕೆರೆಗಳ ಅಭಿವೃದ್ಧಿಯಿಂದ ಅಂತರ್ಜಲ ಮಟ್ಟ ಹೆಚ್ಚಳವಾಗುವುದು ಮಾತ್ರವಲ್ಲದೆ, ಕೊಳವೆಬಾವಿ ಮರುಪೂರ್ಣ, ಕಾಡು ಪ್ರಾಣಿಗಳಿಗೆ ಕುಡಿಯುವ ನೀರಿನ ಲಭ್ಯತೆ ಹಾಗೂ ಸಸ್ಯ ಸಂಪನ್ಮೂಲಗಳ ವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಎನ್‌ಎಂಎಂಎಸ್ ಹಾಜರಾತಿ ಕಡ್ಡಾಯವಾಗಿದ್ದು, ನಿಯಮಾನುಸಾರ ಎರಡು ಫೋಟೊಗಳನ್ನು ಸಲ್ಲಿಸಿದರೆ ಮಾತ್ರ ಕೂಲಿ ಪಾವತಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಹಾಜರಾತಿ ಪ್ರಕ್ರಿಯೆಯನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಇದೇ ವೇಳೆ ಕೂಲಿಕಾರರೊಂದಿಗೆ ಕೇಕ್ ಕತ್ತರಿಸಿ ಹೊಸ ವರ್ಷವನ್ನು ವಿಭಿನ್ನವಾಗಿ ಆಚರಿಸಿದರು.

### ಯುವ ಸಮೂಹಕ್ಕೆ ಹೆಚ್ಚಿನ ಅವಕಾಶ ಲಭ್ಯ

• ಉದಯವಾಹಿನಿ ಬ್ರಹ್ಮಾವರ

ಇಂದಿನ ಯುವ ಸಮುದಾಯಕ್ಕೆ ತುಂಬಾ ಅವಕಾಶಗಳು ಮತ್ತು ಸೌಲಭ್ಯಗಳಿವೆ. ಅವುಗಳನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳಿ ಎಂದು ಬೆಂಗಳೂರಿನ ಪೂರ್ಣಪ್ರಜ್ಞ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಆನಂದ ಹೇಳಿದರು.

ಬ್ರಹ್ಮಾವರ ಜಿ.ಎಂ.ವಿದ್ಯಾನಿಕೇತನ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ಮಾದರಿ, ಕಲೆ ಹಾಗೂ ಕರಕುಶಲ ವಸ್ತುಗಳ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು. ಇಂದಿನ ಪೋಷಕರು ವಿಜ್ಞಾನ ವಿಷಯಕ್ಕೆ ತುಂಬಾ ಮಹತ್ವ ನೀಡುತ್ತಾರೆ. ವಿದ್ಯಾರ್ಥಿಗಳು ಕ್ರಿಯಾತ್ಮಕ ಯೋಜನೆ, ಸಾಮರ್ಥ್ಯದ ಕಡೆಗೆ ಗಮನ ನೀಡಬೇಕು. ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಸಲಹೆ ನೀಡಿರು. ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಕಾಶ್ಚಂದ್ರ ಶೆಟ್ಟಿ ಮಾತನಾಡಿ, ಚಿತ್ರಕಲೆ ಮತ್ತು ವಿಜ್ಞಾನ ಮಾದರಿ ತಯಾರಿಕೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದ ಶಿಕ್ಷಕರ ಶ್ರಮ ಅಭಿನಂದನೀಯ ಎಂದರು. ಸಂಸ್ಥೆಯ ಪ್ರಾಂಶುಪಾಲ ಜಾರ್ಜ್ ಕುರಿಯನ್ ಮಾತನಾಡಿ, ವಿದ್ಯಾರ್ಥಿಗಳಿಗೆ ಚಿತ್ರಕಲೆ ಮತ್ತು ವಿಜ್ಞಾನದ ಮಾದರಿಯ ತಯಾರಿಕೆ ಸಂತೋಷವನ್ನು ಉಂಟು ಮಾಡುತ್ತದೆ. ವಿದ್ಯಾರ್ಥಿಗಳು ಅಲ್ಬರ್ಟ್ ಐನ್ ಸ್ಟೀನ್ ಅವರ ಕಲ್ಪನೆ, ನ್ಯೂಟನ್‌ನಲ್ಲಿರುವ ಪ್ರಶ್ನಿಸುವ ಮನೋಭಾವ, ರವಿವರ್ಮರ ಚಿತ್ರಕಲೆ, ಅಬ್ದುಲ್ ಕಲಾಂ ಅವರಲ್ಲಿದ್ದ ಕನಸು ಕಾಣುವ ಗುಣಗಳನ್ನು ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು.

### ಎಡದಂಡೆ ನಾಲೆಗೆ ಜ.3ರಿಂದ, ಬಲದಂಡೆ ನಾಲೆಗೆ ಜ.8ರಿಂದ ನೀರು ಹರಿವು

• ಉದಯವಾಹಿನಿ ಶಿವಮೊಗ್ಗ

ಭದ್ರಾ ಜಲಾಶಯದಿಂದ ಎಡದಂಡೆ ನಾಲೆಗೆ ಜ.3ರಿಂದ ಹಾಗೂ ಬಲದಂಡೆ ನಾಲೆಗೆ ಜ.8ರಿಂದ ನೀರು ಹರಿಸಲು ಶುಕ್ರವಾರ ಇಲ್ಲಿ ನಡೆದ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆ ತೀರ್ಮಾನ ಕೈಗೊಂಡಿತು. ಇಲ್ಲಿನ ಮಲವಗೊಪ್ಪದ ಕಾಡಾ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಐಸಿಸಿ ಅಧ್ಯಕ್ಷರೂ ಆದ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಈ ತೀರ್ಮಾನ ಪ್ರಕಟಿಸಿದರು.

ನಾಲೆಗಳಿಗೆ ನೀರು ಹರಿವು ನಿಲ್ಲಿಸಿ ಈಗಾಗಲೇ 42 ದಿನಗಳಾಗಿವೆ. ಇದರಿಂದ ತೋಟದ ಬೆಳೆಗಳಿಗೆ ತೊಂದರೆಯಾಗಿದೆ. ಹೀಗಾಗಿ ತಕ್ಷಣ ನಾಲೆಗಳಿಗೆ ನೀರು ಹರಿಸಿ ಎಂದು ಸಭೆಯಲ್ಲಿ ರಾಜ್ಯ ರೈತ ಸಂಘ, ಹಸಿರು ಸೇನೆ ಅಧ್ಯಕ್ಷ ಎಚ್.ಆರ್.ಬಸವರಾಜಪ್ಪ ಮನವಿ ಮಾಡಿದರು. ರೈತ ಮುಖಂಡ ತೇಜಸ್ವಿ ಪಟೇಲ್ ಮಾತನಾಡಿ, ಜನವರಿ 10ರಿಂದಲೇ ಬಲದಂಡೆ ಕಾಲುವೆಗೆ ನೀರು ಹರಿಸಿ ದಾವಣಗೆರೆ ಭಾಗದ ರೈತರ ಹಿತ ಕಾಯುವಂತೆ ಮನವಿ ಮಾಡಿದರು. ರೈತ ಮುಖಂಡ ರಘುನಾಥ್ ಮಾತನಾಡಿ, ಎಡದಂಡೆ ನಾಲೆ ಭಾಗದಲ್ಲಿ ಈಗ ಭತ್ತದ ಬದಲಿಗೆ ಅಡಿಕೆ ಬೆಳೆ ಪ್ರಾಧಾನ್ಯತೆ ಪಡೆದಿದೆ. ಹೀಗಾಗಿ 120 ದಿನಗಳ ಕಾಲಮಿತಿ ತೆಗೆದುಹಾಕಿ ಮೇ 30ರವರೆಗೂ ನೀರು ಹರಿಸುವಂತೆ ಹಾಗೂ ತಕ್ಷಣ ನೀರು ಬಿಡುವಂತೆ ಕೋರಿದರು. ಹರಪನಹಳ್ಳಿ ಭಾಗದ ಕೊನೆಯ ಭಾಗದ ರೈತರಿಗೆ ತುರ್ತಾಗಿ ನೀರಿನ ಅಗತ್ಯ ಇದ್ದು, ಜ.8ರಿಂದಲೇ ನೀರು ಹರಿಸುವಂತೆ, ನಾಲೆ ಆಧುನೀಕರಣಗೊಳಿಸಿ ಕೊನೆಯ ಭಾಗದವರೆಗೂ ನೀರು ಹರಿಯುವಂತೆ ನೋಡಿಕೊಳ್ಳಲು ಮುಖಂಡ ಲಿಂಗರಾಜ್ ಕೋರಿದರು. ಭದ್ರಾ ನಾಲೆಗಳ ಜಾಲ ಬಹುತೇಕ ಶಿಥಿಲಗೊಂಡಿವೆ. ತಜ್ಞರಿಂದ ವರದಿ ಪಡೆದು ದುರಸ್ತಿಗೆ ಕ್ರಮವಹಿಸುವಂತೆ ಶಿರಮಗೊಂಡನಹಳ್ಳಿಯ ಎ.ಬಿ.ಕರಿಬಸಪ್ಪ ಒತ್ತಾಯಿಸಿದರು. ದಾವಣಗೆರೆ ವಿಭಾಗ ಹಾಗೂ ಮಲೆಬೆನ್ನೂರು ಶಾಖಾ ಕಾಲುವೆಗಳಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದ್ದು, ಕಾಮಗಾರಿ ಪೂರ್ಣಗೊಳ್ಳಲು ಇನ್ನೂ 15 ದಿನಗಳ ಕಾಲಾವಕಾಶ ಬೇಕಿದೆ ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ:** ಕೆಲಸದಲ್ಲಿ ಹಿರಿಯರಿಂದ ಒತ್ತಡ, ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಸೃಜನಶೀಲ ಪ್ರತಿಭೆಯನ್ನು ಸರಿಯಾಗಿ ಬಳಸಿದಲ್ಲಿ ಅದು ಅತ್ಯಂತ ಲಾಭದಾಯಕವೆಂದು ಸಾಬೀತಾಗಬಹುದು.

**ವೃಷಭ:** ಸ್ವಲ್ಪ ಸಂಘರ್ಷದ ಹೊರತಾಗಿಯೂ, ನಿಮ್ಮ ಪ್ರೀತಿಯ ಜೀವನವು ಇಂದು ಉತ್ತಮವಾಗಿರುತ್ತದೆ. ನೀವು ನಿಮ್ಮ ಸಂಗಾತಿಯನ್ನು ಸಂತೋಷವಾಗಿಡಲು ಯಶಸ್ವಿಯಾಗುತ್ತೀರಿ ಇಡೀ ದಿನ ನೀವು ಖಾಲಿಯಾಗಿರಬಹುದು.

**ಮಿಥುನ:** ಬಿಡುವಿನ ವೇಳೆಯಲ್ಲಿ ನೀವು ಸೃಜನಾತ್ಮಕವಾಗಿ ಏನಾದರೂ ಮಾಡಬಹುದು. ಮದುವೆಗಳು ಏಕೆ ಸ್ವರ್ಗದಲ್ಲಿ ಮಾಡಲ್ಪಟ್ಟಿವೆ ಎಂದು ನಿಮಗೆ ಇಂದು ತಿಳಿಯುತ್ತದೆ.

**ಕರ್ಕಾಟಕ:** ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ.

**ಸಿಂಹ:** ನೀವೇ ಮರುಚೈತನ್ಯ ಹೊಂದುತ್ತೀರಿ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಬಹವನ್ನು ಪಡೆಯುವ ಸಾಧ್ಯತೆ ಕಂಡು ಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ.

**ಕನ್ಯಾ:** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಲು ನಿರಾಕರಿಸಿ. ಇದು ಅನಾರೋಗ್ಯದ ವಿರುದ್ಧ ಪ್ರಬಲ ಚುಚ್ಚುಮದ್ದು. ನಿಮ್ಮ ಸರಿಯಾದ ಮನೋಭಾವ ತಪ್ಪು ಮನೋಭಾವವನ್ನು ಸೋಲಿಸುತ್ತದೆ.

**ತುಲಾ:** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ನಿಮ್ಮ ಹೂಡಿಕೆಗಳು ಬಗ್ಗೆ ನಿಮ್ಮ ಭವಿಷ್ಯದ ಗುರಿಗಳ ಬಗ್ಗೆ ರಹಸ್ಯಮಯವಾಗಿರಿ.

**ವೃಶ್ಚಿಕ:** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ನಿಮ್ಮ ಸ್ನೇಹಿತರ ಸಹಾಯದಿಂದ ಹಣ ಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ.

**ಧನಸ್ಸು:** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

**ಮಕರ:** ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಕುಂಭ:** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡ ಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ಮೀನ:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡಿರಬೇಕು. ಈ ರಾಶಿಚಕ್ರದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಹಣವನ್ನು ಖರ್ಚು ಮಾಡಬೇಕಾಗಬಹುದು.

### ಮಕ್ಕಳಿಗಾಗಿ ಲೆದರ್ ಶೂ ಹಾಗೂ ಬ್ಯಾಗ್ ಪರಿಚಯ: ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ಡಾ. ವಸುಧಂರಾ.ಕೆ.ಎಂ ಹೇಳಿಕೆ

# ನೂತನ ಲಿಡ್ಕರ್ ಭವನದಲ್ಲಿ ಲೆದರ್ ಎಂಪೋರಿಯಂ ಪ್ರಾರಂಭ

• ಉದಯವಾಹಿನಿ ಚಿತ್ರದುರ್ಗ

ಉನ್ನತ ಗುಣಮಟ್ಟದ ಚರ್ಮೋತ್ಪನ್ನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಲಿಡ್ಕರ್, ಮುಂಬರುವ ದಿನಗಳಲ್ಲಿ ಮಕ್ಕಳಿಗಾಗಿ ಲೆದರ್ ಶೂ ಹಾಗೂ ಬ್ಯಾಗ್‌ಗಳನ್ನು ಮಾರಾಟ ಮಾಡಲಿದೆ. ಈ ಮೂಲಕ ಲಿಡ್ಕರ್ ಉತ್ಪನ್ನಗಳಲ್ಲಿ ವೈವಿಧ್ಯತೆ ತರಲು ಪ್ರಯತ್ನಿಸಲಾಗುತ್ತಿದೆ ಎಂದು ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ಡಾ: ವಸುಂಧರಾ.ಕೆ.ಎಂ ಹೇಳಿದರು.

ಹೊಸ ವರ್ಷದ ಆರಂಭದ ಹಿನ್ನಲೆಯಲ್ಲಿ ಚಿತ್ರದುರ್ಗ ನಗರದ ಪ್ರವಾಸಿ ಮಂದಿರದ ಬಳಿ ಇರುವ ಲಿಡ್ಕರ್ ಭವನಕ್ಕೆ ಸ್ಥಳಾಂತರಗೊಂಡಿರುವ ಲಿಡ್ಕರ್ ಲೆದರ್ ಎಂಪೋರಿಯಂಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

1976ರಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪನೆಯಾದ ಡಾ.ಬಾಬು ಜಗಜೀವನ್ ರಾಮ್ ಚರ್ಮದ ಉತ್ಪನ್ನಗಳ ಅಭಿವೃದ್ಧಿ ನಿಗಮ, ರಾಜ್ಯದ ಪರಿಶಿಷ್ಟ ವರ್ಗದ ಚರ್ಮ ಕುಶಲಕರ್ಮಿಗಳ ಏಳಿಗೆಗೆ ಶ್ರಮಿಸುತ್ತಿದೆ. ಲಿಡ್ಕರ್ ಎನ್ನುವ ಬ್ರಾಂಡ್‌ನೊಂದಿಗೆ ಉತ್ತಮ ಗುಣಮಟ್ಟದ ಚರ್ಮದ ಚಪ್ಪಲಿ, ಬ್ಯಾಗು, ಪರ್ಸ್, ಬೆಲ್ಟ್ ಮಾರಾಟ ಮಾಡಲಾಗುತ್ತಿದೆ. ವರ್ಷಕ್ಕೆ ಸರಾಸರಿ ರೂ.25 ರಿಂದ 30 ಕೋಟಿಯಷ್ಟು ವಹಿವಾಟು ನಡೆಸುತ್ತಿದೆ. ಬೆಂಗಳೂರು, ಮೈಸೂರು, ಚಿತ್ರದುರ್ಗ, ದಾವಣಗೆರೆ, ಸೇರಿದಂತೆ ಇತರೆ 8 ನಗರಗಳಲ್ಲಿ ಲಿಡ್ಕರ್ ಲೆದರ್ ಎಂಪೋರಿಯಂಗಳನ್ನು ತೆರೆದು ನೇರವಾಗಿ ಗ್ರಾಹಕರಿಗೆ ಚರ್ಮದ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಸದ್ಯ ಲಿಡ್ಕರ್ ಲಾಭದ ಹಾದಿಗೆ ಮರಳಿದೆ ಎಂದು ವ್ಯವಸ್ಥಾಪಕ ನಿರ್ದೇಶಕಿ ಡಾ.ವಸುಂಧರಾ.ಕೆ.ಎಂ ತಿಳಿಸಿದರು.

**ಗುಣಮಟ್ಟದಲ್ಲಿ ರಾಜಿ ಇಲ್ಲ:** ಲಿಡ್ಕರ್ ವತಿಯಿಂದ ಚರ್ಮದ ಉತ್ಪನ್ನಗಳನ್ನು ತಯಾರಿಸುವ ಕುಶಲಕರ್ಮಿಗಳಿಗೆ ತರಬೇತಿ ನೀಡಿ ಅತ್ಯುನ್ನತ ಗುಣಮಟ್ಟದ ಚರ್ಮದ ವಸ್ತುಗಳನ್ನು



ಉದಯವಾಹಿನಿ ಚಿತ್ರ

ಸಿದ್ದಪಡಿಸಲಾಗುತ್ತಿದೆ. ಗುಣಮಟ್ಟದಲ್ಲಿ ರಾಜಿಯಾಗುವ ಪ್ರಶ್ನೆಯಿಲ್ಲ. ಜೊತೆಗೆ ಕುಶಲಕರ್ಮಿಗಳ ಶ್ರಮಕ್ಕೆ ತಕ್ಕ ಬೆಲೆ ದೊರಕಬೇಕು ಎನ್ನುವುದು ನಿಗಮದ ಮುಖ್ಯ ಆಶಯವಾಗಿದೆ. ಮಾರುಕಟ್ಟೆಯಲ್ಲಿ ಗುಣಮಟ್ಟ ಇರದ ಚರ್ಮದ ವಸ್ತುಗಳು ಅಗ್ಗದ ದರದಲ್ಲಿ ದೊರೆಯಬಹುದು.

ಆದರೆ ಅವುಗಳು ಬಹುದಿನಗಳ ಕಾಲ ಬಾಳಿಕೆ ಬರುವುದಿಲ್ಲ. ಹೆಸರಾಂತ ದೇಶಿ ಹಾಗೂ ವಿದೇಶಿ ಚರ್ಮದ ಉತ್ಪನ್ನಗಳ ಬ್ರಾಂಡ್‌ಗಳಿಂತಲೂ ಹೆಚ್ಚಿನ ಗುಣಮಟ್ಟದ ಚರ್ಮದ ಉತ್ಪನ್ನಗಳನ್ನು ಲಿಡ್ಕರ್, ಕಡಿಮೆ ಹಾಗೂ ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡುತ್ತಿದೆ.

ಗ್ರಾಹಕರು ಸಹ ಲಿಡ್ಕರ್ ಉತ್ಪನ್ನಗಳ ಗುಣಮಟ್ಟಕ್ಕೆ ಮನಸೋತಿದ್ದಾರೆ. ಈ ಹಿಂದಿಗಿಂತಲೂ ಲೆದರ್ ಎಂಪೋರಿಯಂಗಳಲ್ಲಿ ವಹಿವಾಟು ಹೆಚ್ಚಾಗುತ್ತಿದೆ. ಗ್ರಾಹಕರಿಗೆ ಅನುಕೂಲವಾಗುವಂತೆ ಆನ್‌ಲೈನ್ ಮೂಲಕವೂ ಲಿಡ್ಕರ್ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದ್ದು, ತಮಗೆ ಇಷ್ಟಬಂದ ಉತ್ಪನ್ನಗಳನ್ನು ಮನೆಯ ಬಾಗಿಲಿನಲ್ಲಿಯೇ ಪಡೆಯಬಹುದಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕಿ ವಸುಂಧರಾ ಮಾಹಿತಿ ನೀಡಿದರು.

ನಿಗಮದ ಲೆಕ್ಕಪತ್ರಗಳ ವಾರ್ಷಿಕ ಆಡಿಟ್ ಬಾಕಿಯಿದೆ. ಇದನ್ನು ಪೂರೈಸಿ ಸರ್ಕಾರದಿಂದ ಟೆಂಡರ್‌ನಲ್ಲಿ ಭಾಗವಹಿಸಲು ತೆರಿಗೆ ವಿನಾಯತಿ ಕೋರಲಾಗುತ್ತಿದೆ.

ಇದು ಸಾಧ್ಯವಾದರೆ ಲಿಡ್ಕರ್ ವತಿಯಿಂದ ಸರ್ಕಾರಿ ಶಾಲೆಗಳು ಸೇರಿದಂತೆ ಖಾಸಗಿ ಶಾಲೆಗಳ ಮಕ್ಕಳ ಶೂ, ಸಾಕ್ಸ್, ಬ್ಯಾಗ್‌ಗಳನ್ನು ಸರಬರಾಜು ಟೆಂಡರ್ ಪಡೆಯಬಹುದು. ಇದರಿಂದ ಕುಶಲಕರ್ಮಿಗಳಿಗೆ ಹೆಚ್ಚಿನ ಉದ್ಯೋಗವಕಾಶಗಳು ದೊರೆಯುತ್ತವೆ. ಇದರೊಂದಿಗೆ ಸಣ್ಣ ಪ್ರಮಾಣದಲ್ಲಿ ಉತ್ಪಾದನ ಘಟಕಗಳನ್ನು ತೆರೆಯಲು ಸಹ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಲಾಗುತ್ತಿದೆ ಎಂದು ವ್ಯವಸ್ಥಾಪಕ ನಿರ್ದೇಶಕಿ ವಸುಂಧರಾ ತಿಳಿಸಿದರು.

ಈ ವೇಳೆ ಲಿಡ್ಕರ್ ಉಪಪ್ರಧಾನ ವ್ಯವಸ್ಥಾಪಕ ಪ್ರಾಣೇಶ್, ಹಿರಿಯ ಸಹಾಯಕ ನಾಗರಾಜ, ಜಿಲ್ಲಾ ಸಂಯೋಜಕ ವೆಂಕಟೇಶ್ ಸೇರಿದಂತೆ ಮತ್ತಿತರರು ಇದ್ದರು.

### ಶೇ.20ರ ರಿಯಾಯಿತಿ ದರದಲ್ಲಿ ಮಾರಾಟ

ಚಿತ್ರದುರ್ಗದ ಲಿಡ್ಕರ್ ಭವನದಲ್ಲಿ ಲೆದರ್ ಎಂಪೋರಿಯಂ ಪ್ರಾರಂಭವಾಗಿದ್ದು ಜ.1 ರಿಂದ ಜ.18ವರೆಗೆ ಶೇ.20 ವಿಶೇಷ ರಿಯಾಯಿತಿ ದರದಲ್ಲಿ ಚರ್ಮದ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ಗ್ರಾಹಕರು ಇದರ ಲಾಭ ಪಡೆದುಕೊಳ್ಳಬೇಕು. ಲಿಡ್ಕರ್ 2010ರಿಂದಲೂ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು, ಚರ್ಮದ ಉತ್ಪನ್ನಗಳ ತಯಾರಿಕೆ, ಸ್ವ ಉದ್ಯೋಗ, ತರಬೇತಿ, ಉದ್ಯಮಗಳ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ. ನಿಗಮದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿ ಸೇರಿ 62 ಜನರು ಕೆಲಸ ಮಾಡುತ್ತಿದ್ದಾರೆ. ಇದರೊಂದಿಗೆ ಸಾವಿರಾರು ಕುಶಲಕರ್ಮಿಗಳು ನಿಗಮದೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದ ಗ್ರಾಹಕರು ಹೆಚ್ಚು ಹೆಚ್ಚು ಲಿಡ್ಕರ್ ಉತ್ಪನಗಳನ್ನು ಖರೀದಿಸಿ ನಿಗಮಕ್ಕೆ ಬಲ ತುಂಬಬೇಕು ಎಂದು ವ್ಯವಸ್ಥಾಪಕ ನಿರ್ದೇಶಕಿ ಡಾ.ವಸುಂಧರಾ.ಕೆ.ಎಂ ಕೋರಿದರು.

**ಲಿಡ್ಕರ್ ಲಾಭದ ಹಾದಿಗೆ**

### ಜರ್ಮನ್ ಕಂಪನಿಯೊಂದಿಗೆ ಸಹಯೋಗ:

ಕೊಲ್ಲಾಪುರಿ ಚಪ್ಪಲಿಗೆ ಜಿ.ಐ. ಮಾರ್ಕಿಂಗ್ ಸ್ಟೇಟಸ್ ಇದ್ದು, ಜರ್ಮನಿಯ ಪ್ರೆಡಾ ಎನ್ನುವ ಹೆಸರಾಂತ ಕಂಪನಿ, ಕೊಲ್ಲಾಪುರಿ ಚಪ್ಪಲಿಗಳನ್ನು ಮಾರಾಟ ಮಾಡಲು ಲಿಡ್ಕರ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ರಾಜ್ಯದ ಕುಶಲಕರ್ಮಿಗಳು ತಯಾರಿಸುವ ಕೊಲ್ಲಾಪುರ ಚಪ್ಪಲಿ ಹಾಗೂ ಇತರೆ ಚರ್ಮದ ಉತ್ಪನ್ನಗಳನ್ನು ಖರೀದಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮಾಡಲು ಕಂಪನಿ ಮುಂದೆ ಬಂದಿದೆ. ಈ ಬಗ್ಗೆ ಮಹಾರಾಷ್ಟ್ರ ಹಾಗೂ ಕರ್ನಾಟಕ ಚರ್ಮ ಉತ್ಪನಗಳ ನಿಗಮಗಳೊಂದಿಗೆ ಒಡಂಬಡಿಕೆಯಾಗಿದೆ.

### ಉದಯವಾಹಿನಿ ಪತ್ರಕರ್ತ ಮಹೇಬೂಬಶಾ ಸೇರಿದಂತೆ 50 ಸಾಧಕರಿಗೆ

## ರಾಜ್ಯಮಟ್ಟದ ಶ್ರೀವಿಜಯರತ್ನ ಪ್ರಶಸ್ತಿಗೆ ಆಯ್ಕೆ: ರಾಜ್ಯಾಧ್ಯಕ್ಷ ಶಂಕರಜೀ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಪತ್ರಿಕಾ ರಂಗದ ಸೇವೆ ಪರಿಗಣಿಸಿ **ಉದಯವಾಹಿನಿ** ವರದಿಗಾರ ಮಹೇಬೂಬಶಾ ಮತ್ತು ಪತ್ರಕರ್ತ ಜಗನ್ನಾಥ ಶೇರಿಕಾರ ಹಾಗೂ ಪತ್ರಕರ್ತ ಶಾಮರಾವ ಓಂಕಾರ, ಕಾನೂನು ಕ್ಷೇತ್ರ ಶ್ರೀಮಂತ ಕಟ್ಟಿಮನಿ ಸೇರಿದಂತೆ ವಿವಿಧ ಕ್ಷೇತ್ರದ 50ಜನ ಸಾಧಕರಿಗೆ ಶ್ರೀವಿಜಯರತ್ನ ರಾಜ್ಯಮಟ್ಟದ ಪ್ರಶಸ್ತಿ ಮತ್ತು 26ಸಾಧಕರಿಗೆ ಕನ್ನಡ ಕವಿರತ್ನ ರಾಜ್ಯಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ನಾಟಕ ಬರಹಗಾರರ ಕವಿಗಳ ಸಂಘದ ರಾಜ್ಯಾಧ್ಯಕ್ಷ ಶಂಕರಜೀ ಹೂವಿನಹಿಪ್ಪರಗಿ ತಿಳಿಸಿದ್ದಾರೆ. ಕಲಬುರ್ಗಿ ಎಸ್.ಎಂ.ರಂಗಮಂದಿರದಲ್ಲಿ ಜ.04ರಂದು ರಂಗಮಿತ್ರ ನಾಟ್ಯ ಸಂಘ,ಕರ್ನಾಟಕ ರಾಜ್ಯ ನಾಟಕ ಬರಹಗಾರರ ಕವಿಗಳ ಸಂಘದಿಂದ ಬೆಳಿಗ್ಗೆ 10-30ಕ್ಕೆ ಕವಿಸಂಗಮ-2026 ನಮ್ಮ ನಾಟಕ ನಮ್ಮ ಹಕ್ಕು ವಿನೂತನ ಕಾರ್ಯಕ್ರಮ ಅಭಿನಂದನಾ ಸಮಾರಂಭ ಮತ್ತು ರಾಜ್ಯಮಟ್ಟದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಶ್ರೀವಿಜಯರತ್ನ ಮತ್ತು ಕನ್ನಡ ಕವಿರತ್ನ ಪ್ರಶಸ್ತಿ ಪ್ರದಾನ ಮತ್ತು ನಾಟಕೊತ್ಸವ ಕಾರ್ಯಕ್ರಮ ಜರುಗಲಿದೆ ನಾಟಕ ಬರಗಾರರು,ಕವಿಗಳು, ಸೇರಿದಂತೆ, ನಾಟಕ ಅಭಿಮಾನಿಗಳು,ರಂಗಭೂಮಿ ಮಿತ್ರರು,ಪದಾಧಿಕಾರಿಗಳು ರಾಜಕೀಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ರಂಗಮಿತ್ರ ನಾಟ್ಯ ಸಂಗದ ಜಿಲ್ಲಾಧ್ಯಕ್ಷ ಶಾಮರಾವ ಕೊರವಿ ತಿಳಿಸಿದ್ದಾರೆ. ಕಾರ್ಯಕ್ರಮವನ್ನು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಉದ್ಘಾಟನೆ ಮಾಡಲಿದ್ದಾರೆ, ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರ ಜ್ಯೋತಿ ಬೆಳಗಿಸುವವರು,ಶಾಸಕ ಡಾ.ಅವಿನಾಶ ಜಾಧವ ಶ್ರೀವಿಜಯರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ, ಬಂಧು ಪ್ರಿಂಟರ್ಸ್ ಮಾಲಿಕ ರಮೇಶ ತಿಪ್ಪನೂರ ನಾಟಕ ಉದ್ಘಾಟನೆ,ಜಿಪಂ.ಮಾಜಿ ಸದಸ್ಯ ಬಸವರಾಜ ಬೆಣ್ಣೂರ ಕನ್ನಡ ಕವಿರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.



ಸಭೆಯ ಅಧ್ಯಕ್ಷತೆ ಶಾಮರಾವ ಕೊರವಿ,ಕಾರ್ಯಕ್ರಮದ ನೇತೃತ್ವ ರಾಜ್ಯ ನಾಟಕ ಬರಹಗಾರರ ಕವಿಗಳ ಸಂಘದ ಕಾರ್ಯಾಧ್ಯಕ್ಷ ಗುರುಪ್ಪ ಪಾಟೀಲ, ಭರತನಾಟ್ಯ ಭವಾನಿ ಎವ್.ಆವುಂಟಿ ಮಾಡಲಿದ್ದಾರೆ, ಅನೇಕ ಶಾಸಕರು,ಮಾಜಿ ಶಾಸಕರು ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಮುಖಂಡರು ಪಾಲ್ಗೊಳ್ಳುತ್ತಿದ್ದಾರೆ. ಅದಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ರಂಗಮಿತ್ರ ನಾಟ್ಯ ಸಂಘದ ಜಿಲ್ಲಾ ಸಂಯೋಜಕರು ಲಕ್ಷ್ಮಣ ಆವುಂಟಿ ತಿಳಿಸಿದ್ದಾರೆ.

## ಸಿದ್ದೇಶ್ವರ ಶ್ರೀಗಳ ನುಡಿ ನಮನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಸವನಬಾಗೇವಾಡಿ

ಪಟ್ಟಣದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಪಕ್ಕದಲ್ಲಿ ನಡೆದಾಡುವ ದೇವರು ಸಿದ್ದೇಶ್ವರ ಶ್ರೀಗಳ ಎರಡನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ಗುರು ನಮನ ಕಾರ್ಯಕ್ರಮವನ್ನು ಶುಕ್ರವಾರ ರಾತ್ರಿ ಆಚರಿಸಲಾಯಿತು. ಹಿರೇಮಠದ ಶಿವಪ್ರಕಾಶ ಸ್ವಾಮೀಜಿ ಮಾತನಾಡಿ, ಶ್ರೀಗಳು ಜಾತಿ ಮತ ಪಂಥ ಮೀರಿದ ರಾಷ್ಟ್ರಸಂತ ಎಂದು ಅವರ ಕುರಿತಾಗಿ ಮಾತನಾಡಿ,ಭಾವಚಿತ್ರಕ್ಕೆ ಗುರು ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಸಣ್ಣ ದೇಸಾಯಿ, ಅನಿಲ ದುಂಬಾಳಿ, ಸುರೇಶ್ ಹಾರಿವಾಳ, ಎಸ್ಕೆ ಸೋಮನಕಟ್ಟಿ, ಸದಾನಂದ ಯಳಮೇಲಿ,ಶೇಕಪ್ಪ ಗೋಳಸಂಗಿ, ಸಿದ್ದನಗೌಡ ಚಿಕ್ಕೋಂಡ, ಎಸ್ ಎಸ್ ಹಿರೇಮಠ, ಶಿವಪ್ಪ ಕಡಲಿಮಟ್ಟಿ, ಗಿರಿಮಲ್ಲಪ್ಪ ಮೇಟಿ, ಬಸವರಾಜ್ ಶೇಂಡೆ, ಬಸವರಾಜ್ ಗಚ್ಚಿನವರ ಸೇರಿದಂತೆ ಅನೇಕರು ಹಾಜರಿದ್ದರು. ನಂತರ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

## ಬೈಕ್ ಕಳ್ಳರ ಬಂಧನ: 14 ಬೈಕ್ ಜಪ್ತಿ

• ಉದಯವಾಹಿನಿ, ಕಲಬುರಗಿ

ಐಷಾರಾಮಿ ಬೈಕ್‌ಗಳನ್ನು ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಮಾಡಬೂಳ ಠಾಣೆ ಪೊಲೀಸರು ಬಂಧಿಸಿದ್ದಾರೆ. ಚಿಂಚೋಳಿ ತಾಲ್ಲೂಕಿನ ಪಸ್ತಾಪೂರ ಗ್ರಾಮದ ನಾಗೇಶ ತಂದೆ ರಾಜಪ್ಪ ಹಲಗೆನೂರ ಮತ್ತು ಜೇವರ್ಗಿ ತಾಲ್ಲೂಕಿನ ರಾಮಪೂರ ಗ್ರಾಮದ ಗೌಡಪ್ಪ ತಂದೆ ಶರಣಪ್ಪ ಕಕ್ಕಸಗೇರಾ ಎಂಬುವವರನ್ನು ಬಂಧಿಸಿ 12.5 ಲಕ್ಷ ರೂ.ಮೌಲ್ಯದ 14 ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ. ಮಾಡಬೂಳ ಪೊಲೀಸ್ ಠಾಣೆ ವ್ಯಾಪ್ತಿಯ ಹಳೆ ಹೆಬ್ಬಾಳ ಗ್ರಾಮದಲ್ಲಿ ಬೈಕ್ ಕಳ್ಳತನವಾದ ಬಗ್ಗೆ ಬಸವರಾಜ ಅಂಕಲಗಿ ಅವರು ದೂರು ಸಲ್ಲಿಸಿದ್ದರು.

## ಆಸ್ಪತ್ರೆಯಲ್ಲಿ ಬೆಂಕಿ, ತಪ್ಪಿದ ಅನಾಹುತ

• ಉದಯವಾಹಿನಿ, ಹೊಸಪೇಟೆ

ನಗರದ ಬಸವೇಶ್ವರ ವೃತ್ತ ಸಮೀಪದ ಸಿದ್ಧಿಪ್ರಿಯ ಕಲ್ಯಾಣ ಮಂಟಪ ಹಿಂಭಾಗದ ಪುಣ್ಯಕೋಟಿ ಆಸ್ಪತ್ರೆಯ ಮೂರನೇ ಮಹಡಿಯಲ್ಲಿ ಸಂಜೆ ಅಗ್ನಿ ಆಕಸ್ಮಿಕ ಸಂಭವಿಸಿದ್ದು, ಆಸ್ಪತ್ರೆಯಲ್ಲಿದ್ದ ಒಳರೋಗಿಗಳಿಗೆ ಯಾವುದೇ ಅಪಾಯ ಉಂಟಾಗಿಲ್ಲ.

ಸಂಜೆ 7 ಗಂಟೆ ಸುಮಾರಿಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ಅವಗಡ ಸಂಭವಿಸಿತು. ಆಸ್ಪತ್ರೆಯ ಮೂರನೇ ಮಹಡಿಯಲ್ಲಿ ಹಳೆ ಬೆಡ್ ಮತ್ತಿತರೆ ಸಾಮಗ್ರಿಗಳನ್ನು ಇಡಲಾಗಿತ್ತು. ಬೆಂಕಿ ಅವುಗಳಿಗೆ ಹತ್ತಿಕೊಂಡು ಧಗಧಗನೆ ಉರಿಯತೊಡಗಿತು. ಆಗ ಕೆಳಗಿನ ಮಹಡಿಯಲ್ಲಿದ್ದ ಒಂಭತ್ತು ಮಂದಿ ಮಾನಸಿಕ ಅಸ್ವಸ್ಥ ರೋಗಿಗಳನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿ ಇತರ ಮಹಡಿಗಳತ್ತ ವ್ಯಾಪಿಸುವ ಮೊದಲೇ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದರು. ಹೀಗಾಗಿ ದೊಡ್ಡ ಮಟ್ಟದ ಅನಾಹುತ ತಪ್ಪಿತು.

## ವಾಹನ ಸವಾರರು ಕಡ್ಡಾಯವಾಗಿ ರಸ್ತೆ ಸುರಕ್ಷತಾ ನಿಯಮ ಪಾಲಿಸಿ : ಜಾಫರ್ ಸಾಧಿಕ್

• ಉದಯವಾಹಿನಿ, ಹುಮನಾಬಾದ್

ತಮ್ಮ, ತಮ್ಮ ಸುರಕ್ಷತೆ ಮತ್ತು ಜೀವ ರಕ್ಷಣೆಗೆ ವಾಹನ ಸವಾರರೂ ಕಡ್ಡಾಯವಾಗಿ ರಸ್ತೆ ಸುರಕ್ಷತಾ ನಿಯಮ ಪಾಲಿಸಬೇಕು ಎಂದು ಭಾಲ್ಕಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಾಫರ್ ಸಾಧಿಕ್ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಭಾಲ್ಕಿ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ನಡೆದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ, ಜಾಗೃತಿ ಮಾಸಾಚಾರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಸ್ತೆ ಅಪಘಾತ ತಡೆಯಲು ಎಲ್ಲರ ಸಹಕಾರ ಅಗತ್ಯ, ಸಾರಿಗೆ ನಿಯಮಗಳನ್ನು ಅರಿತುಕೊಂಡು ಅವುಗಳನ್ನು ಪಾಲನೆ ಮಾಡಬೇಕು, ವಾಹನ ಚಲಾವಣೆ ಮಾಡುವಾಗ ಎಲ್ಲಾ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಂಡಿರಬೇಕು. ಮನೆಯಿಂದ ಹೊರ ಬರಬೇಕಾದರೆ ದಾಖಲೆಗಳನ್ನು ಒಂದು ಸಲ ನೋಡಿಕೊಳ್ಳಬೇಕು. ಸಕಾಲಕ್ಕೆ ದಾಖಲೆಗಳನ್ನು ನವೀಕರಣ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಅಪಘಾತದಲ್ಲಿ ಮೊದಲು ತಲೆಗೆ ಪೆಟ್ಟಾಗುತ್ತದೆ, ಹೀಗಾಗಿ ಬೈಕ್ ಸವಾರರು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಹೆಲ್ಮೆಟ್ ಖರೀದಿ ಮಾಡಿ ಧರಿಸಬೇಕು. ವಾಹನ ಚಲಾಯಿಸುವಾಗ ಹೆಡ್ ಫೋನ್, ಮೊಬೈಲ್ ಬಳಸಬಾರದು. ಕುಡಿದು ವಾಹನ ಓಡಿಸಬಾರದು, ಮುಖಾಮುಖಿ, ಹಿಂಬದಿಯಿಂದ, ಎದುರುಗಡೆಯಿಂದ ಬರುವ ವಾಹನದಿಂದ ರಸ್ತೆ ಅಪಘಾತ ಉಂಟಾಗುತ್ತದೆ, ತಡೆಗಟ್ಟಲು ಕಡ್ಡಾಯವಾಗಿ ರಸ್ತೆ ನಿಯಮಗಳನ್ನು ಪಾಲಿಸಬೇಕು ಎಂದರು.

## ಇವರು ಬಂದ ಮೇಲೆಯೇ ಬಳ್ಳಾರಿಯಲ್ಲಿ ಅಶಾಂತಿ ದ್ವೇಷ ರಾಜಕಾರಣ ಬಂತು: ಪ್ರತಾಪರೆಡ್ಡಿ

• ಉದಯವಾಹಿನಿ, ಬಳ್ಳಾರಿ

ಜನಾರ್ದನ ರೆಡ್ಡಿ ಹೆಸರು ಹೇಳದೆ ಅವರು ಅಧಿಕಾರಕ್ಕೆ ಬಂದ ಮೇಲೆಯೇ ಬಳ್ಳಾರಿಯಲ್ಲಿ ಅಶಾಂತಿ ವಾತಾವರಣ, ದ್ವೇಷ ರಾಜಕಾರಣ ಬಂತು ಎಂದು ಬುಡಾ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ನಾರಾ ಪ್ರತಾಪ್ ರೆಡ್ಡಿ ಆರೋಪಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು. 36 ವರ್ಷದ ಯುವ ಶಾಸಕ ಮಾಡಿದ ಅಭಿವೃದ್ಧಿ ನೋಡದೇ ಈ ರೀತಿ ಮಾಡುತ್ತಿದ್ದಾರೆಂದರು.

ಬಳ್ಳಾರಿಯಲ್ಲಿ ಗನ್ ಮ್ಯಾನ್ ಸಂಸ್ಕೃತಿ ತಂದವರು ಈ ಬಿಜೆಪಿಯ ಗ್ಯಾಂಗ್ , 2008 ರ ಮೊದಲು ಇದು ಇರಲಿಲ್ಲ. ಇವರು ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಮುಖಂಡರ ಮೇಲೆ ವಿನಾಕಾರಣ ಕೇಸು ಹಾಕಿದ್ದು ಇವರೇ ನಗರದಲ್ಲಿ ಫ್ಲೆಕ್ಸ್ ಸಂಸ್ಕೃತಿ ತಂದವರೂ ಸಹ ಇವರು ಎಂದರು.

ವಾಲ್ಮೀಕಿ ಪುತ್ಥಳಿ ಅನಾವರಣದ ವೈಭವ ನೋಡಲಾಗದೆ ಹೀಗೆ ಮಾಡಿದ್ದಾರೆ. ನಾವು ಅವರಂತೆ ರಾತ್ರೋ ರಾತ್ರಿ ವಿಗ್ರಹ ಇಟ್ಟಿಲ್ಲ ಕೆಡಿಸುವುದನ್ನು ಬಿಟ್ಟು ಇವರು ಮಾಡಿದ ಒಳ್ಳೆಯದು ಏನೂ ಇಲ್ಲ. ತಾಯಿ ಹೆಸರಲ್ಲಿ ಕೆರೆ ಕಟ್ಟಿಸುವುದಾಗಿ ಹೇಳಿದ್ದಿರಿ ಎಲ್ಲಿ ಆಯ್ತು. ಮಾಡೋದೆಲ್ಲ ಅಕ್ರಮ ಆದರೆ ಹರಿಶ್ಚಂದ್ರನಂತೆ ಮಾತನಾಡುತ್ತಾನೆಂದರು. ನಾವು ಅವರಂತೆ ಆಂದ್ರದಲ್ಲಿ ಗಣಿ ಲೀಜ್ ಪಡೆದು ಕರ್ನಾಟಕದ ಲೂಟಿ ಮಾಡಿಲ್ಲ. 150 ಕೋಟಿ ಆರೋಪ ಎಲ್ಲಿ ಹೋಯ್ತು ಎಂದು ಪ್ರಶ್ನಿಸಿದರು. ಅಭಿವೃದ್ಧಿ ಮಾಡುವುದಾದರೆ ಇವರು ದೆಹಲಿಗೆ ಹೋಗಿ ಎನ್.ಎಂ.ಡಿ.ಸಿ ಕಾರ್ಖಾನೆ ತರಲಿ ಎಂದರು.



ಉದಯವಾಹಿನಿ ಚಿತ್ರ

ಅವರು ಅಭಿವೃದ್ಧಿ ಬಗ್ಗೆ ಮಾತನಾಡುವುದಾರೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು. ಬ್ರಹ್ಮಿಣಿ ಸ್ಟೀಲ್ ಮಾಡುವುದಾಗಿ ಉತ್ತಮ ಗಾಲ್ವಗೆ ಮಾರಾಟ ಮಾಡಿದ್ದೇಕೆಂದರು. ಕಾರ್ಯಕ್ರಮ ಚೆನ್ನಾಗಿ ನಡೆಯುವುದನ್ನು ಸಹಿಸಿಕೊಳ್ಳಲಿಲ್ಲ ಅವರು, ಘಟನೆಯಲ್ಲಿ ತಪ್ಪು ಯಾರದ್ದಾಗಿದೆ ಎಂಬ ಬಗ್ಗೆ ತನಿಖೆ ಆಗಲಿ, ತಪ್ಪಿದ್ದವರ ಮೇಲೆ ಕ್ರಮ ಜರುಗಲಿದೆಂದರು. ಸತೀಶ್ ರೆಡ್ಡಿ ನಮ್ಮ ಕುಟುಂಬದ ಸದಸ್ಯ ಅದ್ಬುತ ಕೆಲಸಗಾರ, ಡೈನಮಿಕ್ ವ್ಯಕ್ತಿ, ಹಳೇ ರಾಜಕೀಯ ಮಾಡಲು ಬಿಡಲ್ಲ. ಗಾಲಿಯ ಗಾಳಿ ತೆಗೆಯುವ ಮಾತು ಬಿಡು, ಮಹರ್ಷಿ ತಂಟೆಗೆ ಬರಬೇಡಿ ಎಂದರು. ಈ ರೀತಿಯ ಅನಧಿಕೃತ ಬ್ಯಾನರ್ ವ್ಯವಸ್ಥೆ ಸರಿಯಲ್ಲ ಇನ್ನು ಮುಂದೆ ಹೀಗೆ ಆಗದಂತೆ ಕ್ರಮ ಜರುಗಿಸಲಿದೆ ಎಂದು ಮೇಯರ್ ಪಿ.ಗಾದೆಪ್ಪ ಹೇಳಿದರು.

## ಆರು ತಿಂಗಳವರೆಗೆ ಮಗುವಿಗೆ ತಾಯಿಯ ಹಾಲು ಮಾತ್ರ ಕುಡಿಸಿ

• ಉದಯವಾಹಿನಿ, ಚಿತ್ರದುರ್ಗ

ಮಗುವಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಮಗುವಿಗೆ ಆರು ತಿಂಗಳ ತನಕ ತಾಯಿಯ ಎದೆ ಹಾಲು ಮಾತ್ರ ಕುಡಿಸಿ ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣ ನಾಯಕ್ ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಇಂದಿರಾ ನಗರದಲ್ಲಿ ಆರೋಗ್ಯ ಇಲಾಖೆಯಿಂದ ನ್ಯುಮೋನಿಯಾ ಕುರಿತು ಆಯೋಜಿಸಿದ ತಾಯಂದಿರ ಸಭೆಯಲ್ಲಿ ಅವರು ಮಾತನಾಡಿದರು. ಸ್ವಚ್ಛತೆಗೆ ಆದ್ಯತೆ ನೀಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವ ಸೌಲಭ್ಯಗಳನ್ನು ಸಕಾಲಕ್ಕೆ ಪಡೆದು ಮಗುವಿಗೆ ಸೋಂಕು ತಗುಲದಂತೆ ಜಾಗ್ರತೆ ವಹಿಸಿ. ತಾಯಿ ಮರಣ ಮತ್ತು ಶಿಶು ಮರಣಕ್ಕೆ ಕಡಿವಾಣ ಹಾಕಬೇಕು ಎಂದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಮಾತನಾಡಿ, ನ್ಯುಮೋನಿಯಾ ಇದು ಒಂದು ಸ್ವಾಶಕೋಶದ ಸೋಂಕು. ಕಳೆದ ನವಂಬರ್ 12 ರಿಂದ ಮುಂಬರುವ ಫೆಬ್ರವರಿ 28 ರವರೆಗೆ ನ್ಯುಮೋನಿಯಾ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುತ್ತಿದ್ದು, ಮಗುವಿಗೆ ಜ್ವರ, ಹಸಿವು ಇಲ್ಲದಿರುವುದು, ಕೆಮ್ಮು ಮತ್ತು ಹಳದಿ ರಕ್ತದ ಕಫ ಇವು ರೋಗಲಕ್ಷಣಗಳು. ರೋಗ ತಡೆಗೆ ಮಕ್ಕಳಿಗೆ ಸಾಕಷ್ಟು ಪೌಷ್ಟಿಕಾಂಶ ಒದಗಿಸಿ, ಸರಿಯಾದ ಸಮಯಕ್ಕೆ ಚುಚ್ಚುಮದ್ದು ಹಾಕಿಸಿ, ಮನೆಯೊಳಗೆ ಮಾಲಿನ್ಯ ನಿಯಂತ್ರಿಸಿ, ಮೊದಲ ಆರು ತಿಂಗಳು ತಾಯಿಯ ಎದೆ ಹಾಲನ್ನು ಮಾತ್ರ ನೀಡುವ ಮುಖಾಂತರ ಸೋಂಕು ಬಾರದಂತೆ ತಡೆಯಬಹುದು ಎಂದರು. ತಾಲ್ಲೂಕು ಆಶಾ ಮೆಂಟರ್ ತಬಿತಾ ಅವರು, ಗರ್ಭಿಣಿ ಆರೈಕೆ ಕುರಿತು ಮಾಹಿತಿ ನೀಡಿ, ಗರ್ಭಿಣಿ ಎಂದಾಕ್ಷಣ ಮೂರು ತಿಂಗಳ ಒಳಗಡೆ ಆಶಾ ಕಾರ್ಯಕರ್ತೆ, ಅಂಗನವಾಡಿ ಕಾರ್ಯಕರ್ತೆಯರು ಅಥವಾ ಆರೋಗ್ಯ ಅಧಿಕಾರಿಗಳಲ್ಲಿ ಹೆಸರು ನೊಂದಣಿ ಮಾಡಿಸಿ ತಾಯಿ ಕಾರ್ಡ್ ಪಡೆದು ವೈದ್ಯರಲ್ಲಿ ಸಕಾಲಕ್ಕೆ ಪರೀಕ್ಷೆ ಸೂಕ್ತ ಚಿಕಿತ್ಸೆ ಪಡೆಯುವ ಮುಖಾಂತರ ಸಂಸ್ಥೆಯಲ್ಲಿ ಹೆರಿಗೆ ಮಾಡಿಸಿ ತಾಯಿ ಮಗುವಿನ ಆರೋಗ್ಯ ರಕ್ಷಣೆ ಮಾಡಿಕೊಳ್ಳಬೇಕು ಎಂದರು. ಸಭೆಯಲ್ಲಿ ಸಿಎಚ್‌ಒ ಪ್ರತಿಭಾ, ಆಶಾ ಕಾರ್ಯಕರ್ತೆಯರಾದ ಗಂಗಾಂಭಿಕ, ರತ್ನಮ್ಮ, ಗರ್ಭಿಣಿ ತಾಯಂದಿರು ಸಾರ್ವಜನಿಕರು ಹಾಜರಿದ್ದರು.



ಉದಯವಾಹಿನಿ ಚಿತ್ರ

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಾನಕಿ ಅವರು, ಮಹಿಳೆಯರಲ್ಲಿ ಕಿಬ್ಬೊಟ್ಟೆ ನೋವು ಅಸಹಜ ರಕ್ತಸ್ರಾವ ಜನನಾಂಗ ಮಾರ್ಗದ ಸೋಂಕುಗಳು ಕುರಿತು ಮಾಹಿತಿ ನೀಡುತ್ತಾ, 30 ವರ್ಷ ಮೇಲ್ಪಟ್ಟವರು ಅಸಾಂಕ್ರಾಮಿಕ ರೋಗಗಳ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆದು ಉತ್ತಮ ಆರೋಗ್ಯ ಹೊಂದಬೇಕು. -ಕೃಷ್ಣ ನಾಯಕ್

# ಕೌಶಲ, ತಪಸ್ಸು ಇದ್ದಾಗ ಅಮರಶಿಲ್ಪಿಯಾಗಲು ಸಾಧ್ಯ

### • ಜಿಲ್ಲಾಡಳಿತ ವತಿಯಿಂದ ಅಮರಶಿಲ್ಪಿ ಜಕಣಾಚಾರಿಯ ಸಂಸ್ಮರಣಾ ದಿನಾಚರಣೆ

• ಉದಯವಾಹಿನಿ, ಚಿಕ್ಕಮಗಳೂರು

ಯಾರಿಗೆ ಕೌಶಲದ ಜೊತೆಗೆ ತಪಸ್ಸು ಇರುತ್ತದೋ ಅವರು ಅಮರ ಶಿಲ್ಪಿಗಳಾಗುತ್ತಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಹೇಳಿದರು. ನಗರದ ಕುವೆಂಪು ಕಲಾ ಮಂದಿರದಲ್ಲಿ ಜಿಲ್ಲಾಡಳಿತ ವತಿಯಿಂದ ಆಯೋಜಿಸಲಾದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿಯ ಸಂಸ್ಮರಣಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಶಿಲೆ ಶಿಲ್ಪಿಯ ಕೈಗೆ ಸಿಕ್ಕಾಗ ಮಾತ್ರ ಅದು ಶಿಲ್ಪವಾಗುತ್ತೆ. ಎಲ್ಲರೂ ಅಮರ ಶಿಲ್ಪಿಗಳು ಆಗಲು ಸಾಧ್ಯವಿಲ್ಲ. ನಮ್ಮ ಜಕಣಾಚಾರಿ ಅವರಿಗೆ ಕೌಶಲವೂ ಇತ್ತು. ಶ್ರದ್ಧೆ ಎಂಬ ತಪಸ್ಸು ಕೂಡ ಇತ್ತು ಈ ಕಾರಣಕ್ಕೆ ಅವರು ಅಮರಶಿಲ್ಪಿ ಅದರು ಎಂದರು. ರಾಜಾಶ್ರಯ ಇಲ್ಲದೆ ಇದ್ದರೆ ತನ್ನ ಸ್ವಂತ ಸಾಮರ್ಥ್ಯದಿಂದ ಒಂದೆರಡೂ ಶಿಲ್ಪವನ್ನು ಮಾಡಬಹುದು. ಆದರೆ, ಬೇಲೂರು-ಹಳೇಬೀಡಿನಂತಹ ಅಥವಾ ಅಮೃತಪುರದಂತಹ ಅದ್ಭುತವಾದ ಶಿಲಾ ಕೌಶಲವನ್ನು ಭೂಮಿಗೆ ಇಳಿಸಲು ರಾಜಾಶ್ರಯ ಬೇಕು ಎಂದು ಹೇಳಿದರು.

ಜಕಣಾಚಾರಿಯವರಿಗೆ ಪ್ರತಿಭೆ ಹಾಗೂ ಕೌಶಲಕ್ಕೆ ಹೊಯ್ಸಳರ ದೊರೆ ವಿಷ್ಣುವರ್ಧನ ಹಾಗೂ ಶಾಂತಲಾದೇವಿಯವರ ರಾಜಾಶ್ರಯ ದೊರಕಿತ್ತು. ಅದ್ಭುತವಾದಂತಹ ಸಾವಿರ ವರ್ಷಗಳ ನಂತರವೂ ಕುತೂಹಲಕ್ಕೆ ಕಾರಣವಾಗುವ, ವಿಜ್ಞಾನಕ್ಕೆ ಸವಾಲಾಗುವ ಇದು ಮನುಷ್ಯರೇ ಮಾಡಲು ಸಾಧ್ಯವಾ ಅನಿಸುವ ಕಲ್ಲಿನಲ್ಲೇ ಮುಖಗಳನ್ನು ಕೆತ್ತುವ ಕಲೆಯನ್ನು ಅವರು ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು. ಭಾರತ ದೇಶ ಕೌಶಲ, ಕಲೆ, ಸಂಸ್ಕೃತಿ, ಸಾಹಿತ್ಯದಲ್ಲಿ ಜಗತ್ತಿಗೆ ಮಾದರಿಯಾಗಿತ್ತು. ಇದನ್ನು ಯಾರಾದರೂ ಪ್ರಶ್ನಿಸಿದರೆ ಬೇಲೂರು, ಹಳೇಬೀಡು, ಅಜಂತಾ, ಎಲ್ಲೋರಾಗಳ ಅದ್ಭುತವಾದ ಶಿಲ್ಪಕಲೆಯನ್ನು ತೋರಿಸಬಹುದು. ಭಾರತದಲ್ಲಿ ತಯಾರಾದ ಅಭರಣ, ವಸ್ತುಗಳಿಗೆ ವಿದೇಶಿಯರು ಮುತ್ತಿಗೆ ಬೀಳುತ್ತಿದ್ದರು. ಇಂದಿಗೂ ದೇಶದಲ್ಲಿ ಜಕಣಾಚಾರಿಯ ಪರಂಪರೆಯನ್ನು ಮುಂದುವರೆಸುವ ಶಿಲ್ಪಿಗಳು ಇದ್ದಾರೆ. ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಕೆತ್ತಿದವರು ಸಹ ಕನ್ನಡಿಗರೇ ಆಗಿದ್ದಾರೆ. ಎಂದರು.

ವಿಶೇಷ ಉಪನ್ಯಾಸ ನೀಡಿದ ಸಾಮಾಜಿಕ ಚಿಂತಕ ಹರ್ಷವರ್ಧನ್, ಅಮರಶಿಲ್ಪಿ ಜಕಣಾಚಾರಿ ಅಂದರೆ ಅದೊಂದು ಹೆಸರಲ್ಲ ಅದು ಪರಂಪರೆ, ಶಿಲೆಗೆ ಉಸಿರನ್ನು ತುಂಬಿದ ಕಲಾವಿದ, ಕಲ್ಲಿಗೆ ಸಂವೇದನೆ ನೀಡಿದ ಸೃಷ್ಟಿಕರ್ತ. ಅವರು ರಚನೆ ಮಾಡಿದ್ದು ಯಾವುದೋ ಕಾಲದಲ್ಲಿ ಇಂದಿಗೂ ಕೂಡ ನಾವು ದೇವರಂತೆ ಕಾಣುತ್ತಿದ್ದೇವೆ ಎಂದರು.

ಬೇಲೂರು-ಹಳೇಬಿಡಿನಲ್ಲಿ ಅದ್ಭುತ ಶಿಲ್ಪ ಕಲೆಗಳು ಇವೆ. ನಾವು ಅಲ್ಲಿಗೆ ಹೋದಾಗ ಕಲ್ಲುಗಳನ್ನ ಕಾಣುವುದಿಲ್ಲ ಮಾನವನ ಭಾವನೆಗಳನ್ನ ಕಾಣುತ್ತೇವೆ. ಆ ಕಲ್ಲುಗಳಲ್ಲಿ ಭಕ್ತಿ ಕಾಣುತ್ತದೆ. ನಗು-ನೋವು, ಶಾಂತಿ-ಶೌರ್ಯ ಕಾಣುತ್ತದೆ. ಒಂದು ಕಲ್ಲು ಕೂಡ ಮಾತನಾಡುತ್ತದೆ ಎಂದು ಜಗತ್ತಿಗೆ ಸಾರಿದ ವ್ಯಕ್ತಿ ಎಂದರೆ ಅದು ಜಕಣಾಚಾರಿಯರು ಎಂದು ಬಣ್ಣಿಸಿದರು. ಅಮರ ಶಿಲ್ಪಿ ಜಕಣಾಚಾರಿ ಅವರ ಕೆಲಸದಲ್ಲಿ ಯಾಂತ್ರಿಕತೆ ಕಾಣುವುದಿಲ್ಲ ಮಾನವೀಯತೆ ಕಾಣುತ್ತದೆ. ಅವರು ಶಿಲ್ಪಕಲಾ ಕೃತಿಗಳಲ್ಲಿ ಅತಿರೇಖಾ ಇಲ್ಲ ಸಮತೋಲನ ಕಾಣುತ್ತದೆ. ಎಲ್ಲಿಯೂ ಕೂಡ ಆಡಂಬರ ಇಲ್ಲ, ಆತ್ಮಸೌಂಧರ್ಯ ಇದೆ. ಇದು ಅಮರಶಿಲ್ಪಿ ಜಕಣಾಚಾರಿ ಅವರ ಶಿಲ್ಪ ಕಲೆಯ ವಿಶೇಷತೆ ಎಂದು ಅವರು ಹೇಳಿದರು.

ರಾಜ್ಯ ಶಿಲ್ಪಕಲಾ ಅಕಾಡೆಮಿಯ ಸದಸ್ಯ ವಿಶ್ವಕರ್ಮ ಅಚಾರ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ವಿಶ್ವ ಬ್ರಾಹ್ಮಣ ಸೇವಾ ಸಂಘದ ಅಧ್ಯಕ್ಷ ಎಂ.ಜೆ. ಚಂದ್ರಶೇಖರ್, ವಿಶ್ವಕರ್ಮ ಕೈಗಾರಿಕೆ ಮತ್ತು ವಿವಿಧೋದ್ದೇಶ ಸಹಕಾರ ಸಂಘದ ಸತೀಶ್, ಸಮಾಜದ ಮುಖಂಡರಾದ ಭೀಮಾಚಾರ್, ನಾರಾಯಣಾಚಾರ್, ಉಮಾಶಂಕರ್. ಕೃಷ್ಣಾಚಾರ್ ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

**ಭಾರತ ಸಭ್ಯ ಸುಸಂಸ್ಕೃತ ರಾಷ್ಟ್ರ**

ಭಾರತ ಸರ್ಕಾರದಿಂದ 18 ಕುಲಕಸುಬುಗಳಿಗೆ ಪಿ.ಎಂ. ವಿಶ್ವಕರ್ಮ ಯೋಜನೆ ಜಾರಿಗೊಳಿಸಲಾಗಿದೆ. ಭಾರತ ಸಭ್ಯ ಸುಸಂಸ್ಕೃತ ರಾಷ್ಟ್ರವಾಗಿ ಬದಲಾಗಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರ ಆಶಯವಾಗಿದೆ. -ಸಿ.ಟಿ ರವಿ, ವಿಧಾನ ಪರಿಷತ್ ಸದಸ್ಯ

## ಸಾರ್ವಜನಿಕ ಸೇವೆಯಲ್ಲಿ ಪಾರದರ್ಶಕತೆ ಹಾಗೂ ವೇಗ ಕಾಪಾಡಬೇಕು

• ಉದಯವಾಹಿನಿ, ಬೀದರ್

ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚಿನ ಶ್ರಮ ವಹಿಸಿ, ಸಾರ್ವಜನಿಕ ಸೇವೆಗಳು ಸುಲಭವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಲಭ್ಯವಾಗುವಂತೆ ಕಾರ್ಯನಿರ್ವಹಿಸಬೇಕು ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ಅಧ್ಯಕ್ಷತೆಯಲ್ಲಿ ಬೀದರ್ ನಗರದ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಾರ್ವಜನಿಕರ ಸಮಸ್ಯೆಗಳ ಕುರಿತು ನಡೆದ ಸಭೆಯಲ್ಲಿ ಚರ್ಚೆ ನಡೆಸಿ ಅವರು ಮಾತನಾಡಿದರು.

ಸಭೆಯಲ್ಲಿ ಕಂದಾಯ ಇಲಾಖೆಯ ಭೂಮಿ ಸಂಬಂಧಿತ ಸೇವೆಗಳಾದ ಭೂ ದಾಖಲೆಗಳ ನಿರ್ವಹಣೆ, ಭೂ ವಿವಾದಗಳ ಪರಿಹಾರ, ವಿಪತ್ತು ನಿರ್ವಹಣೆ, ಪಿಂಚಣಿ ಯೋಜನೆಗಳು (ವೃದ್ಧಾಪ್ಯ, ವಿಧವಾ, ಅಂಗವಿಕಲ), ಸಾಮಾಜಿಕ ಭದ್ರತಾ ಯೋಜನೆಗಳು, ಸಂಧ್ಯಾ ಸುರಕ್ಷಾ, ಅಂತ್ಯ ಸಂಸ್ಕಾರ ಸಹಾಯಧನ, ರೈತ ಕುಟುಂಬಗಳಿಗೆ ನೆರವು, ನೆರೆ-ಬರ ಸೇರಿದಂತೆ ವಿವಿಧ ವಿಪತ್ತು ಪರಿಹಾರ, ಪಡಿತರ ಚೀಟಿ ವಿತರಣೆ ಹಾಗೂ ಜಾತಿ ಪ್ರಮಾಣ ಪತ್ರ ನೀಡುವಂತಹ ಹಲವಾರು ವಿಷಯಗಳ ಕುರಿತು ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಶೀಘ್ರ ಬಗೆಹರಿಸಬೇಕು ಎಂದು ಶಾಸಕರು ಸೂಚಿಸಿದರು.

ಈ ಸಂದರ್ಭದಲ್ಲಿ ಬೀದರ್ ತಹಶೀಲ್ದಾರ್ ರವಿಕುಮಾರ ದಾಮಾ, ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ ಮಲ್ಲಿಕಾರ್ಜುನ ಮತ್ತಿತರರು ಉಪಸ್ಥಿತರಿದ್ದರು.

# ಅಗ್ನಿ ಅವಘಡ; ತೆಲಂಗಾಣ ಮೂಲದ ವಿದ್ಯಾರ್ಥಿ ಹೃತಿಕ್ ರೆಡ್ಡಿ ಸಾವು

**ಬರ್ಲಿನ್:** ಜರ್ಮನಿಯ ಮ್ಯಾಗ್ಡೆಬರ್ಗ್ ನಗರದ ಅಪಾರ್ಟ್ ಮೆಂಟ್‌ನಲ್ಲಿ, ತಡರಾತ್ರಿ ಸಂಭವಿಸಿದ ಬೆಂಕಿ ಅವಘಡದಲ್ಲಿ ತೆಲಂಗಾಣ ಮೂಲದ ವಿದ್ಯಾರ್ಥಿಯೋರ್ವ ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದೆ. ಸಂಕ್ರಾಂತಿ ಹಬ್ಬಕ್ಕೆ ಮನೆಗೆ ಬರುವುವುದಾಗಿ ಹೇಳಿದ್ದ 25 ವರ್ಷದ ಹೃತಿಕ್ ರೆಡ್ಡಿ, ಬೆಂಕಿ ದುರಂತದಲ್ಲಿ ಸಾವನ್ನಪ್ಪಿರುವುದು ಆತನ ಕುಟುಂಬಸ್ಥರನ್ನು ದು:ಖದ ಮಡುವಿಗೆ ತಳ್ಳಿದೆ.

ಹೃತಿಕ್ ರೆಡ್ಡಿ ಮ್ಯಾಗ್ಡೆಬರ್ಗ್ ನಗರದ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಮಲಗಿದ್ದಾಗ, ತಡರಾತ್ರಿ ಬೆಂಕಿ ಕಾಣಿಸಿಕೊಂಡಿದೆ. ವೇಗವಾಗಿ ಹರಡುತ್ತಿರುವ ಬೆಂಕಿ ಮತ್ತು ದಟ್ಟ ಹೊಗೆಯಿಂದ ತಪ್ಪಿಸಿಕೊಳ್ಳಲು, ಹೃತಿಕ್ ರೆಡ್ಡಿ ಅಪಾರ್ಟ್‌ಮೆಂಟ್ ಮಹಡಿ ಮೇಲಿಂದ ಹಾರಲು ಪ್ರಯತ್ನಿಸಿದ್ದಾರೆ. ಈ ವೇಳೆ ತಲೆಗೆ ಗಂಭೀರ ಪೆಟ್ಟು ಬಿದ್ದ ಪರಿಣಾಮ, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿರುವ ವೇಳೆಯೇ ಹೃತಿಕ್ ರೆಡ್ಡಿ ಸಾವನ್ನಪ್ಪಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕಳೆದ ಡಿಸೆಂಬರ್‌ನಲ್ಲಿ ಟೊರೊಂಟೊದಲ್ಲಿ ಭಾರತೀಯ ವಿದ್ಯಾರ್ಥಿ ಗುಂಡೇಟಿಗೆ ಬಲಿ ಆಗಿದ್ದನ್ನು ಇಲ್ಲಿ ಸ್ಮರಿಸಬಹುದು.

- ಜರ್ಮನಿಯ ಮ್ಯಾಗ್ಡೆಬರ್ಗ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಅಗ್ನಿ ದುರಂತ.
- ತೆಲಂಗಾಣ ಮೂಲದ 25 ವರ್ಷದ ಎಂಎಸ್ ವಿದ್ಯಾರ್ಥಿ ಹೃತಿಕ್ ರೆಡ್ಡಿ ಸಾವು.
- ಅಪಾರ್ಟ್‌ಮೆಂಟ್ ಮೇಲಿಂದ ಜಿಗಿದಿದ್ದರಿಂದ ತಲೆಗೆ ಪೆಟ್ಟು, ಆಸ್ಪತ್ರೆಯಲ್ಲಿ ಸಾವು.

ತೆಲಂಗಾಣದ ಜನಗಾಂವ್ ಜಿಲ್ಲೆಯ ಮಲ್ಕಾಪುರ್ ಗ್ರಾಮದವರಾದ ಹೃತಿಕ್ ರೆಡ್ಡಿ, ಯುರೋಪ್ ವಿಶ್ವವಿದ್ಯಾಲಯದಲ್ಲಿ ಎಂಎಸ್ ಪದವಿ ಪಡೆಯಲು ಜೂನ್ 2023ರಲ್ಲಿ ಜರ್ಮನಿಯ ಮ್ಯಾಗ್ಡೆಬರ್ಗ್‌ಗೆ ಆಗಮನಿಸಿದ್ದರು. 2022ರಲ್ಲಿ ವಾಗ್ದೇವಿ ಎಂಜಿನಿಯರಿಂಗ್ ಕಾಲೇಜಿನಿಂದ, ಹೃತಿಕ್ ರೆಡ್ಡಿ ಪದವಿ ಪಡೆದುಕೊಂಡಿದ್ದರು.

ಕಳೆದ ದಸರಾ ರಜೆಗೆ ಮನೆಗೆ ಬರಬೇಕಿದ್ದ ಹೃತಿಕ್ ರೆಡ್ಡಿ, ಜನವರಿ ಎರಡನೇ ವಾರದಲ್ಲಿ ಬರುವ ಸಂಕ್ರಾಂತಿ ಹಬ್ಬಕ್ಕಾಗಿ ರಜೆ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು. ಆದರೆ ಹೊಸ ವರ್ಷದ ಮೊದಲ ದಿನ ಸಂಭವಿಸಿದ ಅಗ್ನಿ ಅವಘಡದಲ್ಲಿ ಅವರು ದಾರುಣವಾಗಿ ಸಾವನ್ನಪ್ಪಿದ್ದಾರೆ. ಮಲ್ಕಾಪುರ್‌ದಲ್ಲಿರುವ ಹೃತಿಕ್ ರೆಡ್ಡಿ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಕಳೆದ ಫೆಬ್ರವರಿ 2024ರಲ್ಲಿ ಹೈದರಾಬಾದ್ ಮೂಲದ ಶ್ರೇಯಸ್ ರೆಡ್ಡಿ ಅಮೆರಿಕದಲ್ಲಿ ನಿಗೂಢವಾಗಿ ಸಾವು ಪ್ರಕರಣವನ್ನು ಇಲ್ಲಿ ಸ್ಮರಿಸಬಹುದು.

## ಭಾರತ–ಬಲೂಚ್‌ಗೆ ಅಪಾಯ, ಜೈಶಂಕರ್‌ಗೆ ಬಲೂಚ್ ನಾಯಕನ ಬಹಿರಂಗ ಪತ್ರ

# ಬಲೂಚಿಸ್ತಾನದಲ್ಲಿ ಚೀನಾ ಸೇನೆ ನಿಯೋಜನೆ ಸಾಧ್ಯತೆ

**ಇಸ್ಲಾಮಾಬಾದ್:** ಭಾರತ ಹಾಗೂ ಚೀನಾದ ನಡುವಿನ ಸಂಬಂಧ ವೃದ್ಧಿಯಾಗುತ್ತಿರುವ ಹೊತ್ತಿನಲ್ಲೇ ಪಾಕಿಸ್ತಾನಕ್ಕೆ ಚೀನಾ ಸದ್ದಿಲ್ಲದೆ ಪಾಕ್‌ಗೆ ಸಹಾಯ ಮಾಡುತ್ತಿದೆ ಎಂದು ಈಗಾಗಲೇ ಅಮೆರಿಕಾ ಎಚ್ಚರಿಸಿದೆ. ಈ ಬೆನ್ನಲ್ಲೇ, ಈಗ ಚೀನಾ–ಪಾಕಿಸ್ತಾನ ಸಂಬಂಧಗಳು ಮತ್ತಷ್ಟು ಬಲಗೊಳ್ಳುತ್ತಿದ್ದು, ಚೀನಾ ಬಲೂಚಿಸ್ತಾನ ಪ್ರದೇಶದಲ್ಲಿ ಚೀನಿ ಆರ್ಮಿಯನ್ನು ನಿಯೋಜಿಸಬಹುದು ಎಂದು ಬಲೂಚ್ ನಾಯಕ ಮೀರ್ ಯಾರ್ ಬಲೂಚ್ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್‌ಗೆ ಬಹಿರಂಗ ಪತ್ರ ಬರೆದು ಎಚ್ಚರಿಸಿದ್ದಾರೆ.

**ಬಲೂಚಿಸ್ತಾನದ ಭವಿಷ್ಯಕ್ಕೆ ಊಹಿಸಲಾಗದ ಬೆದರಿಕೆ**

ಈ ಪತ್ರದ ಪ್ರಕಾರ, ಬಲೂಚಿಸ್ತಾನದ ರಕ್ಷಣೆ ಮತ್ತು ಸ್ವಾತಂತ್ರ್ಯ ಪಡೆಗಳ ಸಾಮರ್ಥ್ಯವನ್ನು ಹೆಚ್ಚಿಸದಿದ್ದರೆ ಮತ್ತು ಅವುಗಳನ್ನು ಎಂದಿನಂತೆ ನಿರ್ಲಕ್ಷಿಸಿದರೆ, ಮುಂದಿನ ಕೆಲವು ತಿಂಗಳುಗಳಲ್ಲಿ ಚೀನಾ ತನ್ನ ಸೇನೆಯನ್ನು ಬಲೂಚಿಸ್ತಾನದಲ್ಲಿ ನಿಯೋಜಿಸಬಹುದು. 60 ಮಿಲಿಯನ್ ಬಲೂಚ್ ಜನರ ಇಚ್ಛೆಯಿಲ್ಲದೆ ಚೀನಾದ ಸೈನಿಕರು ಬಲೂಚಿಸ್ತಾನದ ನೆಲದಲ್ಲಿರುವುದು, ಭಾರತ ಮತ್ತು ಬಲೂಚಿಸ್ತಾನದ ಭವಿಷ್ಯಕ್ಕೆ ಊಹಿಸಲಾಗದ ಬೆದರಿಕೆ ಮತ್ತು ಸವಾಲನ್ನು ಒಡ್ಡುತ್ತದೆ ಎಂದು ತಿಳಿಸಿದ್ದಾರೆ.

**ಸದ್ದಿಲ್ಲದೆ ವೇಗ ಪಡೆಯುತ್ತಿದೆ ಪಾಕ್–ಚೀನಾ CEPC ಕಾರಿಡಾರ್ ಯೋಜನೆ:** ಅಷ್ಟೇ ಅಲ್ಲದೆ, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (CEPC) ಬಗ್ಗೆಯೂ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನ ಮತ್ತು ಚೀನಾದ ನಡುವಿನ ಈ ಒಕ್ಕೂಟವು CEPC ನ ಅಂತಿಮ ಹಂತ ತಲುಪಿದೆ. ಇದು ಪರಿಸ್ಥಿತಿಯನ್ನು ಇನ್ನಷ್ಟು ಅಪಾಯಕಾರಿಯನ್ನಾಗಿ ಮಾಡಿದೆ. ಭಾರತ ಮತ್ತು ಬಲೂಚಿಸ್ತಾನದ ನಡುವೆ ಸ್ಪಷ್ಟ, ಪರಸ್ಪರ ಸಹಕಾರ ಬೇಕು. ಏಕೆಂದರೆ ಈ ಪರಿಸ್ಥಿತಿಯಿಂದಾಗಿ ಇಬ್ಬರೂ ಎದುರಿಸುತ್ತಿರುವ ಬೆದರಿಕೆಗಳು ನಿಜವಾದ ಮತ್ತು ತಕ್ಷಣವಾಗಿವೆ ಎಂದು ವಿವರಿಸಿದ್ದಾರೆ.

ಚೀನಾ ತನ್ನ ಸೇನೆಯನ್ನು ಬಲೂಚಿಸ್ತಾನದಲ್ಲಿ ನಿಯೋಜಿಸಿದರೆ, ಅದು ಭಾರತಕ್ಕೆ ದೊಡ್ಡ ಅಪಾಯ ತಂದೊಡ್ಡಬಹುದು. ಅಕಇಅ ಯೋಜನೆಯು ಈಗಾಗಲೇ ಪಾಕಿಸ್ತಾನ ಮತ್ತು ಚೀನಾವನ್ನು ಹತ್ತಿರ ತಂದಿದೆ. ಇದು ಭಾರತದ ಭದ್ರತೆಗೆ ಸವಾಲಾಗಿದೆ. ಬಲೂಚಿಸ್ತಾನದ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ. ಅವರಿಗೆ ಭಾರತದ ಬೆಂಬಲ ಬೇಕು ಎಂದು ಪತ್ರದಲ್ಲಿ ಹೇಳಲಾಗಿದೆ. ಭಾರತ ಮತ್ತು ಬಲೂಚಿಸ್ತಾನದ ನಡುವೆ ಐತಿಹಾಸಿಕ ಸಂಬಂಧಗಳಿವೆ. ಈ ಸಂಬಂಧಗಳನ್ನು ಬಲಪಡಿಸುವುದು ಇಬ್ಬರಿಗೂ ಲಾಭದಾಯಕ ಎಂದು ತಿಳಿಸಿದ್ದಾರೆ. ಆಪರೇಷನ್ ಸಿಂಧೂರ್‌ದ ಕುರಿತು ಉಲ್ಲೇಖಿಸಿ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯ ಕೇಂದ್ರಗಳ ಮೇಲೆ, ವಿಶೇಷವಾಗಿ ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ, ಪಾಕಿಸ್ತಾನಿ ಸೇನೆಯ ವಿರುದ್ಧ ನಡೆಸಲಾದ ಆಪರೇಷನ್ ಸಿಂಧೂರ್ ಮೂಲಕ ಕಳೆದ ವರ್ಷ ಮೋದಿ ಸರ್ಕಾರ ಕೈಗೊಂಡ ಧೈರ್ಯಶಾಲಿ ಮತ್ತು ದೃಢ ಕ್ರಮಗಳನ್ನು ನಾವು ಶ್ಲಾಘಿಸುತ್ತೇವೆ. ಈ ಕ್ರಮಗಳು ಅತ್ಯುತ್ತಮ ಧೈರ್ಯ ಮತ್ತು ಪ್ರಾದೇಶಿಕ ಭದ್ರತೆ ಹಾಗೂ ನ್ಯಾಯಕ್ಕಾಗಿ ದೃಢವಾದ ಬದ್ಧತೆಯನ್ನು ಪ್ರದರ್ಶಿಸುತ್ತವೆ ಎಂದು ಅವರು ಬರೆದಿದ್ದಾರೆ.

ಹೀಗೆ ಬಲೂಚಿಸ್ತಾನದ ಪ್ರತಿನಿಧಿ ಮಿರ್ ಯಾರ್ ಬಲೂಚ್ ಬಹಿರಂಗವಾಗಿ ಜೈಶಂಕರ್ ಗೆ ಬರೆದಿರುವ ಪತ್ರ, ಈಗ ಚೀನಾ ಹಾಗೂ ಪಾಕಿಸ್ತಾನದ ಸಂಬಂಧಗಳು ಬಲಿಷ್ಠವಾಗುವುದು ಭಾರತಕ್ಕೆ ಬೆದರಿಕೆಯೊಡ್ಡುವ ಸಾಧ್ಯತೆಯನ್ನು ಮತ್ತಷ್ಟು ಅನುಮಾನಗಳು ಎದುರಾಗುವಂತೆ ಮಾಡಿದೆ.



- ಡಾ.ಜೈಶಂಕರ್ ಗೆ ಬಹಿರಂಗ ಪತ್ರ ಬರೆದು ಚೀನಾ–ಪಾಕ್ ಸಂಬಂಧದಿಂದ ಭಾರತಕ್ಕೆ ಅಪಾಯ ಎಂದು ಎಚ್ಚರಿಕೆ ನೀಡಿದ ಬಲೂಚ್ ನಾಯಕ
- ಪಾಕಿಸ್ತಾನದ ಬಲೂಚಿಸ್ತಾನ ಪ್ರದೇಶದಲ್ಲಿ ಚೀನಾ ಸೈನಿಕರನ್ನು ನಿಯೋಜಿಸಬಹುದು, ಇದು ಭಾರತ ಹಾಗೂ ಬಲೂಚ್ ಎರಡಕ್ಕೂ ಅಪಾಯವಂತೆ
- ಸದ್ದಿಲ್ಲದೆ, ಅಂತಿಮ ಸ್ಥಿತಿಗೆ ತಲುಪಿದೆಯಂತೆ ಪಾಕ್–ಚೀನಾ CEPC ಯೋಜನೆ
- ಆಪರೇಷನ್ ಸಿಂಧೂರದಲ್ಲಿ ಭಾತದ ಶೌರ್ಯವನ್ನು ಶ್ಲಾಘಿಸಿದ ಬಲೂಚ್ ನಾಯಕ ಮೀರ್ ಯಾರ್ ಬಲೂಚ್

### ಬಲೂಚಿಸ್ತಾನದಲ್ಲಿ ಚೀನಾ ಸೈನ್ಯ ಸ್ಥಾಪಿಸುವ ಅಪಾಯ

ಜ.1 2026ರಂದು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ರಿಪಬ್ಲಿಕ್ ಆಫ್ ಬಲೂಚಿಸ್ತಾನದ ಪ್ರತಿನಿಧಿ ಮಿರ್ ಯಾರ್ ಬಲೂಚ್ ಬಹಿರಂಗ ಪತ್ರವನ್ನು ಹಂಚಿಕೊಂಡಿದ್ದು, ಬಲೂಚಿಸ್ತಾನದ ರಕ್ಷಣೆ ಮತ್ತು ಸ್ವಾತಂತ್ರ್ಯ ಪಡೆಗಳು ನಿರ್ಲಕ್ಷಿಸಲ್ಪಟ್ಟರೆ ಚೀನಾ ತನ್ನ ಸೇನೆಯನ್ನು ನಿಯೋಜಿಸಬಹುದು. ಇದು ಅತ್ಯಂತ ಅಪಾಯಕಾರಿಯಾಗಿದ್ದು, ಭಾರತ ಮತ್ತು ಬಲೂಚಿಸ್ತಾನದ ಭವಿಷ್ಯಕ್ಕೆ ಊಹಿಸಲಾಗದ ಬೆದರಿಕೆಯನ್ನೊಡ್ಡಬಹುದು ಎಂದು ಎಚ್ಚರಿಕೆ ನೀಡಿದ್ದಾರೆ.

### ಆಪರೇಷನ್ ಸಿಂಧೂರದಲ್ಲಿ ಭಾರತದ ಶೌರ್ಯಕ್ಕೆ ಶ್ಲಾಘನೆ

ಇದೇ ವೇಳೆ ಬಲೂಚಿಸ್ತಾನ ಹಾಗೂ ಭಾರತದ ನಡುವಿನ ಸಂಬಂಧ ಮತ್ತು ಆಪರೇಷನ್ ಸಿಂಧೂರ್‌ದಲ್ಲಿ ಭಾರತದ ಶೌರ್ಯವನ್ನು ಉಲ್ಲೇಖಿಸಿದ್ದಾರೆ. ಭಾರತ ಮತ್ತು ಬಲೂಚಿಸ್ತಾನದ ನಡುವೆ ಶತಮಾನಗಳಷ್ಟು ಹಳೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿವೆ ಎಂದು ಅದಕ್ಕೆ ಸಂಕೇತವಾಗಿ ಹಿಂಗ್ಲಾಜ್ ಮಾತಾ ದೇವಸ್ಥಾನ(ನಾನಿ ಮಂದಿರ)ದಂತಹ ಪವಿತ್ರ ಸ್ಥಳಗಳು ಹಂಚಿಕೆಯಾಗಿರುವುದೇ ಸಾಕ್ಷಿ ಎಂದು ವಿವರಿಸಿದ್ದಾರೆ.

## ಮಿನಿ ನ್ಯೂಸ್

### ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

**ಲಕ್ನೋ:** ಮದುವೆ ಆಮಿಷವೊಡ್ಡಿದ ವೈದ್ಯರೊಬ್ಬರು ನರ್ಸಿಂಗ್ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಅತ್ಯಾಚಾರ ನಡೆಸಿದ್ದೇ ಅಲ್ಲದೆ, ವಿದ್ಯಾರ್ಥಿನಿಯ ಖಾಸಗಿ ಫೋಟೋಗಳನ್ನು ಬಹಿರಂಗಪಡಿಸುವುದಾಗಿ ವೈದ್ಯ ಬೆದರಿಕೆ ಹಾಕಿದ ಆರೋಪದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಉಪ ಪೊಲೀಸ್ ಆಯುಕ್ತ ವಿಶ್ವಜೀತ್ ಶ್ರೀವಾಸ್ತವ ತಿಳಿಸಿದ್ದಾರೆ.

ಇಂಟರ್ನ್ ವೈದ್ಯನ ಹಿನ್ನಲೆ, ವಿಳಾಸಗಳನ್ನು ಪರಿಶೀಲಿಸಲಾಗುತ್ತಿದೆ. ಆರೋಪಿಯನ್ನು ಪತ್ತೆಹಚ್ಚಲು ಪ್ರಯತ್ನಗಳು ನಡೆಯುತ್ತಿವೆ. ನರ್ಸಿಂಗ್ ವಿದ್ಯಾರ್ಥಿನಿಯ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮದುವೆಯಾಗುವುದಾಗಿ ನಂಬಿಸಿ ಆರೋಪಿಯು ನನ್ನ ಜೊತೆ ಹಲವು ಬಾರಿ ದೈಹಿಕ ಸಂಬಂಧ ಹೊಂದಿದ್ದ ಎಂದು ನರ್ಸಿಂಗ್ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಕಿಯಾಸರ್‌ಬಾಗ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಮದುವೆಯಾಗುವಂತೆ ಒತ್ತಾಯಿಸಿದಾಗ ಆರೋಪಿ ನಿರಾಕರಿಸಿದ್ದಾನೆ. ಅಲ್ಲದೇ, ಆಕೆಯ ಖಾಸಗಿ ಫೋಟೋಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಳೆದ ಹದಿನೈದು ದಿನಗಳಲ್ಲಿ ಸಂಸ್ಥೆಯಲ್ಲಿ ವರದಿಯಾದ ಎರಡನೇ ಪ್ರಕರಣ ಇದು. ಇದಕ್ಕೂ ಮೊದಲು, ಪಶ್ಚಿಮ ಬಂಗಾಳದ ವೈದ್ಯರೊಬ್ಬರು ಸಹ ವೈದ್ಯನ ವಿರುದ್ಧ ದೂರು ದಾಖಲಿಸಿದ್ದರು. ವೈದ್ಯನ ವಿರುದ್ಧ ಲವ್ ಜಿಹಾದ್ ಆರೋಪ ಮಾಡಿದ್ದರು. ಧರ್ಮಕ್ಕೆ ಮತಾಂತರ ಆಗುವಂತೆ ಒತ್ತಾಯಿಸಿದ್ದ ಎಂದು ದೂರು ನೀಡಲಾಗಿತ್ತು.

### ಅತ್ಯಾಚಾರಕ್ಕೆ ಯತ್ನಿಸಿದವನನ್ನು ಆಯುಧದಿಂದ ಕೊಂದ ಯುವತಿ

**ಬಂದಾ:** ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ ವ್ಯಕ್ತಿಯನ್ನು ಹರಿತವಾದ ಆಯುಧದಿಂದ ಯುವತಿ ಕೊಂದಿರುವ ಘಟನೆ ಉತ್ತರ ಪ್ರದೇಶದ ಬಂದಾ ಜಿಲ್ಲೆಯ ಮುರ್ವಾಲ್ ಗ್ರಾಮದಲ್ಲಿ ನಡೆದಿದೆ. ಘಟನೆಗೆ ಸಂಭಂದಿಸಿದಂತೆ 18 ವರ್ಷದ ಯುವತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮನೆಯಲ್ಲಿ ಸುಖರಾಜ್ ಪ್ರಜಾಪತಿ (50) ಎಂಬಾತನನ್ನು ಆಯುಧದಿಂದ ಇರಿದು ಕೊಲೆ ಮಾಡಲಾಗಿತ್ತು. ಕುಟುಂಬ ಸದಸ್ಯರು ನೀಡಿದ ದೂರಿನ ಆಧಾರದ ಮೇಲೆ, ಕೊಲೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಫರ್ಸಾ (18) ಎಂಬ ಯುವತಿಯನ್ನು ಆಯುಧದೊಂದಿಗೆ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ರಾಜೇಂದ್ರ ಸಿಂಗ್ ರಾಜವತ್ ಹೇಳಿದ್ದಾರೆ. ವಿಚಾರಣೆಯ ಸಮಯದಲ್ಲಿ, ಆ ವ್ಯಕ್ತಿ ತನ್ನ ಮನೆಗೆ ನುಗ್ಗಿ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾನೆ ಎಂದು ಆರೋಪಿ ಪೊಲೀಸರಿಗೆ ತಿಳಿಸಿದ್ದಾಳೆ. ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ, ಮನೆಯಲ್ಲಿ ಇರಿಸಲಾಗಿದ್ದ ಫರ್ಸಾದಿಂದ ಆತನಿಗೆ ಹೊಡೆದೆ ಎಂದು ಆಕೆ ವಿಚಾರಣೆ ವೇಳೆ ತಿಳಿಸಿದ್ದಾಳೆ ಎಂದು ಹೇಳಿದರು. ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

### ಕೆಟ್ಟ ನೆರೆಹೊರೆಯವರಿಂದ ಭಾರತಕ್ಕೆ ತನ್ನನ್ನು ರಕ್ಷಿಸಿಕೊಳ್ಳುವ ಹಕ್ಕಿದೆ: ಜೈಶಂಕರ್

**ಚೆನ್ನೈ:** ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಕಿಸ್ತಾನದ ಮೇಲೆ ತೀಕ್ಷ್ಣವಾದ ದಾಳಿ ನಡೆಸಿದರು. ಭಯೋತ್ಪಾದನೆಯನ್ನು ಬೆಂಬಲಿಸುವುದನ್ನು ಮುಂದುವರಿಸುವ ''ಕೆಟ್ಟ ನೆರೆಹೊರೆಯವರು'' ಎಂದು ಪಾಕಿಸ್ತಾನವನ್ನು ಟೀಕಿಸಿದ್ದಾರೆ. ಅಂತಹ ಬೆದರಿಕೆಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕನ್ನು ಭಾರತ ಹೊಂದಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಐಐಟಿ ಮದ್ರಾಸ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಚಿವ ಎಸ್. ಜೈಶಂಕರ್, ಭಾರತವು ತನ್ನ ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಭಯೋತ್ಪಾದನೆಗೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದರ ಕುರಿತು ಹೊರಗಿನ ದೇಶದ ಸಲಹೆಯನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿದ್ದಾರೆ.

### ಕಾಶ್ಮೀರದ ಹೈವೇಯಲ್ಲಿ ಪರ್ವತ ಕುಸಿತ; ಶ್ರೀನಗರ–ಬಾರಾಮುಲ್ಲಾ ಮಾರ್ಗ ಬಂದ್

**ಶ್ರೀನಗರ:** ಕಾಶ್ಮೀರದ ಶ್ರೀನಗರ–ಬಾರಾಮುಲ್ಲಾ–ಉರಿ ಹೆದ್ದಾರಿಯಲ್ಲಿ ಬೆಳಿಗ್ಗೆ ಭಾರಿ ಭೂಕುಸಿತ ಸಂಭವಿಸಿದೆ. ಈ ಭಯಾನಕ ಕ್ಷಣ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಹೈವೇಗೆ ದೊಡ್ಡ ಪರ್ವತದ ಅರ್ಧ ಭಾಗ ಉರುಳಿಬಿದ್ದು, ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ವಾಹನ ಸವಾರರು ಪ್ರಾಣ ಉಳಿಸಿಕೊಳ್ಳಲು ಪರದಾಡುತ್ತಿದ್ದರು. ಸದ್ಯಕ್ಕೆ ಯಾವುದೇ ಸಾವುಗಳು ಸಂಭವಿಸಿಲ್ಲ. ಈ ಘಟನೆಯಿಂದ ಜನಪ್ರಿಯ ಪ್ರವಾಸಿ ಕೇಂದ್ರಗಳಾದ ಗುಲ್ಮಾರ್ಗ್, ಪೆಹಲ್ಗಾಮ್ ಮತ್ತು ಸೋನಾಮಾರ್ಗ್ ಸೇರಿದಂತೆ ಎತ್ತರದ ಪ್ರದೇಶಗಳತ್ತ ಸಾಗುತ್ತಿದ್ದ ಪ್ರವಾಸಿಗರು ಮುಂದೆ ಹೋಗಲು ಸಾಧ್ಯವಾಗಲಿಲ್ಲ.

### ಮುಲ್ಲಾಗಳು ತೊಲಗಲಿ: 3 ವರ್ಷದ ಬಳಿಕ ಇರಾನ್‌ನಲ್ಲಿ ಮತ್ತೆ ಬೃಹತ್ ಪ್ರತಿಭಟನೆ

**ಇರಾನ್:** ಹೊಸ ವರ್ಷದ ಆರಂಭದಲ್ಲಿ ಇರಾನ್‌ನಲ್ಲಿ ಪ್ರಾರಂಭವಾದ ಹಣದುಬ್ಬರ ಮತ್ತು ಬೆಲೆ ಏರಿಕೆ ವಿರುದ್ಧದ ಪ್ರತಿಭಟನೆಗಳು ವೇಗವಾಗಿ ಹಿಂಸಾತ್ಮಕವಾಗಿವೆ. ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ವಿರುದ್ಧ ಒಂದು ವಾರದಿಂದಲೂ ನಡೆಯುತ್ತಿರುವ ಈ ಪ್ರತಿಭಟನೆಗಳು ಈಗಾಗಲೇ ಹಲವಾರು ಪ್ರತಿಭಟನಾಕಾರರು ಮತ್ತು ಭದ್ರತಾ ಸಿಬ್ಬಂದಿಯ ಸಾವಿಗೆ ಕಾರಣವಾಗಿವೆ. ಪ್ರತಿಭಟನೆಗಳು ಟೆಹ್ರಾನ್‌ನಿಂದ ಗ್ರಾಮೀಣ ಪ್ರದೇಶಗಳಿಗೆ ಹರಡಿವೆ. ಅಲ್ಲಿ ಜನರು ಕುಸಿಯುತ್ತಿರುವ ಕರೆನ್ಸಿ ಬೆಲೆ ಏರಿಕೆ ಮತ್ತು ಪಾಶ್ಚಿಮಾತ್ಯ ನಿರ್ಬಂಧಗಳಿಂದ ಉಂಟಾದ ಆರ್ಥಿಕ ಬಿಕ್ಕಟ್ಟನ್ನು ಪ್ರತಿಭಟಿಸಲು ಬೀದಿಗಿಳಿದಿದ್ದಾರೆ. ಏತನ್ಮಧ್ಯೆ, ವಿದ್ಯಾರ್ಥಿಗಳು ಮಾಜಿ ಷಾ ಅವರನ್ನು ಬೆಂಬಲಿಸಿ ಘೋಷಣೆಗಳನ್ನು ಕೂಗಿದ್ದಾರೆ. ಇನ್ನು ಅಮೆರಿಕದಲ್ಲಿ ವಾಸಿಸುತ್ತಿರುವ ರೆಜಾ ಪಹ್ಲವಿ ಪ್ರತಿಭಟನಾಕಾರರನ್ನು ಬಹಿರಂಗವಾಗಿ ಬೆಂಬಲಿಸಿದ್ದಾರೆ. ಸದ್ಯದ ಪರಿಸ್ಥಿತಿ ಇರಾನ್‌ನ ಧಾರ್ಮಿಕ ನಾಯಕತ್ವಕ್ಕೆ ಗಂಭೀರ ಸವಾಲನ್ನು ಒಡ್ಡಿದೆ, ಅಲ್ಲಿ ಹಣದುಬ್ಬರವು ಡಿಸೆಂಬರ್ 2025ರಲ್ಲಿ ಶೇಕಡ 42.5ಕ್ಕೆ ತಲುಪಿದೆ.

ಹೊಸ ವರ್ಷದ ಆರಂಭದಿಂದಲೂ ಪ್ರತಿಭಟನೆಗಳು ಹಿಂಸಾತ್ಮಕವಾಗಿ ಬದಲಾಗಿವೆ. ಇದರ ಪರಿಣಾಮವಾಗಿ ಹಲವಾರು ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳು ಸಾವನ್ನಪ್ಪಿವೆ. ಪ್ರತಿಭಟನೆಗಳು ಪ್ರಾರಂಭವಾದಾಗಿನಿಂದ ಸಾವುನೋವುಗಳ ಮೊದಲ ವರದಿಗಳಲ್ಲಿ ಏಳು ಜನರು ಸಾವನ್ನಪ್ಪಿದ್ದಾರೆ. ಇರಾನ್‌ನಾದ್ಯಂತ ಭದ್ರತಾ ಪಡೆಗಳು ಮತ್ತು ಪ್ರತಿಭಟನಾಕಾರರ ನಡುವಿನ ಘರ್ಷಣೆಗಳು ವರದಿಯಾಗಿವೆ. ಇದಕ್ಕೂ ಮೊದಲು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಟೆಹ್ರಾನ್‌ನ ಬೀದಿಗಿಳಿದು ಸರ್ವಾಧಿಕಾರಿಗೆ ಕಿಕ್ ಔಟ್' ಹಾಗೂ ಮುಲ್ಲಾಗಳು ತೊಲಗಲಿ ಎಂದು ಘೋಷಣೆಗಳನ್ನು ಕೂಗುತ್ತಿದ್ದಾರೆ.

# ರಾಷ್ಟ್ರೀಯ ಗಾರ್ಡ್ ನಿಯೋಜನೆ ವಾಪಸ್

**ವಾಷಿಂಗ್ಟನ್:** ದೇಶದ ವಿವಿಧ ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಚಿಕಾಗೋ, ಲಾಸ್ ಏಂಜಲೀಸ್ ಮತ್ತು ಪೋರ್ಟ್‌ಲ್ಯಾಂಡ್ ನಲ್ಲಿ ನಿಯೋಜಿಸಲಾಗಿದ್ದ ರಾಷ್ಟ್ರೀಯ ಗಾರ್ಡ್ ಹಿಂತೆಗೆದುಕೊಳ್ಳಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ನ್ಯಾಷನಲ್ ಗಾರ್ಡ್‌ನ ಉಪಸ್ಥಿತಿಯಿಂದ ವಿವಿಧ ನಗರಗಳಲ್ಲಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಸಹಾಯ ಫೆಡರಲ್ ಸರ್ಕಾರ ಮಧ್ಯಪ್ರವೇಶಿಸದಿದ್ದರೆ ಹಲವು ರಾಜ್ಯಗಳಲ್ಲಿ ಅಪರಾಧ ಪ್ರಕರಣ ಹೆಚ್ಚಾಗುತ್ತಿದ್ದವು ಎಂದು ಹೇಳಿದ್ದಾರೆ. ಕಳೆದ ವರ್ಷ ಜೂನ್‌ನಿಂದ ಹಲವಾರು ನಗರಗಳಲ್ಲಿ ರಾಷ್ಟ್ರೀಯ ಗಾರ್ಡ್ ಅನ್ನು ನಿಯೋಜಿಸಲು ಪ್ರಾರಂಭಿಸಿತ್ತು, ಅಪರಾಧ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಸ್ಥಳೀಯ ಕಾನೂನು ಜಾರಿ ಸಂಸ್ಥೆಗಳ ಅಸಮರ್ಥತೆ' ಉಲ್ಲೇಖಿಸಿ ರಾಷ್ಟ್ರೀಯ ಗಾರ್ಡ್ ನೇಮಕ ಮಾಡಲಾಗಿತ್ತು ಎಂದು ತಿಳಿಸಿದ್ದಾರೆ

ಒಂದು ವೇಳೆ ಮತ್ತೆ ಚಿಕಾಗೋ, ಲಾಸ್ ಏಂಜಲೀಸ್ ಮತ್ತು ಪೋರ್ಟ್‌ಲ್ಯಾಂಡ್‌ನಲ್ಲಿ ಹೆಚ್ಚಾದರೆ ರಾಷ್ಟ್ರೀಯ ಗಾರ್ಡ್ ಅನ್ನು ಮರು ನಿಯೋಜಿಸಲಾಗುವುದು ಎನ್ನುವ ಎಚ್ಚರಿಕೆ ನಡುವೆ ರಾಷ್ಟ್ರೀಯ ಗಾರ್ಡ್ ಹಿಂದಕ್ಕೆ ಪಡೆದಿದ್ದಾರೆ. ಈ ರಾಜ್ಯಗಳಲ್ಲಿರುವ ಡೆಮೋಕ್ರಾಟ್ ಮೇಯರ್‌ಗಳು ಮತ್ತು ಗವರ್ನರ್‌ಗಳು ಎಲ್ಲರೂ ಬಹಳ ಅಸಮರ್ಥರು, ಈ ಹಿನ್ನೆಲೆಯಲ್ಲಿ ದೇಶದ ಹಲವು ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ರಾಷ್ಟ್ರೀಯ ಗಾರ್ಡ್ ನಿಯೋಜಿಸಲಾಗಿತ್ತು.

ಇದೀಗ ಅಪರಾಧ ಪ್ರಕರಣಗಳು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗಾರ್ಡ್ ಹಿಂಪಡೆಯಲಾಗಿದೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ಜೂನ್‌ನಿಂದ ಹಲವಾರು ನಗರಗಳಲ್ಲಿ ನ್ಯಾಷನಲ್ ಗಾರ್ಡ್ ಅನ್ನು ನಿಯೋಜಿಸಲು ಪ್ರಾರಂಭಿಸಿತ್ತು, ಅಪರಾಧ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಸ್ಥಳೀಯ ಕಾನೂನು ಜಾರಿ ಸಂಸ್ಥೆಗಳ ಅಸಮರ್ಥತೆ ಉಲ್ಲೇಖಿಸಿತ್ತು. ಡೊನಾಲ್ಡ್ ಟ್ರಂಪ್ ಆಡಳಿತ ತನ್ನ ಅಧಿಕಾರ ಮಿತಿಮೀರಿದೆ' ಎಂದು ಹೇಳುವ ನ್ಯಾಯಾಧೀಶರ ಟೀಕೆಗಳ ಹೊರತಾಗಿಯೂ, ಅಪರಾಧದ ವಿರುದ್ಧ ಹೋರಾಡಲು ಮತ್ತು ಫೆಡರಲ್ ಆಸ್ತಿಯನ್ನು ರಕ್ಷಿಸಲು ನಿಯೋಜನೆ ಅಗತ್ಯವಾಗಿದೆ ಎಂದು ಡೊನಾಲ್ಡ್ ಟ್ರಂಪ್ ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದರು.

**ಆಸ್ತಿಯನ್ನು ರಕ್ಷಿಸಲು ನಿಯೋಜನೆ ಅಗತ್ಯ**



ಡಿಸೆಂಬರ್ 24 ರಂದು ಅಮೆರಿಕಾ ಸುಪ್ರೀಂ ಕೋರ್ಟ್ ಡೊನಾಲ್ಡ್ ಟ್ರಂಪ್ ಆಡಳಿತ ಚಿಕಾಗೋ ಪ್ರದೇಶದಲ್ಲಿ ನ್ಯಾಷನಲ್ ಗಾರ್ಡ್ ಅನ್ನು ನಿಯೋಜಿಸಲು ನಿರಾಕರಿಸಲಾಗಿತ್ತು. ನ್ಯಾಯಾಲಯದ ಪ್ರಕಾರ, ಡೊನಾಲ್ಡ್ ಟ್ರಂಪ್ ಆಡಳಿತ ''ಇಲಿನಾಯ್ಸ್‌ನಲ್ಲಿ ಫೆಡರಲ್ ಸಿಬ್ಬಂದಿ ಮತ್ತು ಆಸ್ತಿಯನ್ನು ರಕ್ಷಿಸಲು ಅಂತರ್ಗತ ಅಧಿಕಾರ ಚಲಾಯಿಸುವಲ್ಲಿ ಗಾರ್ಡ್ ಅನ್ನು ಫೆಡರಲೈಸ್ ಮಾಡಲು ಅಧ್ಯಕ್ಷರಿಗೆ ಅವಕಾಶ ನೀಡುತ್ತದೆ'' ಎಂಬ ಕಾನೂನನ್ನು ತೋರಿಸಲು ವಿಫಲವಾಗಿದೆ ಎಂದು ಹೇಳಲಾಗಿತ್ತು

# ಸ್ವಿಸ್ ನೈಟ್ ಕ್ಲಬ್ ದುರಂತ: ಮೃತರ ಸಂಖ್ಯೆ 47ಕ್ಕೇರಿಕೆ

**ಜಿನೇವಾ:** ಹೊಸ ವರ್ಷದ ಸಂಭ್ರಮಾಚರಣೆಯ ಸಮಯದಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಜನಸಂದಣಿಯಿಂದ ಕೂಡಿದ ಬಾರ್, ನೈಟ್‌ಕ್ಲಬ್‌ನಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಸಂಭ್ರಮಲ್ಲಿ ಮೋಜು ಮಸ್ತಿ ಮಾಡುತ್ತಿದ್ದ ಮಂದಿ ಬೆಂಕಿಗೆ ಆಹುತಿಯಾಗಿದ್ದಾರೆ. ಮೃತರ ಸಂಖ್ಯೆ 47ಕ್ಕೇರಿದ್ದು, 115ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನೈಟ್ ಕ್ಲಬ್‌ನಿಂದ ಜನರು ಹೊರಬರಲಾರದ ಸ್ಥಿತಿ ನಿರ್ಮಾಣವಾಗಿತ್ತು. ಇನ್ನೂ ಕೆಲವರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಗಾಯಗೊಂಡ 115ಕ್ಕೂ ಅಧಿಕ ಮಂದಿಯನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು ಅದರಲ್ಲಿ ಹಲವರ ಸ್ಥಿತಿ ಮತ್ತಷ್ಟು ಚಿಂತಾಜನಕವಾಗಿದೆ. ಹೀಗಾಗಿ ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಳವಾಗಬಹುದು ಎಂದು ವೈದ್ಯರು ತಿಳಿಸಿದ್ದಾರೆ 115 ಕ್ಕೂ ಹೆಚ್ಚು ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರತ್ಯಕ್ಷದರ್ಶಿಗಳು ಈ ಘಟನೆಯನ್ನು ಊಹಿಸಲಾಗದ ಪ್ರಮಾಣದ ಭಯಾನಕತೆ ಎಂದು ಬಣ್ಣಿಸಿದ್ದು ಈ ರೀತಿಯ ಬೆಂಕಿ ಅವಘಡ ಹಿಂದೆಂದೂ ಕಂಡಿರಲಿಲ್ಲ ಎಂದು ಹೇಳಿದ್ದಾರೆ. ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಜನರು ಕುಸಿದು ಬಿದ್ದು ಭಯಭೀತರಾದ ಜನಸಮೂಹ ತಮ್ಮ ಜೀವ ಉಳಿಸಿಕೊಳ್ಳಲು ಉಂಟಾದ ಕಾಲ್ತುಳಿದಲ್ಲಿ ಹಲವು ಮಂದಿ ಸಾವನ್ನಪ್ಪಿದ್ದಾರೆ. ಭೀತಿ ಮತ್ತು ಅವ್ಯವಸ್ಥೆ ಹಲವರ ಸಾವಿಗೆ ಕಾರಣವಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ.



**ಮೃತರು ಬೇರೆ ಬೇರೆ ದೇಶದವರು:** ನೈಟ್ ಕ್ಲಬ್‌ನಲ್ಲಿ ಮೃತಪಟ್ಟ 47 ಮಂದಿಯಲ್ಲಿ ವಿವಿಧ ದೇಶಕ್ಕೆ ಸೇರಿದ ನಾಗರಿಕರಿದ್ದಾರೆ ಎಂದು ವಲಾಯಿಸ್ ಕ್ಯಾಂಟನ್‌ನ ಪೊಲೀಸ್ ಮುಖ್ಯಸ್ಥ ಫ್ರೆಡೆರಿಕ್ ಗಿಸ್ಲರ್ ತಿಳಿಸಿದ್ದಾರೆ. 115 ಜನರು ಗಾಯಗೊಂಡಿದ್ದಾರೆ ಅವರಲ್ಲಿ ಹೆಚ್ಚಿನವರು ಗಂಭೀರವಾಗಿದ್ದಾರೆ. ಘಟನೆಯಲ್ಲಿ ಆರು ಇಟಾಲಿಯನ್ನರು ಕಾಣೆಯಾಗಿದ್ದಾರೆ ಮತ್ತು 13 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಇಟಾಲಿಯನ್ ಅಧಿಕಾರಿಗಳು ತಿಳಿಸಿದ್ದಾರೆ.

# ಕಲುಷಿತ ನೀರು ಸೇವನೆಯಿಂದ ಸಾವಿನ ಸಂಖ್ಯೆ 14ಕ್ಕೆ ಏರಿಕೆ: 200 ಮಂದಿ ಆಸ್ಪತ್ರೆಗೆ ದಾಖಲು

**ಭೋಪಾಲ್:** ಇಂದೋರ್‌ನ ಭಾಗೀರಥಪುರದಲ್ಲಿ ಕಲುಷಿತ ನೀರು ಸೇವನೆಯಿಂದ ಸಾವನ್ನಪ್ಪಿದವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. 200 ಮಂದಿ ಆಸ್ಪತ್ರೆಗೆ ದಾಖಲಾಗಿದ್ದು, 1,400ಕ್ಕೂ ಅಧಿಕ ಜನರು ವಾಂತಿ, ಭೇದಿಯಂತಹ ಸಮಸ್ಯೆಯಿಂದ ಬಳಲುತ್ತಿದ್ದಾರೆ.



ಕಳೆದ 8 ವರ್ಷಗಳಿಂದ ಇಂದೋರ್ ಭಾರತದ ಅತ್ಯಂತ ಸ್ವಚ್ಛ ನಗರವೆಂದು ಖ್ಯಾತಿ ಪಡೆದಿದೆ. ಈಗ ಅದೇ ಪ್ರದೇಶದಲ್ಲಿ ಕಲುಷಿತ ನೀರು ಸೇವನೆಯಿಂದ ಜನ ಸಾವನ್ನಪ್ಪುತ್ತಿದ್ದಾರೆ. ಅಧಿಕಾರಿಗಳ ಮಾಹಿತಿ ಪ್ರಕಾರ, ಪ್ರಯೋಗಾಲಯದಲ್ಲಿ ನೀರಿನ ಪರೀಕ್ಷೆ ನಡೆದಿದ್ದು, ಕಲುಷಿತ ನೀರಿನಿಂದಾಗಿ ಜನರು ಅಸ್ವಸ್ಥರಾಗುತ್ತಿದ್ದಾರೆ ಎಂದು ತಿಳಿದುಬಂದಿದೆ.

ಇಂದೋರ್‌ನ ಮುಖ್ಯ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿ ಡಾ. ಮಾಧವ ಪ್ರಸಾದ್ ಹಸಾನಿ ಅವರು ಮಾಧ್ಯಮದವರೊಂದಿಗೆ ಮಾತನಾಡಿ, ಭಾಗೀರಥಪುರದಲ್ಲಿ ಪೈಪ್‌ಲೈನ್ ಸೋರಿಕೆಯಿಂದಾಗಿ ಕುಡಿಯುವ ನೀರು ಕಲುಷಿತಗೊಂಡಿರುವುದು ಪ್ರಯೋಗಾಲಯದ ವರದಿಯಲ್ಲಿ ದೃಢಪಟ್ಟಿದೆ ಎಂದು ಹೇಳಿದ್ದಾರೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂಜಯ್ ದುಬೆ ಮಾತನಾಡಿ, ಭಾಗೀರಥಪುರದಲ್ಲಿ ಕುಡಿಯುವ ನೀರಿನ ಪೈಪ್‌ಲೈನ್‌ಗೆ ಬೇರೆ ಯಾವುದಾದರೂ ಕಲುಷಿತ ನೀರು ಸೇರಿಕೊಂಡಿದ್ದಾರೆ ಎಂದು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದ್ದಾರೆ. ಮನೆಗಳಿಗೆ ಪೈಪ್‌ಲೈನ್ ಮೂಲಕ ಶುದ್ಧ ನೀರನ್ನು ಸರಬರಾಜು ಮಾಡಲಾಗಿದೆ. ಆದರೂ ಕೂಡ ಜನರಿಗೆ ನೀರನ್ನು ಕುದಿಸಿ, ನಂತರ ಕುಡಿಯಬೇಕು ಎಂದು ಸೂಚನೆ ನೀಡಿದ್ದಾರೆ.

ಇನ್ನೂ ಭಾಗೀರಥಪುರದಲ್ಲಿ 1,714 ಮನೆಗಳ ಸಮೀಕ್ಷೆ ನಡೆಸಲಾಗಿದ್ದು, 8,571 ಜನರನ್ನು ಪರೀಕ್ಷಿಸಲಾಗಿದೆ. ಈ ವೇಳೆ 334 ಜನರಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಕಳೆದ 8 ದಿನಗಳಲ್ಲಿ 272 ಜನರು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಾಗಿದ್ದು, ಅವರಲ್ಲಿ 71 ಜನರು ಡಿಸ್ಚಾರ್ಜ್ ಆಗಿದ್ದಾರೆ. ಪ್ರಸ್ತುತ 201 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ ಮತ್ತು 32 ಮಂದಿ ತೀವ್ರ ನಿಗಾ ಘಟಕದಲ್ಲಿದ್ದಾರೆ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಇನ್ಮುಂದೆ 24 ಗಂಟೆಗಳಲ್ಲ 25 ಗಂಟೆ

**ನವದೆಹಲಿ:** ಭೂಮಿಯ ತಿರುಗುವಿಕೆಯ ವೇಗವು ಸ್ಥಿರವಾದರೂ ಸೂಕ್ಷ್ಮವಾದ ಬದಲಾವಣೆಗೆ ಒಳಗಾಗುತ್ತಿದ್ದು, ಭವಿಷ್ಯದಲ್ಲಿ ದಿನದ ಉದ್ದವು 24 ಗಂಟೆಗಳಿಂದ 25 ಗಂಟೆಗಳವರೆಗೆ ಹೆಚ್ಚಾಗಬಹುದು. ಈ ಕಥೆಯು ವೈಜ್ಞಾನಿಕ ಕಾದಂಬರಿ ಚಲನಚಿತ್ರದಂತೆ ಕಾಣಬಹುದು, ಆದರೆ ವೈಜ್ಞಾನಿಕ ಅಧ್ಯಯನಗಳು ಭೂಮಿಯು ನಿಧಾನವಾಗುತ್ತಿದೆ ಎಂದು ಸ್ಪಷ್ಟವಾಗಿ ಸೂಚಿಸುತ್ತವೆ ಮತ್ತು ಈ ನಿಧಾನಗತಿಯ ಬದಲಾವಣೆಯು ದೀರ್ಘಾವಧಿಯಲ್ಲಿ ದಿನದ ಉದ್ದದ ಮೇಲೆ ಪರಿಣಾಮ ಬೀರುತ್ತದೆ.

ನಾವು ಸಾಮಾನ್ಯವೆಂದು ಪರಿಗಣಿಸುವ 24 ಗಂಟೆಗಳ ದಿನವು ವಾಸ್ತವವಾಗಿ ಸರಾಸರಿ ಸೌರ ದಿನವಾಗಿದೆ.ಭೂಮಿಯ ತಿರುಗುವಿಕೆಯ ವೇಗ ಸ್ಥಿರವಾಗಿಲ್ಲ, ಮತ್ತು ಇದು ಕಾಲಾನಂತರದಲ್ಲಿ ಬಹಳ ನಿಧಾನವಾಗಿ ಬದಲಾಗುತ್ತದೆ. ಚಂದ್ರನ ಗುರುತ್ವಾಕರ್ಷಣೆಯು ಈ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಸಾಗರಗಳಲ್ಲಿ ಉಬ್ಬರವಿಳಿತಗಳನ್ನು ಸೃಷ್ಟಿಸುವ ಮೂಲಕ ಭೂಮಿಯ ತಿರುಗುವಿಕೆಯ ಮೇಲೆ ಬ್ರೇಕ್ ಆಗಿ ಕಾರ್ಯನಿರ್ವಹಿಸುತ್ತದೆ.

ಪರಿಣಾಮವಾಗಿ, ಭೂಮಿಯ ತಿರುಗುವಿಕೆಯ ಶಕ್ತಿ ಕ್ರಮೇಣ ಕಡಿಮೆಯಾಗುತ್ತದೆ ಮತ್ತು ಚಂದ್ರನು ಪ್ರತಿ ವರ್ಷ ಸುಮಾರು 3.8 ಸೆಂಟಿಮೀಟರ್‌ಗಳಷ್ಟು ಭೂಮಿಯಿಂದ ದೂರ ಸರಿಯುತ್ತಾನೆ. ಹೆಚ್ಚುವರಿಯಾಗಿ, ಹವಾಮಾನ ಬದಲಾವಣೆ ಮತ್ತು ಕರಗುವ ಹಿಮನದಿಗಳು, ಸಮುದ್ರ ಮಟ್ಟ ಏರಿಕೆ ಮತ್ತು ಅಂತರ್ಜಲದ ಅತಿಯಾದ ಶೋಷಣೆ ಭೂಮಿಯ ದ್ರವ್ಯರಾಶಿಯನ್ನು ಬದಲಾಯಿಸುತ್ತದೆ,

ಇದು ದಿನದ ಉದ್ದದಲ್ಲಿ ಮಿಲಿಸೆಕೆಂಡ್ ಮಟ್ಟದ ಬದಲಾವಣೆಗಳಿಗೆ ಕಾರಣವಾಗುತ್ತದೆ. ಭೂಮಿಯಲ್ಲಿನ ಆಂತರಿಕ ಬದಲಾವಣೆಗಳು, ಭೂಕಂಪನ ಚಟುವಟಿಕೆ ಮತ್ತು ಕೋರ್ ಚಲನೆಗಳು ಸಹ ತಿರುಗುವಿಕೆಯ ಮೇಲೆ ಸೂಕ್ಷ್ಮ ಪರಿಣಾಮಗಳನ್ನು ಬೀರುತ್ತವೆ. ವಿಜ್ಞಾನಿಗಳು ಸೌರ ದಿನ ಮತ್ತು ನಾಕ್ಷತ್ರಿಕ ದಿನದ ಆಧಾರದ ಮೇಲೆ ದಿನವನ್ನು ಅಳೆಯುತ್ತಾರೆ, ನಾಕ್ಷತ್ರಿಕ ದಿನವು ಸೌರ ದಿನಕ್ಕಿಂತ ಸುಮಾರು ನಾಲ್ಕು ನಿಮಿಷಗಳು ಕಡಿಮೆ ಇರುತ್ತದೆ.



ಆಧುನಿಕ ಜಿಯೋಡೆಸಿ ತಂತ್ರಗಳು, ಪರಮಾಣು ಗಡಿಯಾರಗಳು, ಉಪಗ್ರಹ ಲೇಸರ್ ರೇಂಜಿಂಗ್ ಮತ್ತು ಕ್ವಾಸಾರ್ ಸಿಗ್ನಲ್‌ಗಳನ್ನು ಬಳಸಿಕೊಂಡು ಭೂಮಿಯ ಚಲನೆಯನ್ನು ಅತ್ಯಂತ ನಿಖರತೆಯಿಂದ ಅಳೆಯಲಾಗುತ್ತಿದೆ.

### ಸಮಯ ಮತ್ತು ಜೀವಿತಾವಧಿಯ ಮೇಲೆ ಪರಿಣಾಮ


ಈ ಬದಲಾವಣೆಯು ರೋಮಾಂಚಕಾರಿಯಾಗಿದ್ದರೂ, 25 ಗಂಟೆಗಳ ದಿನವು ನಮ್ಮ ಜೀವಿತಾವಧಿಯಲ್ಲಿ ಅಥವಾ ಮುಂಬರುವ ಹಲವು ತಲೆಮಾರುಗಳ ಜೀವಿತಾವಧಿಯಲ್ಲಿ ವಾಸ್ತವವಾಗುವ ಸಾಧ್ಯತೆಯಿಲ್ಲ. ವಿಜ್ಞಾನಿಗಳ ಪ್ರಕಾರ, ಭೂಮಿ–ಚಂದ್ರ ವ್ಯವಸ್ಥೆಯಲ್ಲಿ ಈ ಮಟ್ಟದ ಬದಲಾವಣೆಯು ಸರಿಸುಮಾರು 200 ಮಿಲಿಯನ್ ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಈ ಅಧ್ಯಯನವು ಭೂಮಿಯ ತಿರುಗುವಿಕೆಯ ತಿಳುವಳಿಕೆಯನ್ನು ಹೆಚ್ಚಿಸುವುದಲ್ಲದೆ, ಭವಿಷ್ಯದ ಖಗೋಳ ಮತ್ತು ಹವಾಮಾನ ಸಂಶೋಧನೆಗೆ ಮಾರ್ಗದರ್ಶನ ನೀಡುತ್ತದೆ ಮತ್ತು ನಮ್ಮ ಗ್ರಹ ವ್ಯವಸ್ಥೆಯ ಬದಲಾಗುತ್ತಿರುವ ವೇಗವು ಸಮಯ ಮತ್ತು ಜೀವಿತಾವಧಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಸುಳಿವು ನೀಡುತ್ತದೆ.

# ತೈವಾನ್ ಜಲಸಂಧಿಯಲ್ಲಿ ಚೀನಾ ಮಿಲಿಟರಿ ಡ್ರಿಲ್‌ಗೆ ಅಮೆರಿಕಾ ಖಂಡನೆ

## • ಅನಗತ್ಯ ಉದ್ವಿಗ್ನತೆ ಸೃಷ್ಟಿ ಬೇಡ ಎಂದು ಬುದ್ಧಿವಾದ, ಯುಎಸ್‌ಗೆ ಕಾಡ್ತಿದ್ಯಾ ಮಹಾಯುದ್ಧದ ಭೀತಿ?

**ವಾಷಿಂಗ್ಟನ್:** ತೈವಾನ್ ಪರವಾಗಿ ಅಮೆರಿಕಾ ಹಾಗೂ ಜಪಾನ್ ಹೇಳಿಕೆಗಳು ಹಾಗೂ ಬೆಂಬಲದಿಂದ ಕೆರಳಿದ ಚೀನಾ ತೈವಾನ್ ಮೇಲೆ ತನ್ನ ಸಾರ್ವಭೌಮತ್ವವನ್ನು ಸಾಧಿಸಲು ಜಸ್ಟೀಸ್ ಮಿಷನ್ 2025 ಹೆಸರಿನಲ್ಲಿ ಸೇನಾ ಸಮರಾಭ್ಯಾಸ ಮಾಡುವ ಮೂಲಕ ತೈವಾನ್ ಜಲಸಂಧಿಯಲ್ಲಿ ಯುದ್ಧದ ಕಾರ್ಮೋಡ ಮೂಡಿಸಿದೆ. ಸದ್ಯ ಅಮೆರಿಕಾ ಚೀನಾದ ನಡೆಯನ್ನು ಖಂಡಿಸಿದ್ದು, ಈ ಮಿಲಿಟರಿ ಡ್ರಿಲ್ ಗಳು ಅನಗತ್ಯವಾಗಿ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಹಾಗಾಗಿ ತಕ್ಷಣವೇ ಚೀನಾ ತೈವಾನ್ ಮೇಲೆ ಒತ್ತಡ ಹೇರುವುದನ್ನು ನಿಲ್ಲಿಸಬೇಕು ಎಂದು ಸೂಚಿಸಿದೆ.

**ತೈವಾನ್ ಜಲಸಂಧಿಯಲ್ಲಿ ಚೀನಾ ಮಿಲಿಟರಿ ಡ್ರಿಲ್ ಖಂಡಿಸಿದ ಅಮೆರಿಕಾ:** ಈ ಕುರಿತು ಹೇಳಿಕೆ ನೀಡಿರುವ ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಟಾಮಿ ಪಿಗ್ಗೊಟ್ ತೈವಾನ್ ಮತ್ತು ಈ ಪ್ರದೇಶದ ಇತರರ ಕಡೆಗೆ ಚೀನಾದ ಮಿಲಿಟರಿ ಚಟುವಟಿಕೆಗಳು ಮತ್ತು ಹೇಳಿಕೆಗಳು ಅನಗತ್ಯವಾಗಿ ಉದ್ವಿಗ್ನತೆಯನ್ನು ಹೆಚ್ಚಿಸುತ್ತವೆ. ಬೀಜಿಂಗ್‌ಗೆ ಸಂಯಮ ವಹಿಸಲು, ತೈವಾನ್ ಮೇಲೆ ಮಿಲಿಟರಿ ಒತ್ತಡವನ್ನು ನಿಲ್ಲಿಸಲು ಮತ್ತು ಬದಲಾಗಿ ಅರ್ಥಪೂರ್ಣ ಮಾತುಕತೆಯಲ್ಲಿ ತೊಡಗಿಸಿಕೊಳ್ಳಲು ನಾವು ಒತ್ತಾಯಿಸುತ್ತೇವೆ ಎಂದು ತಿಳಿಸಿದ್ದಾರೆ. ಅಲ್ಲದೆ, ತೈವಾನ್ ಜಲಸಂಧಿಯಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಅಮೆರಿಕ ಬೆಂಬಲಿಸುತ್ತದೆ. ಅಷ್ಟು ಮಾತ್ರವಲ್ಲದೆ, ಬಲ ಅಥವಾ ಒತ್ತಾಯದ ಮೂಲಕ ಸೇರಿದಂತೆ, ಏಕಪಕ್ಷೀಯವಾಗಿ ಯಥಾಸ್ಥಿತಿಯನ್ನು ಬದಲಾಯಿಸುವುದನ್ನು ವಿರೋಧಿಸುತ್ತದೆ ಎಂದು ತಿಳಿಸಿದ್ದಾರೆ.



- ತೈವಾನ್ ಜಲಸಂಧಿಯಲ್ಲಿನ ಚೀನಾ ಮಿಲಿಟರಿ ಡ್ರಿಲ್ ಅನಗತ್ಯ ಉದ್ವಿಗ್ನತೆಯನ್ನು ಹೆಚ್ಚಿಸುತ್ತವೆ ಎಂದು ಅಮೆರಿಕಾ ಖಂಡನೆ
- ಅಮೆರಿಕಾ ನಡೆಯಿಂದ ಕೆರಳಿದ್ದ ಚೀನಾ ತೈವಾನ್‌ಗೆ ಶಾಕ್, ತೈವಾನ್ ಗಡಿ ಸಮೀಪದಲ್ಲೇ ರಾಕೆಟ್ ದಾಳಿ
- ಚೀನಾಗೆ ಸೆಡ್ಡು ಹೊಡೆದು ಗಡಿಯಲ್ಲಿ ಹೆಚ್ಚಿನ ಭದ್ರತೆ ನಿಯೋಜಿಸಿದ ತೈವಾನ್, ಮುಂದೆ ಕಾದಿದ್ಯಾ ಮಹಾಯುದ್ಧ?

### ತೈವಾನ್ ಗಡಿ ಸಮೀಪಕ್ಕೆ ಚೀನಾ ರಾಕೆಟ್ ದಾಳಿ

ಆದರೆ ಚೀನಾದ ಈ ನಡೆಯನ್ನು ಸ್ವತಂತ್ರ್ಯ ದೇಶದ ಮೇಲೆ ಈ ರೀತಿ ಡ್ರಿಲ್ ನಡೆಸುವುದು ಮಿಲಿಟರಿ ಬೆದರಿಕೆ ನೀಡುವಂತಿದೆ ಎಂದು ತೈವಾನ್ ಚೀನಾವನ್ನು ಖಂಡಿಸಿದೆ. ಅಲ್ಲದೆ, ಚೀನಾ ಮಿಲಿಟರಿ ಡ್ರಿಲ್ ಆರಂಭಿಸಿದ ನಂತರ ಎರಡನೇ ದಿನದಂದು ಪಿಎಲ್‌ಎ 27 ರಾಕೆಟ್‌ಗಳನ್ನು ಉಡಾಯಿಸಿದ್ದು, ಅದರಲ್ಲಿ 10 ರಾಕೆಟ್‌ಗಳು ತೈವಾನ್‌ನ 24–ನಾಟಿಕಲ್–ಮೈಲಿ ಸಮೀಪದ ವಲಯದ ನೀರಿನಲ್ಲಿ ಇಳಿದಿದೆ. ಇದು ತೈವಾನ್ ಗಡಿ ಪ್ರದೇಶದಲ್ಲಿ ದಾಖಲಾದ ಅತ್ಯಂತ ಹತ್ತಿರದ ಚೀನೀ ಲೈವ್–ಫೈರ್ ಚಟುವಟಿಕೆಯನ್ನು ಗುರುತಿಸುತ್ತಿದೆ ಎಂದು ತೈವಾನ್‌ನ ರಾಷ್ಟ್ರೀಯ ರಕ್ಷಣಾ ಸಚಿವಾಲಯ ತಿಳಿಸಿದೆ.

**ಯುಎಸ್ ನಡೆಯಿಂದ ಕೆರಳಿದ ಚೀನಾ:** ಅಮೆರಿಕಾ ತೈವಾನ್ ಗೆ ಬರೋಬ್ಬರಿ 10ಶತಕೋಟಿ ಡಾಲರ್‌ಗಳಿಗೂ ಅಧಿಕ ಮೌಲ್ಯದ ಶಸ್ತ್ರಾಸ್ತ್ರ ಮಾರಾಟ ಮಾಡುವುದಾಗಿ ಘೋಷಿಸಿತ್ತು. ಆದರೆ ಪ್ರಜಾಪ್ರಭುತ್ವ ರಾಷ್ಟ್ರವಾದ ತೈವಾನ್ ತನ್ನ ಪ್ರದೇಶದ ಭಾಗ ಎಂದು ಚೀನಾ ಪರಿಗಣಿಸುತ್ತಿದ್ದು, ಇದು ಡ್ರ್ಯಾಗನ್ ರಾಷ್ಟ್ರವನ್ನು ಕರಳಿಸಿದ್ದು ಕೆಲವೇ ದಿನಗಳಲ್ಲಿ ಚೀನಾ ತೈವಾನ್ ಸುತ್ತಲೂ ದಿಗ್ಬಂಧನ ವಿಧಿಸಿ ತೈವಾನ್ ಜಲಸಂಧಿಯಲ್ಲಿ ಸೇನಾ ಸಮರಭ್ಯಾಸ ಹಾಗೂ ಮಿಲಿಟರಿ ಕವಾಯತು ನಡೆಸುತ್ತಿದೆ. ಈ ಸಮರಭ್ಯಾಸವು ತೈವಾನ್‌ನ ಸ್ವಾತಂತ್ರ್ಯದ ವಿರುದ್ಧ ಮತ್ತು ರಾಷ್ಟ್ರೀಯ ಏಕತೆಯ ರಕ್ಷಣೆಗಾಗಿ ನಡೆಸಲಾಗಿದೆ ಎಂದು ಚೀನಾ ತನ್ನ ನಡೆಯನ್ನು ಸಮರ್ಥಿಸಿಕೊಳ್ಳುತ್ತಿದೆ.

**ತೈವಾನ್ ಮೇಲೆ ಒತ್ತಡ**

ಹಾಗಾಗಿ ತೈವಾನ್ ಸಹ ಸಮರಕ್ಕೆ ನೀವು ಸಿದ್ಧವಾದರೆ ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ನಾವು ಸಮರಕ್ಕೆ ಸಿದ್ಧ ಎಂದು ಮಿಲಿಟರಿ ಡ್ರಿಲ್ ಮಾಡುತ್ತಿದ್ದು, ಹೆಚ್ಚಿನ ಭದ್ರತೆಯನ್ನು ಗಡಿ ಸುತ್ತಲೂ ನಿಯೋಜಿಸಿದೆ.

ಅಮೆರಿಕಾದ ಜೊತೆಜೊತೆಗೆ ಯುರೋಪಿಯನ್ ಒಕ್ಕೂಟ, ಯುನೈಟೆಡ್ ಕಿಂಗ್‌ಡಮ್, ಫ್ರಾನ್ಸ್, ಜರ್ಮನಿ, ಜಪಾನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಫಿಲಿಪೈನ್ಸ್ ದೇಶಗಳು ತೈವಾನ್ ಮೇಲೆ ಚೀನಾ ನಡೆಸುತ್ತಿರುವ ಕವಾಯತುಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿವೆ.

# ಕೋಟಿ ಕೋಟಿ ಬಾಚಿದ 'ಮಾರ್ಕ್'

ಹೊಸ ವರ್ಷದಂದು 'ಮಾರ್ಕ್' ಸಿನಿಮಾ ಭರ್ಜರಿ ಯಶಸ್ಸು ಕಂಡಿದೆ. ಡಿಸೆಂಬರ್ 25ರಂದು ಬಿಡುಗಡೆಯಾದ ಈ ಚಿತ್ರ 9 ದಿನಗಳಲ್ಲಿ 50 ಕೋಟಿ ರೂಪಾಯಿ ದಾಟಿರುವ ನಿರೀಕ್ಷೆ ಇದೆ. ಜನವರಿ 1ರಂದು ಚಿತ್ರ ಉತ್ತಮ ಕಲೆಕ್ಷನ್ ಮಾಡಿದೆ. ಹೊಸ ವರ್ಷವನ್ನು ದೊಡ್ಡ ಗಳಿಕೆಯೊಂದಿಗೆ ಪ್ರಾರಂಭಿಸಿದೆ. ಸುದೀಪ್ ನಟನೆಯ ಈ ಚಿತ್ರವು ಪ್ರೇಕ್ಷಕರು ಮತ್ತು ಅಭಿಮಾನಿಗಳಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದೆ. ಸುದೀಪ್ ನಟನೆಯ 'ಮಾರ್ಕ್' ಸಿನಿಮಾ ಹೊಸ ವರ್ಷದಂದು ಒಳ್ಳೆಯ ರೀತಿಯ ಆರಂಭ ಕಂಡಿದೆ. ಮೊದಲ ನಾಲ್ಕು ದಿನ ಅಬ್ಬರಿಸಿದ್ದ ಈ ಚಿತ್ರ ನಂತರವೂ ಉತ್ತಮ ಕಲೆಕ್ಷನ್ ಮಾಡಿತ್ತು. ಹೊಸ ವರ್ಷದ ರಜೆ ಚಿತ್ರಕ್ಕೆ ಸಹಕಾರಿ ಆಗಿದೆ. ಜನವರಿ 1ರಂದು ಸಿನಿಮಾ ಕೋಟಿ ಕೋಟಿ ರೂಪಾಯಿ ಬಾಚಿಕೊಂಡಿದೆ.



ಇದು ಕಿಚ್ಚನ ಅಭಿಮಾನಿಗಳ ಖುಷಿ ಹೆಚ್ಚಿಸಿದೆ. ಈ ವೀಕೆಂಡ್ ಕೂಡ ಸಿನಿಮಾ ಒಳ್ಳೆಯ ಕಲೆಕ್ಷನ್ ಮಾಡುವ ಸಾಧ್ಯತೆ ಇದೆ. 'ಮಾರ್ಕ್' ಸಿನಿಮಾ ರಿಲೀಸ್ ಆಗಿದ್ದು ಡಿಸೆಂಬರ್ 25ರಂದು. ಈ ಚಿತ್ರ ತೆರೆಗೆ ಬಂದು 9 ದಿನ ಕಳೆದಿದೆ. ಈ ಸಿನಿಮಾ ನಾಲ್ಕು ದಿನಕ್ಕೆ 35 ಕೋಟಿ ರೂಪಾಯಿ ಬಾಚಿಕೊಂಡಿದೆ ಎಂದು ತಂಡ ಹೇಳಿಕೊಂಡಿದೆ. ನಂತರದ ಕಲೆಕ್ಷನ್ ಕೂಡ ಸೇರಿದರೆ ಸಿನಿಮಾದ ಗಳಿಕೆ 50 ಕೋಟಿ ರೂಪಾಯಿ ದಾಟಿರಬಹುದು ಎಂದು ಹೇಳಲಾಗುತ್ತಾ ಇದೆ. ಜನವರಿ ಒಂದರಂದು ಮಾರ್ಕ್ ಸಿನಿಮಾ ಸುಮಾರು 2 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ ಎಂದು ವರದಿ ಹೇಳಿದೆ. ಈ ಮೂಲಕ ಹೊಸ ವರ್ಷವನ್ನು ದೊಡ್ಡ ಗಳಿಕೆಯೊಂದಿಗೆ ಆರಂಭಿಸಿದಂತೆ ಆಗಿದೆ. ಸಿನಿಮಾ ಇಂದು ಸಾಧಾರಣ ಕಲೆಕ್ಷನ್ ಮಾಡಿದರೂ ವೀಕೆಂಡ್‌ನಲ್ಲಿ (ಜನವರಿ 3 ಹಾಗೂ ಜನವರಿ 4) ಸಿನಿಮಾ ಅಬ್ಬರದ ಗಳಿಕೆ ಮಾಡುವ ನಿರೀಕ್ಷೆ ಇದೆ. ಸಿನಿಮಾ ಉತ್ತಮ ಕಲೆಕ್ಷನ್ ಮಾಡುತ್ತಿರುವ ಬಗ್ಗೆ 'ಸುಪ್ರಿಯಾ ಪಿಕ್ಚರ್ ಸ್ಟುಡಿಯೋ' ಘೋಷಣೆ ಮಾಡಿದೆ.

**50 ಕೋಟಿ ರೂಪಾಯಿ ಗಳಿಕೆ**



# ಹಿಂದಿಗೆ ರೀಮೇಕ್ ವಿಜಯ್-ರಶ್ಮಿಕಾ ಸಿನಿಮಾ

ಇತ್ತೀಚೆಗೆ ರೀಮೇಕ್ ಸಂಸ್ಕೃತಿ ಬಹಳ ಕಡಿಮೆ ಆಗಿದೆ ಆದರೆ ಸಂಪೂರ್ಣವಾಗಿ ನಿಂತಿಲ್ಲ. ಕರಣ್ ಜೋಹರ್ ಈಗಲೂ ಸಹ ದಕ್ಷಿಣದ ಸಿನಿಮಾಗಳನ್ನು ಹಿಂದಿಯಲ್ಲಿ ಮರು ನಿರ್ಮಾಣ ಮಾಡುತ್ತಿದ್ದಾರೆ. ಕೆಲ ತಿಂಗಳ ಹಿಂದಷ್ಟೆ ತಮಿಳಿನ ಸಿನಿಮಾ ಒಂದನ್ನು ರೀಮೇಕ್ ಮಾಡಿದ್ದರು. ಇದೀಗ ವಿಜಯ್ ದೇವರಕೊಂಡ-ರಶ್ಮಿಕಾ ನಟನೆಯ ಸಿನಿಮಾವನ್ನು ಹಿಂದಿಗೆ ತಂದಿದ್ದಾರೆ. ಪ್ಯಾನ್ ಇಂಡಿಯಾ ಸಿನಿಮಾಗಳು ಬಂದ ಮೇಲೆ ರೀಮೇಕ್ ಸಂಸ್ಕೃತಿ ಬಹಳ ಕಡಿಮೆ ಆಗಿದೆ. ಮೊದಲೆಲ್ಲ ದಕ್ಷಿಣದಲ್ಲಿ ಹಿಟ್ ಆದ ಸಿನಿಮಾಗಳನ್ನು ಹಿಂದಿಗೆ ರೀಮೇಕ್ ಮಾಡಿ ಕೋಟಿಗಳಲ್ಲಿ ಬಾಚಿಕೊಳ್ಳುತ್ತಿದ್ದರು ಅಲ್ಲಿಯ ನಿರ್ದೇಶಕರು. ಹಿಂದಿಯಲ್ಲಿ ಹಿಟ್ ಆದ ಸಿನಿಮಾಗಳು ದಕ್ಷಿಣದ ಬರುತ್ತಿದ್ದವು. ಈಗದು ಕಡಿಮೆ ಆಗಿದೆ. ಆದರೆ ಈಗ ತುಸು ಹಳೆಯ ಸಿನಿಮಾಗಳನ್ನು ಹಿಂದಿಗೆ ರೀಮೇಕ್ ಮಾಡಿ ಬಿಡುಗಡೆ ಮಾಡಲಾಗುತ್ತಿದೆ. ಅದರಲ್ಲೂ ನಿರ್ಮಾಪಕ ಕರಣ್ ಜೋಹರ್ ಒಂದರ ಹಿಂದೊಂದು ಇಂಥಹಾ ಸಾಹಸ ಮಾಡುತ್ತಿದ್ದಾರೆ. ಇದೀಗ ತೆಲುಗಿನ ಸಾಧಾರಣ ಹಿಟ್ ಸಿನಿಮಾ ಒಂದನ್ನು ಹಿಂದಿಯಲ್ಲಿ ಮರು ನಿರ್ಮಾಣ ಮಾಡಲಾಗುತ್ತಿದೆ. ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಒಟ್ಟಿಗೆ ನಟಿಸಿದ್ದ ಎರಡನೇ ಸಿನಿಮಾ 'ಡಿಯರ್ ಕಾಮ್ರೇಡ್'. ಈ ಸಿನಿಮಾ 2019 ರಲ್ಲಿ ಬಿಡುಗಡೆ ಆಗಿತ್ತು. ಸಿನಿಮಾ ಚೆನ್ನಾಗಿಯೇ ಇತ್ತಾದರೂ ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಗೆಲುವು ಕಾಣಲಿಲ್ಲ. ಆಗಿನ ಕಾಲಕ್ಕೆ ಈ ಸಿನಿಮಾ 33 ಕೋಟಿ ರೂಪಾಯಿ ಗಳಿಕೆ ಮಾಡಿತ್ತು. ಆದರೆ ಸಿನಿಮಾದ ವಿಷಯ, ಕೆಲವು ದೃಶ್ಯಗಳು ಬಹಳ ಪರಿಣಾಮಕಾರಿಯಾಗಿತ್ತು. ಇಂದಿಗೂ ಸಹ ಸಾಮಾಜಿಕ ಜಾಲತಾಣದಲ್ಲಿ ಸಿನಿಮಾದ ಕೆಲ ದೃಶ್ಯಗಳು ಹರಿದಾಡುತ್ತಿರುತ್ತವೆ. ಇದೀಗ ಈ ಸಿನಿಮಾವನ್ನು ಹಿಂದಿಗೆ ರೀಮೇಕ್ ಮಾಡಲಾಗುತ್ತಿದೆ. ಕರಣ್ ಜೋಹರ್ ಅವರು 'ಡಿಯರ್ ಕಾಮ್ರೇಡ್' ಸಿನಿಮಾದ ರೀಮೇಕ್ ಹಕ್ಕುಗಳನ್ನು ಪಡೆದುಕೊಂಡಿದ್ದು, ಅವರೇ ಹಿಂದಿಯಲ್ಲಿ ಸಿನಿಮಾವನ್ನು ಮರು ನಿರ್ಮಾಣ ಮಾಡುತ್ತಿದ್ದಾರೆ. ವಿಜಯ್ ದೇವರಕೊಂಡ ಪಾತ್ರದಲ್ಲಿ ಯುವ ನಟ ಸಿದ್ಧಾಂತ್ ಚತುರ್ವೇದಿ ನಟಿಸುತ್ತಿದ್ದಾರೆ. ನಾಯಕಿಯಾಗಿ ನಟಿಸುತ್ತಿರುವುದು ಪ್ರತಿಭಾ ರಂತಾ. ಸೂಪರ್ ಹಿಟ್ ಸಿನಿಮಾ 'ಲಾಪತಾ ಲೇಡೀಸ್'ನಲ್ಲಿ ಪ್ರತಿಭಾ ಅವರು ಪುಷ್ಪಾ ರಾಣಿ ಪಾತ್ರದಲ್ಲಿ ನಟಿಸಿದ್ದರು. ಇದು ಅವರ ಮೂರನೇ ಸಿನಿಮಾ ಆಗಿರಲಿದೆ.



# 'ಪ್ರಶಾಂತ್ ಅವಕಾಶ ಕೊಡಲಿಲ್ಲ ಆದರೆ ಅದೃಷ್ಟ ಕೈ ಹಿಡಿಯಿತು

ಈ ಹಿಂದೆ ಕನ್ನಡದ 'ನಾನು ಮತ್ತು ವರಲಕ್ಷ್ಮಿ' ಸಿನಿಮಾನಲ್ಲಿ ನಟಿಸಿರುವ ಮಾಳವಿಕಾ ಮೋಹನನ್, ಆ ನಂತರ ತಮ್ಮ ಪ್ರತಿಭೆಯಿಂದ ಕೆಲ ದೊಡ್ಡ ಸಿನಿಮಾಗಳ ಭಾಗವಾಗಿದ್ದಾರೆ. ಚಿತ್ರರಂಗಕ್ಕೆ ಕಾಲಿಟ್ಟು 13 ವರ್ಷಗಳ ಬಳಿಕ ಇದೀಗ ತೆಲುಗು ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ ಮಾಳವಿಕಾ ಮೋಹನನ್. ಪ್ರಶಾಂತ್ ನೀಲ್ ಸಿನಿಮಾನಲ್ಲಿ ನಟಿಸಬೇಕಿದ್ದ ನಟಿಗೆ ಅದೃಷ್ಟ ಕೈಕೊಟ್ಟಿತಾದರೂ ಬಳಿಕ ಅದೃಷ್ಟ ಕೈಹಿಡಿದಿದೆ. ದಕ್ಷಿಣ ಭಾರತ ಚಿತ್ರರಂಗದಲ್ಲಿ ಸಾಕಷ್ಟು ಉತ್ತಮ ನಟಿಯರಿದ್ದಾರೆ. ಬಾಲಿವುಡ್‌ನಲ್ಲಿ ಈಗ ಜನಪ್ರಿಯವಾಗಿರುವ ಕೆಲ ಯುವ ಮತ್ತು 'ಸ್ಟಾರ್' ನಟಿಯರಿಗೆ ಹೋಲಿಸಿದರೆ ದಕ್ಷಿಣ ಭಾರತದ ನಟಿಯರು ಬಹಳ ಪ್ರತಿಭಾವಂತರು, ನಟನೆ ಬಲ್ಲವರು ಸಹ. ಬಾಲಿವುಡ್ ನಟಿಯರಂತೆ ಗ್ಲಾಮರ್ ಮತ್ತು ಜೀರೋ ಸೈಜ್, ಬಿಕಿನಿ ದೇಹ ಇಲ್ಲದಿದ್ದರೂ ಪ್ರತಿಭೆಗಂತೂ ಕೊರತೆ ಇಲ್ಲ. ಅಂಥಹಾ ನಟಿಯರಲ್ಲಿ ಮಾಳವಿಕಾ ಮೋಹನನ್ ಸಹ ಒಬ್ಬರು. ಈ ಹಿಂದೆ ಕನ್ನಡದ 'ನಾನು ಮತ್ತು ವರಲಕ್ಷ್ಮಿ' ಸಿನಿಮಾನಲ್ಲಿ ನಟಿಸಿರುವ ಮಾಳವಿಕಾ ಮೋಹನನ್, ಆ ನಂತರ ತಮ್ಮ ಪ್ರತಿಭೆಯಿಂದ ಕೆಲ ದೊಡ್ಡ ಸಿನಿಮಾಗಳ ಭಾಗವಾಗಿದ್ದಾರೆ. ಚಿತ್ರರಂಗಕ್ಕೆ ಕಾಲಿಟ್ಟು 13 ವರ್ಷಗಳ ಬಳಿಕ ಇದೀಗ ತೆಲುಗು ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ ಮಾಳವಿಕಾ ಮೋಹನನ್. ಪ್ರಭಾಸ್ ನಟನೆಯ 'ದಿ ರಾಜಾ ಸಾಬ್' ಸಿನಿಮಾನಲ್ಲಿ ಮಾಳವಿಕಾ ಮೋಹನನ್ ನಾಯಕಿಯಾಗಿ ನಟಿಸಿದ್ದಾರೆ. ಸಿನಿಮಾನಲ್ಲಿ ಮೂವರು ನಾಯಕಿಯರಿದ್ದು, ಅವರಲ್ಲಿ ಭೈರವಿ ಪಾತ್ರದಲ್ಲಿ ಮಾಳವಿಕಾ ನಟಿಸಿದ್ದಾರೆ. ಇದು ಅವರ ಮೊಟ್ಟ ಮೊದಲ ತೆಲುಗು ಸಿನಿಮಾ. ಅಂದಹಾಗೆ ಅವರು ಈ ಹಿಂದೆ ಪ್ರಭಾಸ್ ಸಿನಿಮಾ ಮೂಲಕವೇ ತೆಲುಗು ಚಿತ್ರರಂಗಕ್ಕೆ ಎಂಟ್ರಿ ಕೊಡಬೇಕಿತ್ತು, ಆದರೆ ಅದು ಸಾಧ್ಯವಾಗಲಿಲ್ಲ.

# ತುಳು ಸಿನಿಮಾವನ್ನು ಕೊಂಡಾಡಿದ ಸುನಿಲ್ ಶೆಟ್ಟಿ

ಸುನಿಲ್ ಶೆಟ್ಟಿ ಹಿಂದಿ ಸಿನಿಮಾಗಳಲ್ಲಿ ಮಾತ್ರವೇ ಅಲ್ಲದೆ, ಕೆಲವಾರು ದಕ್ಷಿಣ ಭಾರತದ ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. ಕನ್ನಡಕ್ಕಂತೂ ಸುನಿಲ್ ಶೆಟ್ಟಿ ಹೊಸಬರೇನೂ ಅಲ್ಲ. ಸುದೀಪ್ ಜೊತೆಗೆ 'ಪೈಲ್ವಾನ್' ಸಿನಿಮಾನಲ್ಲಿ ಈಗಾಗಲೇ ನಟಿಸಿದ್ದಾರೆ. ಇತ್ತೀಚೆಗಷ್ಟೆ ಅವರು ತಮ್ಮ ಮಾತೃಭಾಷೆಯಾದ ತುಳುವಿನಲ್ಲಿ ಸಿನಿಮಾ ಒಂದನ್ನು ಮಾಡಿದ್ದು, ಬಾಲಿವುಡ್‌ಗೆ ಸಂಬಂಧಿಸಿದ ವೇದಿಕೆಯೊಂದರಲ್ಲಿ ಈ ಬಗ್ಗೆ ಮಾತನಾಡಿದ್ದು, ಸಿನಿಮಾವನ್ನು ಕೊಂಡಾಡಿದ್ದಾರೆ. ಸುನಿಲ್ ಶೆಟ್ಟಿ, ಬಾಲಿವುಡ್‌ನ ಸ್ಟಾರ್ ನಟರಲ್ಲಿ ಒಬ್ಬರು. ಮಂಗಳೂರು ಮೂಲದವರಾದ ಸುನಿಲ್ ಶೆಟ್ಟಿ ದಶಕಗಳಿಂದಲೂ ಬಾಲಿವುಡ್‌ನಲ್ಲಿ ಸ್ಟಾರ್ ನಟರಾಗಿ ಗುರುತಿಸಿಕೊಂಡಿದ್ದಾರೆ. ಹಲವು ಅತ್ಯುತ್ತಮ ಸಿನಿಮಾಗಳಲ್ಲಿ ನಟಿಸಿರುವ ಸುನಿಲ್ ಶೆಟ್ಟಿ, ಬಾಲಿವುಡ್‌ನಲ್ಲಿ ಬಾಡಿ ಬಿಲ್ಡಿಂಗ್ ಸಂಸ್ಕೃತಿ ಶುರುವಾಗಲು ಕಾರಣರಾದವರಲ್ಲಿ ಒಬ್ಬರು ಸಹ. ಸುನಿಲ್ ಶೆಟ್ಟಿ ಹಿಂದಿ ಸಿನಿಮಾಗಳಲ್ಲಿ ಮಾತ್ರವೇ ಅಲ್ಲದೆ, ಕೆಲವಾರು ದಕ್ಷಿಣ ಭಾರತದ ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. ಕನ್ನಡಕ್ಕಂತೂ ಸುನಿಲ್ ಶೆಟ್ಟಿ ಹೊಸಬರೇನೂ ಅಲ್ಲ. ಸುದೀಪ್ ಜೊತೆಗೆ 'ಪೈಲ್ವಾನ್' ಸಿನಿಮಾನಲ್ಲಿ ಈಗಾಗಲೇ ನಟಿಸಿದ್ದಾರೆ.

ಇತ್ತೀಚೆಗಷ್ಟೆ ಅವರು ತಮ್ಮ ಮಾತೃಭಾಷೆಯಾದ ತುಳುವಿನಲ್ಲಿ ಸಿನಿಮಾ ಒಂದನ್ನು ಮಾಡಿದ್ದು, ಬಾಲಿವುಡ್‌ಗೆ ಸಂಬಂಧಿಸಿದ ವೇದಿಕೆಯೊಂದರಲ್ಲಿ ಈ ಬಗ್ಗೆ ಮಾತನಾಡಿದ್ದು, ಸಿನಿಮಾವನ್ನು ಕೊಂಡಾಡಿದ್ದಾರೆ. ಹಲವು ಸೆಲೆಬ್ರಿಟಿಗಳು, ರಾಜಕಾರಣಿಗಳು, ಕ್ರೀಡಾಪಟುಗಳ ಸಂದರ್ಶನ ಮಾಡುವ, ಹಿಂದಿಯ ಜನಪ್ರಿಯ ಸಂದರ್ಶನದ ಶೋ ಆಗಿರುವ 'ಲಲ್ಲನ್ ಟಾಪ್'ನಲ್ಲಿ ಸುನಿಲ್ ಶೆಟ್ಟಿ ಭಾಗವಹಿಸಿದ್ದರು.



# ಬಿಗ್ ಬಾಸ್: ಈ ಮಹಿಳಾ ಸ್ಪರ್ಧಿಗೆ 150 ಬಾಡಿಗಾರ್ಡ್ಸ್ ಬಯಲಾಯ್ತು ಅಸಲಿ ವಿಷಯ

ಇವರು ಫ್ಯಾಕ್ಟರಿ ಹೊಂದಿದ್ದಾರೆ. ನೂರಾರು ಮಂದಿಗೆ ಕೆಲಸ ನೀಡಿದ್ದಾರೆ. ಸೋಶಿಯಲ್ ಮೀಡಿಯಾದಲ್ಲೂ ಇವರು ಫೇಮಸ್. ಇವರಿಗೆ ಬರೋಬ್ಬರಿ 150 ಮಂದಿ ಬಾಡಿಗಾರ್ಡ್ಸ್ ಇದ್ದಾರೆ ಎಂದು ಸುದ್ದಿ ಹಬ್ಬಿತ್ತು. ಆ ವದಂತಿಗೆ ಈಗ ಸ್ಪಷ್ಟನೆ ನೀಡಲಾಗಿದೆ. ಅಂದಹಾಗೆ, ಇದು ತಾನ್ಯಾ ಮಿತ್ತಲ್ ಕುರಿತಾದ ಸುದ್ದಿ. ತಮ್ಮ ಬಗ್ಗೆ ಹಬ್ಬಿರುವ ಅಂತೆ-ಕಂತೆಗಳ ಬಗ್ಗೆ ತಾನ್ಯಾ ಮಾತಾಡಿದ್ದಾರೆ. ಉದ್ಯಮಿ ತಾನ್ಯಾ ಮಿತ್ತಲ್ ಅವರು 'ಬಿಗ್ ಬಾಸ್ ಹಿಂದಿ 19' ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಿದರು. ಕಳೆದ ಡಿಸೆಂಬರ್ 7ರಂದು ಫಿನಾಲೆ ನಡೆದಿತ್ತು. ತಾನ್ಯಾ ಮಿತ್ತಲ್ ಅವರು ಫಿನಾಲೆ ತನಕ ಕಠಿಣ ಪೈಪೋಟಿ ನೀಡಿದ್ದರು. 3ನೇ ರನ್ನರ್ ಅಪ್ ಸ್ಥಾನ ಅವರಿಗೆ ಸಿಕ್ಕಿತು. ಬಿಗ್ ಬಾಸ್ ಮನೆಯೊಳಗೆ ಇದ್ದಾಗ ತಾನ್ಯಾ ಮಿತ್ತಲ್ ಅವರು ತಮ್ಮ ಶ್ರೀಮಂತಿಕೆ ಬಗ್ಗೆ ಹೇಳಿಕೊಂಡಿದ್ದರು. ನಿಜಕ್ಕೂ ತಾನ್ಯಾ ಬಳಿ ಅಷ್ಟೆಲ್ಲ ದುಡ್ಡು ಇದೆಯಾ ಎಂಬ ಅನುಮಾನ ಕೆಲವರಿಗೆ ಮೂಡಿತ್ತು. ತಾನ್ಯಾ ಅವರು 150 ಬಾಡಿಗಾರ್ಡ್ಸ್ ಇಟ್ಟುಕೊಂಡಿದ್ದಾರೆ ಎಂಬ ಸುದ್ದಿ ಎಲ್ಲಾ ಕಡೆ ಹರಡಿತ್ತು. ಅದಕ್ಕೆ ಈಗ ಸ್ವತಃ ತಾನ್ಯಾ ಅವರು ಉತ್ತರ ನೀಡಿದ್ದಾರೆ. ತಾನ್ಯಾ ಮಿತ್ತಲ್ ಅವರು ಸಖತ್ ಶ್ರೀಮಂತೆ ಎಂಬುದು ನಿಜ. ಅದಕ್ಕೆ ಸಾಕ್ಷಿಯಾಗಿ ಅವರು ತಮ್ಮ ಫ್ಯಾಕ್ಟರಿಯನ್ನು ತೋರಿಸಿದ್ದಾರೆ. 'ನ್ಯೂಸ್ ಪಿಂಚ್' ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಇದನ್ನು ತೋರಿಸಿದ್ದಾರೆ.

ಈ ವೇಳೆ ಅವರು ಹಲವು ಅಂತೆ-ಕಂತೆಗಳಿಗೆ ಸ್ಪಷ್ಟನೆ ನೀಡಿದ್ದಾರೆ. ತಮಗೆ 150 ಬಾಡಿಗಾರ್ಡ್ಸ್ ಇರುವುದು ನಿಜವಲ್ಲ ಎಂದು ತಾನ್ಯಾ ಮಿತ್ತಲ್ ಹೇಳಿದ್ದಾರೆ. 'ಆ ರೀತಿ ನಾನು ಹೇಳಿಯೇ ಇಲ್ಲ. 150 ಬಾಡಿಗಾರ್ಡ್ಸ್ ಇದ್ದಾರೆ ಅಂತ ನಾನು ಹೇಳಿರುವ ಒಂದೇ ಒಂದು ವಿಡಿಯೋ ಕೂಡ ಇಲ್ಲ. ಇವೆಲ್ಲ ತಂತಾನೆ ಹುಟ್ಟಿಕೊಂಡ ಗಾಸಿಪ್. ಜೀಶಾನ್ ತಮಾಷೆ ಮಾಡುತ್ತಿದ್ದ. ನನಗೆ 150 ಮಂದಿ ಕೆಲಸದವರು ಇದ್ದಾರೆ ಅಂತ ನಾನು ಹೇಳಿದ್ದೆ. ಆದರೆ ಅವನು 150 ಬಾಡಿಗಾರ್ಡ್ಸ್ ಅಂತ ತಿರುಚಿ ಹೇಳಿರಬಹುದು' ಎಂದಿದ್ದಾರೆ ತಾನ್ಯಾ ಮಿತ್ತಲ್. ತಾನ್ಯಾ ಮಿತ್ತಲ್ ಅವರು ಶ್ರೀಮಂತ ಉದ್ಯಮಿ ಆದ ಕಾರಣ ಅವರು ಬಾಡಿಗಾರ್ಡ್ಸ್ ಇಟ್ಟುಕೊಂಡಿರುವುದು ನಿಜ. ಅನೇಕ ವರ್ಷಗಳಿಂದ ಅವರಿಗಾಗಿ ಬಾಡಿಗಾರ್ಡ್ಸ್ ಕೆಲಸ ಮಾಡುತ್ತಾ ಬಂದಿದ್ದಾರೆ. ಆದರೆ ನಿಖರವಾಗಿ ಎಷ್ಟು ಮಂದಿ ಬಾಡಿಗಾರ್ಡ್ಸ್ ಇದ್ದಾರೆ ಎಂಬುದನ್ನು ಅವರು ಹೇಳಿಲ್ಲ. ಇಷ್ಟು ದಿನ ಹರಿದಾಡಿದ್ದ ಗಾಸಿಪ್‌ಗಳಿಗೆ ಅವರು ತೆರೆ ಎಳೆದಿದ್ದಾರೆ.

**ತಂತಾನೆ ಹುಟ್ಟಿಕೊಂಡ ಗಾಸಿಪ್**



# ಚರಿತ್ರೆ ಸೃಷ್ಟಿಸಲು ವಿರಾಟ್ ರೆಡಿ!

2025 ರ ವರ್ಷವು ಭಾರತ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ತುಂಬಾ ವಿಶೇಷವಾಗಿತ್ತು. ಅವರು ಇನ್ನೂ ಸಾಧಿಸದ ಮೈಲಿಗಲ್ಲುಗಳನ್ನು ಸಾಧಿಸಿದರು. ಆದರೆ ಅವರ ವೃತ್ತಿಜೀವನವು ಪ್ರಶ್ನೆಗಳಿಂದ ತುಂಬಿತ್ತು. ಅವರ ವೃತ್ತಿಜೀವನ ಮುಗಿದಿದೆ ಎಂದು ಘೋಷಿಸಿದ ವರದಿ ಸೇರಿದಂತೆ ಅವರ ಭವಿಷ್ಯದ ಬಗ್ಗೆ ಹಲವಾರು ವರದಿಗಳು ಹೊರಬಂದವು. ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಬೇಕಾಯಿತು. ಆದರೆ ಅವರು ಏಕದಿನ ಪಂದ್ಯಗಳಲ್ಲಿ ತಮ್ಮ ನೆಲೆಯನ್ನು ಉಳಿಸಿಕೊಂಡಿದ್ದಾರೆ. 2026 ರಲ್ಲಿ, ಕೊಹ್ಲಿ ಮೂರು ಪ್ರಮುಖ ಮೈಲಿಗಲ್ಲುಗಳನ್ನು ಸಾಧಿಸುವ ಗುರಿಯನ್ನು ಹೊಂದಿದ್ದಾರೆ.

ಏಕದಿನ ಕ್ರಿಕೆಟ್ ಜೊತೆಗೆ, ವಿರಾಟ್ ಕೊಹ್ಲಿ ಐಪಿಎಲ್‌ನಲ್ಲೂ ಆಡುತ್ತಾರೆ. ಕಳೆದ ವರ್ಷ ವಿರಾಟ್ ಕೊಹ್ಲಿ ಅವರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲ ಬಾರಿಗೆ ಐಪಿಎಲ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಈ ವರ್ಷ, ಅವರು ತಮ್ಮ ತಂಡವನ್ನು ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡುವತ್ತ ಗಮನಹರಿಸಲಿದ್ದಾರೆ. ಕೊಹ್ಲಿ ಗಮನಹರಿಸುವ ಮೂರು ಪ್ರಮುಖ ಕಾರ್ಯಗಳ ಬಗ್ಗೆ ಇಲ್ಲಿದೆ ಮಾಹಿತಿ.

**ಐಪಿಎಲ್‌ನಲ್ಲಿ 9000 ರನ್‌ಗಳು:** ವಿರಾಟ್ ಕೊಹ್ಲಿ ತಮ್ಮ ತಂಡದ ಐಪಿಎಲ್ ಪ್ರಶಸ್ತಿಯನ್ನು ಉಳಿಸಿಕೊಳ್ಳುವತ್ತ ಗಮನಹರಿಸಲಿದ್ದಾರೆ. ಕೊಹ್ಲಿಯ ಬ್ಯಾಟಿಂಗ್ ಪ್ರದರ್ಶನ ಇದಕ್ಕೆ ನಿರ್ಣಾಯಕವಾಗಿದೆ. ಈ ಆವೃತ್ತಿಯಲ್ಲಿ ಕೊಹ್ಲಿ ಐಪಿಎಲ್‌ನಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಬಹುದು. ಅವರು ಈ ಲೀಗ್‌ನಲ್ಲಿ 9000 ರನ್ ಗಳಿಸಿದ ಮೊದಲ ಆಟಗಾರನಾಗಬಹುದು. ಕೊಹ್ಲಿಗೆ ಇದಕ್ಕಾಗಿ 339 ರನ್‌ಗಳು ಬೇಕಾಗಿದೆ. ಅವರು ಪ್ರಸ್ತುತ 259 ಇನ್ನಿಂಗ್ಸ್‌ಗಳಲ್ಲಿ 8661 ರನ್‌ಗಳನ್ನು ಗಳಿಸಿದ್ದಾರೆ. ಅವರು ಐಪಿಎಲ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ.

ರೋಹಿತ್ ಶರ್ಮಾ ಅವರ ನಂತರ ಎರಡನೇ ಸ್ಥಾನದಲ್ಲಿದ್ದಾರೆ. ಆದರೆ ರೋಹಿತ್ ತುಂಬಾ ಹಿಂದುಳಿದಿದ್ದಾರೆ. ಅವರು 267 ಇನ್ನಿಂಗ್ಸ್‌ಗಳಲ್ಲಿ 7046 ರನ್‌ಗಳನ್ನು ಗಳಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಕೊಹ್ಲಿ ಪ್ರತಿ ಆವೃತ್ತಿಯಲ್ಲಿ 600 ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ್ದಾರೆ. ಹೀಗಾಗು ಕೊಹ್ಲಿ ಈ ಬಾರಿ ಈ ದಾಖಲೆಯನ್ನು ಮೀರುವ ಸಾಧ್ಯತೆಯಿದೆ.

**15,000 ಏಕದಿನ ರನ್‌ಗಳ ಮೇಲೆ ಕಣ್ಣು:** 2024 ರಲ್ಲಿ ಟಿ 20 ವಿಶ್ವಕಪ್ ಗೆದ್ದ ನಂತರ ಈ ಸ್ವರೂಪದಿಂದ ನಿವೃತ್ತರಾಗಿರುವ ವಿರಾಟ್ ಕೊಹ್ಲಿ, ಕಳೆದ ವರ್ಷ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದರು. ಈಗ ಅವರು ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಆಡುತ್ತಿದ್ದಾರೆ. ಕೊಹ್ಲಿ ಈ ಸ್ವರೂಪದಲ್ಲಿ 15,000 ರನ್‌ಗಳನ್ನು ಪೂರ್ಣಗೊಳಿಸುವ ಸಮೀಪದಲ್ಲಿದ್ದಾರೆ. ಅವರು ಹಾಗೆ ಮಾಡಿದರೆ, ಈ ಮೈಲಿಗಲ್ಲು ತಲುಪಿದ ವಿಶ್ವದ ಎರಡನೇ ಬ್ಯಾಟರ್ ಆಗಲಿದ್ದಾರೆ.

ಸಚಿನ್ ತೆಂಡೂಲ್ಕರ್ ಅಗ್ರಸ್ಥಾನದಲ್ಲಿದ್ದಾರೆ. ಕೊಹ್ಲಿ ಪ್ರಸ್ತುತ 14,557 ರನ್‌ಗಳನ್ನು ಗಳಿಸಿದ್ದಾರೆ. 15,000 ರನ್‌ಗಳ ಗಡಿಯನ್ನು ತಲುಪಲು 443 ರನ್‌ಗಳ ಅಗತ್ಯವಿದೆ. ಈ ದಾಖಲೆಯನ್ನ ವಿರಾಟ್ ಕೊಹ್ಲಿ ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಮಾಡಬಹುದು.

ಈ ವರ್ಷ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರನಾಗುವ ಸಾಧ್ಯತೆ ಇದೆ. ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯ ಮೊದಲ ಪಂದ್ಯದಲ್ಲೇ ಕೊಹ್ಲಿ ಈ ಸಾಧನೆ ಮಾಡಬಹುದು. ಕೊಹ್ಲಿ ಮೂರು ಸ್ವರೂಪಗಳಲ್ಲಿ ಒಟ್ಟು 27,975 ರನ್ ಗಳಿಸಿದ್ದಾರೆ. ಕೊಹ್ಲಿ ಇನ್ನೂ 42 ರನ್ ಗಳಿಸಿದರೆ, 28,016 ರನ್ ಗಳಿಸಿರುವ ಕುಮಾರ್ ಸಂಗಕ್ಕಾರ ಅವರನ್ನು ಎರಡನೇ ಸ್ಥಾನದಿಂದ ಕೆಳಗಿಳಿಸಲಿದ್ದಾರೆ.

**ಮೂರು ಪ್ರಮುಖ ದಾಖಲೆಗಳ ಮೇಲೆ ಕಣ್ಣು!**



# 6 ಪಂದ್ಯಗಳ ಸರಣಿಗಾಗಿ ಬಾಂಗ್ಲಾ ಪ್ರವಾಸ ಮಾಡಲಿದೆ ಭಾರತ

ಬಾಂಗ್ಲಾದೇಶದ ಸ್ಟಾರ್ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಐಪಿಎಲ್‌ನಲ್ಲಿ ಆಡಲು ಅನುಮತಿ ನೀಡಿರುವುದಕ್ಕೆ ಭಾರತದಲ್ಲಿ ಅಸಾಮಾಧಾನ ಸ್ಫೋಟಗೊಂಡಿದೆ. ಬಾಂಗ್ಲಾ ಆಟಗಾರನನ್ನು 9 ಕೋಟಿ ರೂ,ಗೆ ಖರೀದಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೂ ಜನ ಛೀಮಾರಿ ಹಾಕುತ್ತಿದ್ದಾರೆ. ಇದೆಲ್ಲದರ ನಡುವೆ ಬಿಸಿಸಿಐ ಅಚ್ಚರಿಯ ನಿರ್ಧಾರವೊಂದನ್ನು ತೆಗೆದುಕೊಂಡಿದೆ. ಅದೇನೆಂದರೆ, ಏಕದಿನ ಹಾಗೂ ಟಿ20 ಸರಣಿಗಾಗಿ ಟೀಂ ಇಂಡಿಯಾ, ಬಾಂಗ್ಲಾದೇಶ ಪ್ರವಾಸವನ್ನು ಮಾಡಲಿದೆ. ಈ ಪ್ರವಾಸದ ವೇಳಾಪಟ್ಟಿಯನ್ನು ಇಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಬಿಡುಗಡೆ ಮಾಡಿದೆ.



ವಾಸ್ತವವಾಗಿ ಬಾಂಗ್ಲಾದೇಶದಲ್ಲಿನ ರಾಜಕೀಯ ಅಸ್ಥಿರತೆ ಮತ್ತು ಹಿಂಸಾಚಾರದಿಂದಾಗಿ ಬಿಸಿಸಿಐ, ಈ ಪ್ರವಾಸವನ್ನು ಮುಂದೂಡಿತ್ತು. ಇದೀಗ ಈ ಪ್ರವಾಸದ ಬಗ್ಗೆ ಖಚಿತ ಮಾಹಿತಿ ನೀಡಿರುವ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಒಟ್ಟು 6 ಪಂದ್ಯಗಳ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅದರಂತೆ ಭಾರತದ ಬಾಂಗ್ಲಾದೇಶ ಪ್ರವಾಸ ಏಕದಿನ ಸರಣಿಯೊಂದಿಗೆ ಆರಂಭವಾಗಲಿದೆ. ಹಾಗೆಯೇ ಟಿ20 ಸರಣಿಯೊಂದಿಗೆ ಅಂತ್ಯವಾಗಲಿದೆ.

**ಪ್ರವಾಸದ ವಿವರ ಹೀಗಿದೆ:** ಆದಾಗ್ಯೂ, ಟೀಂ ಇಂಡಿಯಾದ ಈ ಪ್ರವಾಸಕ್ಕೆ ಇನ್ನು ಸಾಕಷ್ಟು ಸಮಯ ಉಳಿದಿದೆ. ಉಭಯ ತಂಡಗಳು ಸೆಪ್ಟೆಂಬರ್ ತಿಂಗಳಲ್ಲಿ ಮುಖಾಮುಖಿಯಾಗಲಿವೆ. ವೇಳಾಪಟ್ಟಿಯ ಪ್ರಕಾರ ಎರಡು ತಂಡಗಳ ನಡುವೆ ಮೊದಲು ಏಕದಿನ ಸರಣಿ ನಡೆಯಲಿದ್ದು, ಸರಣಿಯ ಮೊದಲ ಪಂದ್ಯ ಸೆಪ್ಟೆಂಬರ್ 1 ರಂದು ನಡೆಯಲಿದೆ. ಆ ಬಳಿಕ ಎರಡನೇ ಪಂದ್ಯ ಸೆಪ್ಟೆಂಬರ್ 3 ಹಾಗೂ ಮೂರನೇ ಪಂದ್ಯ ಸೆಪ್ಟೆಂಬರ್ 6 ರಂದು ನಡೆಯಲಿದೆ. ಏಕದಿನ ಸರಣಿಯ ಬಳಿಕ ಮೂರು ಪಂದ್ಯಗಳ ಟಿ20 ಸರಣಿ ನಡೆಯಲಿದ್ದು, ಪಂದ್ಯಗಳು ಸೆಪ್ಟೆಂಬರ್ 9, 12 ಮತ್ತು 13 ರಂದು ನಡೆಯಲಿವೆ.

**ಸರಣಿ ಸೋತಿದ್ದ ಟೀಂ ಇಂಡಿಯಾ:** ಭಾರತ ತಂಡವು ಕೊನೆಯ ಬಾರಿಗೆ 2022-23 ರಲ್ಲಿ ಬಾಂಗ್ಲಾದೇಶ ಪ್ರವಾಸ ಮಾಡಿತ್ತು, ಅಲ್ಲಿ ಏಕದಿನ ಸರಣಿಯನ್ನು ಸೋತಿತ್ತು. ಬಾಂಗ್ಲಾದೇಶ 2-1 ಅಂತರದಲ್ಲಿ ಸರಣಿಯನ್ನು ಗೆದ್ದುಕೊಂಡಿತು. ಆದಾಗ್ಯೂ, ಬಾಂಗ್ಲಾದೇಶ ನೆಲದಲ್ಲಿ ಭಾರತ ಉತ್ತಮ ದಾಖಲೆಯನ್ನು ಹೊಂದಿದೆ. ಬಾಂಗ್ಲಾದೇಶದಲ್ಲಿ ಭಾರತ ಆಡಿರುವ 25 ಪಂದ್ಯಗಳಲ್ಲಿ 18 ರಲ್ಲಿ ಗೆದ್ದಿದ್ದು, 6 ರಲ್ಲಿ ಸೋತಿದೆ ಮತ್ತು ಒಂದು ಪಂದ್ಯ ಡ್ರಾದಲ್ಲಿ ಕೊನೆಗೊಂಡಿದೆ.

# ಮುಸ್ತಾಫಿಜುರ್ ಐಪಿಎಲ್‌ನಿಂದ ನಿಷೇಧ?

ಐಪಿಎಲ್ 2026ರ ಮಿನಿ ಹರಾಜಿನಲ್ಲಿ, ಕೋಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಬಾಂಗ್ಲಾದೇಶದ ಸ್ಟಾರ್ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಬರೋಬ್ಬರಿ 9.2 ಕೋಟಿಗೆ ಖರೀದಿಸಿತು. ಈ ಮೂಲಕ ಮುಸ್ತಾಫಿಜುರ್ ರೆಹಮಾನ್ ಐಪಿಎಲ್ ಇತಿಹಾಸದಲ್ಲಿ ಅತ್ಯಂತ ದುಬಾರಿ ಬೆಲೆಗೆ ಮಾರಾಟವಾದ ಬಾಂಗ್ಲಾದೇಶಿ ಆಟಗಾರ ಎನಿಸಿಕೊಂಡಿದ್ದರು. ಆದರೀಗ ಮುಸ್ತಾಫಿಜುರ್ ರೆಹಮಾನ್ ಐಪಿಎಲ್ ಆಡುವ ಬಗ್ಗೆ ದೇಶದಲ್ಲಿ ಆಕ್ರೋಶ ಭುಗಿಲೆದ್ದಿದೆ. ಎರಡೂ ದೇಶಗಳ ನಡುವೆ ಹೆಚ್ಚುತ್ತಿರುವ ರಾಜತಾಂತ್ರಿಕ ಉದ್ವಿಗ್ನತೆಯನ್ನು ಉಲ್ಲೇಖಿಸಿ ಅನೇಕ ಅಭಿಮಾನಿಗಳು ಮತ್ತು ಕೆಲವು ರಾಜಕೀಯ ವ್ಯಕ್ತಿಗಳು ಕೆಕೆಆರ್ ತಂಡವನ್ನು ಟೀಕಿಸುತ್ತಿದ್ದಾರೆ. ಹಾಗೆಯೇ ಮುಸ್ತಾಫಿಜುರ್ ರೆಹಮಾನ್ ಅವರನ್ನು ಐಪಿಎಲ್‌ನಿಂದ ಹೊರಹಾಕಬೇಕು ಎಂದು ಒತ್ತಾಯಿಸಿದ್ದಾರೆ.

**ನಿಷೇಧಿಸುವಂತೆ ಶಿವಸೇನೆ ಆಗ್ರಹ**

ಮುಸ್ತಾಫಿಜುರ್ ರೆಹಮಾನ್ ಅವರನ್ನು ಖರೀದಿಸಿ ತಂಡದಲ್ಲಿ ಆಡಲು ಅವಕಾಶ ನೀಡಿರುವ ಕೆಕೆಆರ್ ತಂಡದ ವಿರುದ್ಧ ಶಿವಸೇನೆ ವಕ್ತಾರ ಆನಂದ್ ದುಬೆ ಹರಿಹಾಯ್ದಿದ್ದು, 'ಸನಾತನ ಮತ್ತು ಶಿವ ಸೈನಿಕನಾಗಿ, ತಾವು ಮತ್ತು ಇತರರು ಈ ಕ್ರಮವನ್ನು ವಿರೋಧ ಮಾಡುತ್ತೇವೆ. ರೆಹಮಾನ್ ಅವರನ್ನು ಐಪಿಎಲ್ ತಂಡದಿಂದ ತೆಗೆದುಹಾಕಿದರೆ ಶಾರುಖ್ ಖಾನ್ ಅವರ ಗೌರವ ಹಾಗೆಯೇ ಉಳಿಯುತ್ತದೆ. ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾದ ಯಾವುದೇ ಕ್ರಮವನ್ನು ಶಿವಸೇನೆ ಪಕ್ಷವು ಅನುಮತಿಸುವುದಿಲ್ಲ. ತಮ್ಮ ಪಕ್ಷವು ಬಾಂಗ್ಲಾದೇಶ ಮತ್ತು ಪಾಕಿಸ್ತಾನವನ್ನು ಶತ್ರುಗಳೆಂದು ಪರಿಗಣಿಸುತ್ತದೆ. ಹೀಗಾಗಿ ಈ ದೇಶದ ಆಟಗಾರರನ್ನು ಸಂಪೂರ್ಣವಾಗಿ ಬಹಿಷ್ಕರಿಸುವವರೆಗೂ ನಾವು ವಿರಮಿಸುವುದಿಲ್ಲ. ದೇಶವಿರೋಧಿಗಳು ಭಾರತಕ್ಕೆ ಪ್ರವೇಶಿಸುವುದನ್ನು ಶಿವಸೇನೆ ವಿರೋಧಿಸುತ್ತದೆ. ಈ ವಿಷಯದಲ್ಲಿ ಪಕ್ಷವನ್ನು ಬೆಂಬಲಿಸುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸುತ್ತದೆ ಎಂದು ದುಬೆ ಹೇಳಿದ್ದಾರೆ.

**ಮುಸ್ತಾಫಿಜುರ್ ಐಪಿಎಲ್ ಆಡ್ತಾರಾ:** ಆಗಸ್ಟ್ 2024 ರಲ್ಲಿ ಶೇಖ್ ಹಸೀನಾ ಸರ್ಕಾರದ ಪತನದ ನಂತರ ಬಾಂಗ್ಲಾದೇಶದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಹಿಂಸಾತ್ಮಕ ಘಟನೆಗಳು ಹೆಚ್ಚಾಗಿವೆ. ಭಾರತ ಸರ್ಕಾರದ ಸೂಚನೆಗಳನ್ನು ಅನುಸರಿಸಿ, ಬಿಸಿಸಿಐ ಈ ವರ್ಷ ಟೀಂ ಇಂಡಿಯಾದ ಬಾಂಗ್ಲಾದೇಶ ಪ್ರವಾಸವನ್ನು ಮುಂದೂಡಿದೆ.



**ಸ್ಪಷ್ಟನೆ ನೀಡಿದ ಬಿಸಿಸಿಐ**

# ಅವರಿಗೊಂದು ನ್ಯಾಯ, ನನಗೊಂದು ನ್ಯಾಯ

**ನಿವೃತ್ತಿ ಘೋಷಿಸಿ ಸಿಡಿದ ಉಸ್ಮಾನ್ ಖವಾಜಾ**

ಹೊಸ ವರ್ಷದ ಮೊದಲ ದಿನವೇ ಕ್ರಿಕೆಟ್ ಲೋಕಕ್ಕೆ ದಿಗ್ಗಜ ಆಟಗಾರನೊಬ್ಬ ವಿದಾಯ ಹೇಳಿದ್ದಾರೆ. ಆಸ್ಟ್ರೇಲಿಯಾ ಟೆಸ್ಟ್ ತಂಡದ ಆರಂಭಿಕ ಆಟಗಾರ ಉಸ್ಮಾನ್ ಖವಾಜಾ ನಿವೃತ್ತಿ ಘೋಷಿಸಿದ್ದಾರೆ. ವಾಸ್ತವವಾಗಿ ಖವಾಜಾ ನಿವೃತ್ತಿಯ ಬಗ್ಗೆ ಬಹಳ ದಿನಗಳಿಂದಲೂ ವರದಿಗಳು ಹರಿದಾಡುತ್ತಿದ್ದವು. ಅದರಂತೆ ಈಗ ಖವಾಜಾ ಕ್ರಿಕೆಟ್ ಬದುಕಿನಿಂದ ದೂರ ಸರಿಯಲು ನಿರ್ಧರಿಸಿದ್ದಾರೆ. ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ನಡುವೆ ನಡೆಯುತ್ತಿರುವ ಆಶಸ್ ಸರಣಿಯ ನಡುವೆ ಖವಾಜಾ ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಇದರ ಜೊತೆಗೆ ಮಾಜಿನ ಕ್ರಿಕೆಟಿಗರ ವಿರುದ್ಧ ಗಡುಗಿರುವ ಖವಾಜಾ ಜನಾಂಗೀಯ ನಿಂದನೆಯಂತಹ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ಆಶಸ್ ಸರಣಿಯ ಐದನೇ ಮತ್ತು ಅಂತಿಮ ಟೆಸ್ಟ್ ಪಂದ್ಯವು ಜನವರಿ 4 ರ ಭಾನುವಾರದಂದು ಸಿಡ್ನಿಯಲ್ಲಿ ಪ್ರಾರಂಭವಾಗಲಿದೆ. ಈ ಟೆಸ್ಟ್ ಆರಂಭಕ್ಕೆ ಇನ್ನು 2 ದಿನ ಬಾಕಿ ಇರುವಾಗ ಈ ನಿರ್ಧಾರ ಪ್ರಕಟಿಸಿರುವ ಖವಾಜಾ, ಪತ್ರಿಕಾಗೋಷ್ಠಿಯಲ್ಲಿ ತಮ್ಮ ನಿವೃತ್ತಿಯನ್ನು ಘೋಷಿಸಿದ್ದಾರೆ. 2011 ರಲ್ಲಿ ಖವಾಜಾ ಯಾವ ಸ್ಥಳದಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ್ದರೋ ಅದೇ ಸ್ಥಳದಲ್ಲಿ ತಮ್ಮ ಟೆಸ್ಟ್ ವೃತ್ತಿಜೀವನವನ್ನು ಕೊನೆಗೊಳಿಸುತ್ತಿದ್ದಾರೆ.

**ಗಂಭೀರ ಆರೋಪ ಮಾಡಿದ ಖವಾಜಾ:** ನಿವೃತ್ತಿ ಘೋಷಣೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಖವಾಜಾ, ಆಸ್ಟ್ರೇಲಿಯಾದ ಮಾಧ್ಯಮ ಮತ್ತು ಮಾಜಿ ಕ್ರಿಕೆಟಿಗರ ವಿರುದ್ಧ ವಾಗ್ದಾಳಿ ನಡೆಸಿದರು. 'ನನ್ನ ಇಡೀ ವೃತ್ತಿಜೀವನದಂತೆಯೇ, ಈ ಸರಣಿಯ ಸಮಯದಲ್ಲಿಯೂ ನಾನು ಜನಾಂಗೀಯ ನಿಂದನೆಗೆ ಒಳಗಾಗಬೇಕಾಯಿತು. ನನಗೆ ಬೆನ್ನು ನೋವು ಇತ್ತು (ಪರ್ತ್ ಟೆಸ್ಟ್ ಸಮಯದಲ್ಲಿ), ಅದು ನನ್ನ ನಿಯಂತ್ರಣಕ್ಕೆ ಮೀರಿತ್ತು. ಆದರೆ ಮಾಧ್ಯಮ ಮತ್ತು ಮಾಜಿ ಕ್ರಿಕೆಟಿಗರು ನನ್ನ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡಿದರು. ಟೆಸ್ಟ್ ಸರಣಿಗೆ ತಯಾರಿ ನಡೆಸುವುದನ್ನು ಬಿಟ್ಟು ಗಾಲ್ಫ್ ಆಡಲು ಹೋಗಿ ಗಾಯಗೊಂಡಿದ್ದಾರೆ ಎಂದು ನನ್ನ ಮೇಲೆ ಆರೋಪ ಹೊರಿಸಿದರು. ಇದು ಒಂದೆರಡು ದಿನದ ಕಥೆಯಾಗಿದ್ದರೆ ಸರಿ ಎನ್ನಬಹುದಿತ್ತು. ಆದರೆ ಟೆಸ್ಟ್ ಪಂದ್ಯ ಮುಗಿಯುವವರೆಗೂ ನನ್ನ ಮೇಲೆ ವಾಗ್ದಾಳಿ ನಡೆಸಿದರು. ಆದರೆ ನನ್ನಂತೆಯೇ ಟೆಸ್ಟ್‌ನ ಹಿಂದಿನ ದಿನ ಗಾಲ್ಫ್ ಆಡಿದ ಮತ್ತು ಗಾಯಗೊಂಡ ಹಲವಾರು ಆಟಗಾರರಿದ್ದಾರೆ. ಆದರೆ ಅವರ ಬಗ್ಗೆ ಯಾರೂ ಏನನ್ನೂ ಮಾತನಾಡುವುದಿಲ್ಲ. ಪಂದ್ಯದ ಹಿಂದಿನ ರಾತ್ರಿ 15 ಬಿಯರ್ ಕುಡಿದು ಗಾಯಗೊಂಡ ಆಟಗಾರರೂ ಇದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966